ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ




ಮಂಜುನಾಥ ಪುಲ್ಕರ್ ಇನ್ನಿಲ್ಲ

ಸಂಪುಟ 13 | ಸಂಚಿಕೆ 13 | ಮಾರ್ಚ್ 25–31, 2019 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com

ಭಾರತಕ್ಕೆ ಅಮೆರಿಕಾದ ಆಣತಿ!





'ಚರಿತ್ರೆಯ ಅಧ್ಯಯನಕ್ಕೆ ವಿಜ್ಞಾನ–ತಂತ್ರಜ್ಞಾನ ಅಗತ್ಯ'





ಧಾರವಾಡದ ಘೋರ ದುರಂತ



ಬ್ರೆಜಿಲ್ : ಮಹಿಳೆಯರಿಂದ ಭೂಮಿ ವಶ

ಬಿಜೆಪಿ ಮತ್ತು ಅವರ ಮಿತ್ರರನ್ನು ಮತ್ತು ಅವರ ದಲಿತ-ವಿರೋಧಿ ಅಜೆಂಡಾವನ್ನು ಸೋಲಿಸಿ-ಡಿಎಸ್‌ಎಂಎಂ

ಮಾರ್ಚ್ 5ರಂದು ದಿಲ್ಲಿಯಲ್ಲಿ ನಡೆದ 'ದಲಿತ ಶೋಷಣ ಮುಕ್ತಿಮಂಚ್'(ಡಿಎಸ್‌ಎಂಎಂ) ಪದಾಧಿಕಾರಿಗಳ ಸಭೆ 'ಬಿಜೆಪಿ ಮತ್ತು ಅವರ ಮಿತ್ರರನ್ನು ಮತ್ತು ಅವರ ದಲಿತ-ವಿರೋಧಿ ಅಜೆಂಡಾವನ್ನು ಸೋಲಿಸಿ' ಎಂಬ ಕರೆಯನ್ನು ನೀಡಿದೆ. ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಎನ್‌ಡಿಎ ಯನ್ನು ಸೋಲಿಸಲು ಡಿಎಸ್‌ಎಂಎಂನ ಎಲ್ಲ ಘಟಕಗಳು ಸಕ್ರಿಯವಾಗಿ ಪ್ರಚಾರ ಮಾಡುತ್ತವೆ ಎಂದು ಈ ಸಭೆ ಹೇಳಿದೆ.

- ಎನ್‌ಡಿಎ ಧೋರಣೆಗಳಿಂದಾಗಿ ಎಲ್ಲ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ದಲಿತರ ಮೇಲಿನ ಅತ್ಯಾಚಾರಗಳು ಹೆಚ್ಚಿವೆ. ಅವರಿಗೆ ನ್ಯಾಯ ಮತ್ತು ಪರಿಹಾರ ಒದಗಿಸಲು ಸರಕಾರಗಳು ಮಧ್ಯಪ್ರವೇಶಿಸಿಲ್ಲ.
- ದಲಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು, ಪ್ರವೇಶವನ್ನು ನಿರಾಕರಿಸುವ ಧೋರಣೆಗಳನ್ನು ಅನುಸರಿಸಲಾಗುತ್ತಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಅವರೊಂದಿಗೆ ಕೆಟ್ಟದಾಗಿ ವರ್ತಿಸಲಾಗುತ್ತಿದೆ. ಇದರಿಂದಾಗಿ ದಲಿತ ವಿದ್ಯಾರ್ಥಿಗಳ ಆತ್ಮಹತ್ಯೆಗಳು ಗಮನಾರ್ಹವಾಗಿ ಹೆಚ್ಚಿವೆ.
- 2014ರಿಂದ ಎನ್‌ಡಿಎ ಯ ಪ್ರತಿ ಬಜೆಟಿನಲ್ಲೂ ಪರಿಶಿಷ್ಟ ಜಾತಿಗಳು/ಬುಡಕಟ್ಟುಗಳ ಕಲ್ಯಾಣ ಯೋಜನೆಗಳ ಮೇಲಿನ ಖರ್ಚುಗಳನ್ನು ಕಡಿತಗೊಳಿಸಲಾಗುತ್ತಿದೆ.
- ಎಪ್ರಿಲ್ 2 ರ ಬಂದ್‌ನಲ್ಲಿ ಮಧ್ಯಪ್ರದೇಶ, ಉತ್ತರಪ್ರದೇಶ ಮತ್ತು ರಾಜಸ್ಥಾನದಲ್ಲಿ ದಲಿತರ ಮೇಲೆ ಹಲ್ಲೆಗಳು, ಕೊಲೆಗಳು ನಡೆದಿವೆ, ಸಾವಿರಾರು ಮಂದಿಯನ್ನು ಜೈಲುಗಳಿಗೆ ತಳ್ಳಲಾಗಿದೆ.
- ದೈಹಿಕವಾಗಿ ಗಟಾರಗಳಲ್ಲಿ ಕೆಲಸ ಮಾಡಬೇಕಾದ ಜಾಡಮಾಲಿಗಳ ಮತ್ತು ಇತರ ಸ್ವಚ್ಛಗೊಳಿಸುವ ಕೆಲಸಗಳಲ್ಲಿ ತೊಡಗಿರುವವರ ಸಾವುಗಳ ಸಂಖ್ಯೆ ಆತಂಕಕಾರಿಯಾಗಿ ಹೆಚ್ಚುತ್ತಿದ್ದರೆ, ಇನ್ನೊಂದೆಡೆಯಲ್ಲಿ ಅವರ ಕಲ್ಯಾಣ ಮತ್ತು ಸುರಕ್ಷಿತತೆಗೆ ಬಜೆಟ್ ನೀಡಿಕೆಗಳಲ್ಲಿ ತೀವ್ರ ಕಡಿತಗಳನ್ನು ಮಾಡಲಾಗುತ್ತಿದೆ. ಕುಂಭಮೇಳದಲ್ಲಿ ಐವರು ಸ್ವಚ್ಛತಾ ಕೆಲಸಗಾರರ ಪಾದ ತೊಳೆಯುವ ದೊಡ್ಡ ಪ್ರದರ್ಶನ ನಡೆಸಿದ ಪ್ರಧಾನ ಮಂತ್ರಿಗಳು ಅವರ ಕೆಲಸದ ಮತ್ತು ಬದುಕಿನ ಪರಿಸ್ಥಿತಿಗಳನ್ನು ಉತ್ತಮ ಪಡಿಸುವ ಬದಲು ಅವು ಮತ್ತಷ್ಟು ಹದಗೆಡುವಂತೆ ಸಕಲ ಕೆಲಸಗಳನ್ನು ಮಾಡಿದ್ದಾರೆ.

ಡಿಎಸ್‌ಎಂಎಂ ಪದಾಧಿಕಾರಿಗಳ ಈ ಸಭೆ ವಿಶ್ವವಿದ್ಯಾಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ಎಸ್‌ಸಿ/ಎಸ್‌ಟಿ/ಒಬಿಸಿ ಮೀಸಲಾತಿಗಳನ್ನು ಸುಮಾರಾಗಿ ಕೊನೆಗೊಳಿಸಿಯೇ ಬಿಡುವಂತಹ ರೋಸ್ಟರಿಂಗ್‌ನ್ನು ಬದಲಾಯಿಸಿರುವ ಉತ್ತರಪ್ರದೇಶ ಹೈಕೋರ್ಟ್ ತೀರ್ಪಿನಿಂದ ಉಂಟಾಗಿರುವ ಅನ್ಯಾಯವನ್ನು ಸರಿಪಡಿಸಲು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಬೇಕು ಎಂದು ಆಗ್ರಹಿಸಿದೆ. ಲೋಕಸಭಾ ಅವಧಿ ಮುಗಿದ ನಂತರ ಕೇಂದ್ರ ಸರಕಾರ ಎರಡು ಸುಗ್ರೀವಾಜ್ಞೆಗಳನ್ನೇನೋ ಹೊರಡಿಸಿದೆ, ಆದರೆ ಶಿಕ್ಷಕ ರಂಗದಲ್ಲಿ ದಲಿತ ವಿಭಾಗಗಳ ಪ್ರವೇಶಕ್ಕೆ ಭಾರೀ ಹೊಡೆತ ನೀಡಿರುವುದನ್ನು ಸರಿಪಡಿಸಲು ಅದು ಸಿದ್ಧವಿಲ್ಲ ಎಂದು ಖೇದ ವ್ಯಕ್ತ ಪಡಿಸಿದೆ.

"ಮರ್ಯಾದಾ ಅಪರಾಧ"ಗಳ ತಡೆಗೆ ಕಾಯ್ದೆಯ ಕರಡು

ವಿವಿಧ ರಾಜ್ಯಗಳಲ್ಲಿ ವಕೀಲರುಗಳ ನೆರವಿನಿಂದ ಸಿದ್ಧಪಡಿಸಿರುವ " ಮರ್ಯಾದಾ ಅಪರಾಧ" ಗಳ ವಿರುದ್ಧ ಕರಡು ಕಾಯ್ದೆಯನ್ನು ಈ ಸಭೆ ಚರ್ಚಿಸಿತು. ಸಭೆಗಳು, ವಿಚಾರ ಸಂಕಿರಣಗಳ ಮೂಲಕ ಈ ಕರಡಿನ ಮೇಲೆ ವ್ಯಾಪಕ ಚರ್ಚೆಗಳನ್ನು ನಡೆಸಲು ಸಭೆ ನಿರ್ಧರಿಸಿತು. ಅವನ್ನು ರಾಜ್ಯ ಸರಕಾರಗಳು ಮತ್ತು ಕೇಂದ್ರ ಸರಕಾರಕ್ಕೂ ಸಲ್ಲಿಸಲಾಗುವುದು. ತಂದೆ ತಾಯಿಯರೇ ತಮ್ಮ ಮಕ್ಕಳ ಮತ್ತು ಅವರ ಪತಿ/ಪತ್ನಿಯರ ಅಮಾನುಷ ಕೊಲೆ ನಡೆಸುವ ಪ್ರಕರಣಗಳು ಆತಂಕಕಾರಿ ರೀತಿಯಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ ಈ ಕಾಯ್ದೆಯನ್ನು ತರುವುದು ಹಿಂದೆಂದಿಗಿಂತಲೂ ಹೆಚ್ಚು ಆವಶ್ಯಕವಾಗಿದೆ, ಇಂತಹ ಅಪರಾಧಗಳ ವಿಶೇಷ ಆಯಾಮಗಳನ್ನು ನಿಭಾಯಿಸಲು ಒಂದು ವಿಶೇಷ ಕಾಯ್ದೆಯೇ ಬೇಕಾಗುತ್ತೆ ಎಂದು ಡಿಎಸ್‌ಎಂಎಂ ಅಭಿಪ್ರಾಯ ಪಟ್ಟಿದೆ.

ಚುನಾವಣಾ ಉದ್ದೇಶಗಳಿಗೆ 'ಚೌಕೀದಾರ' ವೃತ್ತಿಯ ಹೆಸರಿನ ಬಳಕೆ ಕಾನೂನುಬಾಹಿರ, ನ್ಯಾಯಬಾಹಿರ ಮತ್ತು ಅವಮಾನಕಾರಿ

ಇದನ್ನು ತಡೆಯಲು ತುರ್ತಾಗಿ ನಿರ್ದೇಶನ ಹೊರಡಿಸಬೇಕು-ಚುನಾವಣಾ ಆಯೋಗಕ್ಕೆ ಸಿಐಟಿಯು ಮುಖಂಡರ ಪತ್ರ

'ಚೌಕೀದಾರ' ಎಂಬ ಒಂದು ವೃತ್ತಿಯ ಹೆಸರನ್ನು ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರೂ ಸೇರಿದಂತೆ ಪ್ರತಿಷ್ಠಿತ ವ್ಯಕ್ತಿಗಳು ಮತ್ತು ಹಲವು ರಾಜಕೀಯ ಪಕ್ಷಗಳು 17ನೇ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ಕಸಿದುಕೊಂಡಿದ್ದಾರೆ. ಈ ಪದವನ್ನು ಚುನಾವಣಾ ಪ್ರಚಾರದಲ್ಲಿ ಬಳಸದಂತೆ ಮಾದರಿ ನೀತಿ ಸಂಹಿತೆಯ ಅಡಿಯಲ್ಲಿ ನಿರ್ದೇಶನ ನೀಡಬೇಕು ಎಂದು ಸಿಐಟಿಯು ಪರವಾಗಿ ಜೆ.ಎಸ್. ಮಜುಂದಾರ್ ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

'ಚೌಕೀದಾರ' ಎನ್ನುವುದು ಕೇಂದ್ರ ಮತ್ತು ರಾಜ್ಯ ಸರಕಾರಗಳ ಚೌಕೀದಾರಿ ಕಾಯ್ದೆಯ ಅಡಿಯಲ್ಲಿ ಬರುವ ವೃತ್ತಿಯ ಹೆಸರು. ಚೌಕೀದಾರರು ಆರ್ಥಿಕ ಮತ್ತು ಸಾಮಾಜಿಕ ಅನ್ಯಾಯಕ್ಕೆ ಒಳಗಾಗಿರುವವರು, ಉದ್ಯೋಗ ಭದ್ರತೆ, ಕನಿಷ್ಟ ಕೂಲಿ ಮತ್ತು ಸಾಮಾಜಿಕ ಸುರಕ್ಷಿತತೆಯಿಂದ ವಂಚಿತರಾಗಿರುವವರು. ಕೆಲವು ಕಡೆ ಅವರು ಕಾರ್ಮಿಕ ಸಂಘಟನೆಗಳಲ್ಲಿ ಸಂಘಟಿತರಾಗಿದ್ದಾರೆ, ಈ ಸಂಘಟನೆಗಳು 'ಚೌಕೀದಾರರು' ಎಂಬ ವೃತ್ತಿಗೆ ಅನುಗುಣವಾದ ಹೆಸರಿನಲ್ಲಿ ಕಾರ್ಮಿಕ ಸಂಘಗಳ ಕಾಯ್ದೆ, 1926 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟಿರುತ್ತವೆ. ಇವು ದೇಶದ ವಿವಿಧ ಭಾಗಗಳಲ್ಲಿ ಚಳುವಳಿಗಳ ಮೂಲಕವೂ, ಕಾನೂನಾತ್ಮಕವಾಗಿಯೂ ತಮ್ಮ ಬೇಡಿಕೆಗಳ ಈಡೇರಿಕೆಗೆ ಪ್ರಯತ್ನಿಸುತ್ತಿವೆ ಎಂಬ ಸಂಗತಿಯನ್ನು ಮಜುಂದಾರ್ ಅವರು ತಮ್ಮ ಪತ್ರದಲ್ಲಿ ಚುನಾವಣಾ ಆಯೋಗದ ಗಮನಕ್ಕೆ ತಂದಿದ್ದಾರೆ.

ಈಗ 17ನೇ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಿ ಈ ವೃತ್ತಿಯ ಹೆಸರನ್ನು ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರೂ ಸೇರಿದಂತೆ ಪ್ರತಿಷ್ಠಿತ ವ್ಯಕ್ತಿಗಳು ಮತ್ತು ಹಲವು ರಾಜಕೀಯ ಪಕ್ಷಗಳು ಕಸಿದುಕೊಂಡಿದ್ದಾರೆ. ಇದನ್ನು ಚುನಾವಣಾ ಉದ್ದೇಶಗಳಿಗಾಗಿ, ಒಂದೋ 'ಚೌಕೀದಾರಿ' ಒಂದು ಉನ್ನತ ಪ್ರತಿಷ್ಠೆಯ ವೃತ್ತಿಯೆಂದು ಸುಳ್ಳೇ ಬಿಂಬಿಸಲೋ, ಅಥವ ಅದರ ಹೆಸರಲ್ಲಿ ವ್ಯಂಗ್ಯವಾಡುವುದಕ್ಕೋ ಬಳಸಲಾಗುತ್ತಿದೆ.

ರಾಜಕೀಯ ಪಕ್ಷಗಳು ಮತ್ತು ವ್ಯಕ್ತಿಗಳು ಚುನಾವಣಾ ಪ್ರಚಾರಕ್ಕೆ ಈ ರೀತಿ ಒಂದು ವೃತ್ತಿಯ ಹೆಸರನ್ನು ಬಳಸುವುದು ಕಾನೂನುಬಾಹಿರ, ಅನ್ಯಾಯಯುತ, ದಾರಿ ತಪ್ಪಿಸುವ ಮತ್ತು ಅವಮಾನ ಮಾಡುವ ಕ್ರಿಯೆಯಾಗುತ್ತದೆ. ಆದ್ದರಿಂದ, 17ನೇ ಲೋಕಸಭಾ ಚುನಾವಣೆಗಳಲ್ಲಿ 'ಚೌಕೀದಾರ' ಎಂಬ ವೃತ್ತಿಯ ಹೆಸರುಗಳನ್ನು ಬಳಸಬಾರದು ಎಂದು ಮಾದರಿ ನೀತಿ ಸಂಹಿತೆಯ ಅಡಿಯಲ್ಲಿ ತುರ್ತಾಗಿ ಒಂದು ನಿರ್ದೇಶನವನ್ನು ಹೊರಡಿಸಬೇಕು ಎಂದು ಸಿಐಟಿಯು ಮುಖಂಡ ಮಜುಂದಾರ್ ಅವರು ಚುನಾವಣಾ ಆಯೋಗವನ್ನು ಆಗ್ರಹಿಸಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಸಿಪಿಐ(ಎಂ) ಅಭ್ಯರ್ಥಿಗಳು

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಸಿಪಿಐ(ಎಂ) 17ನೇ ಲೋಕಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಲಿರುವ ಸಿಪಿಐ(ಎಂ) ಅಭ್ಯರ್ಥಿಗಳ ಎರಡು ಪಟ್ಟಿಗಳನ್ನು ಪ್ರಕಟಿಸಿದೆ. ಇದರಲ್ಲಿ 17 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಒಟ್ಟು 65 ಅಭ್ಯರ್ಥಿಗಳ ಹೆಸರುಗಳಿವೆ. ಕೇರಳದಿಂದ ಇಬ್ಬರು ಬೆಂಬಲಿತ ಪಕ್ಷೇತರರು ಸೇರಿದಂತೆ 16 ಅಭ್ಯರ್ಥಿಗಳು, ಪಶ್ಚಿಮ ಬಂಗಾಳದಿಂದ 29 ಅಭ್ಯರ್ಥಿಗಳು, ತ್ರಿಪುರ, ಅಸ್ಸಾಂ, ತೆಲಂಗಾಣ, ಆಂದ್ರಪ್ರದೇಶ ಮತ್ತು ತಮಿಳುನಾಡಿನಿಂದ ತಲಾ ಇಬ್ಬರು ಅಭ್ಯರ್ಥಿಗಳು ಹಾಗೂ ಕರ್ನಾಟಕ ಸೇರಿದಂತೆ ಉಳಿದ 9 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರಧೇಶದಿಂದ ತಲಾ ಒಬ್ಬರು ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ. ಮಹಿಳಾ ಅಭ್ಯರ್ಥಿಗಳು ಪಶ್ಚಿಮ ಬಂಗಾಲ-6, ಕೇರಳ-2, ಕರ್ನಾಟಕ-1 ಮತ್ತು ತೆಲಂಗಾಣ-1, ಒಟ್ಟು 10. ಪಶ್ಚಿಮ ಬಂಗಾಲದ ಇನ್ನೂ 4 ಕ್ಷೇತ್ರಗಳ ಬಗ್ಗೆ ಅಂತಿಮ ನಿರ್ಧಾರ ಆಗಬೇಕಾಗಿದೆ.

ಅಸ್ಸಾಂ	
ಕೋಕ್ರಾಜಾರ್ (ಎಸ್.ಟಿ.)	ಬಿರಾಜ್ ದೇಕಾ
ಲಕ್ಕೀಪುರ	ಅಮಿಯಾ ಕುಮಾರ್ ಹಾಂದಿಕ್
ಹರ್ಯಾಣ	
ಹಿಸಾರ್	ಸುಖಬೀರ್ ಸಿಂಗ್
ಹಿಮಾಚಲ ಪ್ರದೇಶ	
ಮಂಡಿ	ದಲೀಪ್ ಕೈಫ್ತ್
ಕೇರಳ	
ಕಾಸರಗೋಡು	ಕೆ.ಪಿ. ಸತೀಶ್ ಚಂದ್ರನ್
ಕಣ್ಣೂರು	ಪಿ.ಕೆ. ಶ್ರೀಮತಿ (ಮಹಿಳೆ)
ವಡಕರ	ಪಿ. ಜಯರಾಜನ್
ಕೋಜೀಕ್ಕೋಡ್	ಎ. ಪ್ರದೀಪ್ ಕುಮಾರ್
ಮಲಪ್ಪುರಂ	ವಿ.ಪಿ. ಶಾನು
ಅಲತ್ತೂರ್ (ಎಸ್.ಸಿ)	ಪಿ.ಕೆ. ಬಿಜು
ಪಾಲಕ್ಕಾಡ್	ಎಂ.ಬಿ. ರಾಜೇಶ್
ಚಾಲಕುಡಿ	ಇನ್ನೊಸೆಂಟ್
ಎರ್ನಾಕುಲಂ	ಪಿ. ರಾಜೀವ್
ಕೊಟ್ಟಾಯಂ	ವಿ.ಎನ್. ವಾಸವನ್
ಆಲಪುಳ	ಎ.ಎಂ. ಆರಿಫ್
ಪಟ್ಟನಂತಿಟ್ಟಾ	ವೀಣಾ ಜಾರ್ಜ್ (ಮಹಿಳೆ)
ಕೊಳ್ಳಂ	ಕೆ.ಎನ್. ಬಾಲಗೋಪಾಲ
ಅಟ್ಟಿಂಗಳ್	ಎ. ಸಂಪತ್
ಇಡುಕ್ಕಿ	ಜಾಯ್ಸ್ ಜಾರ್ಜ್,ಬೆಂಬಲಿತ ಪಕ್ಷೇತರ
ಪೊನ್ನಾನಿ	ಪಿ.ವಿ. ಅನ್ವರ್, ಬೆಂಬಲಿತ ಪಕ್ಷೇತರ
ಮಧ್ಯ ಪ್ರದೇಶ	
ರೇವಾ	ಗಿರಿಜೇಶ್ ಸಿಂಗ್ ಸೆಂಗಾರ್
ಮಹಾರಾಷ್ಟ್ರ	
ದಿಂಡೊರಿ (ಎಸ್.ಟಿ)	ಜೀವಾ ಪಾಂಡು ಗಾವಿತ್
ಒಡಿಶಾ	
ಭುವನೇಶ್ವರ	ಜನಾರ್ಧನ ಪಾಟಿ
ಪಂಜಾಬ್	
ಅನಂದಪುರ ಸಾಹಿಬ್	ರಘುನಾಥ ಸಿಂಗ್
ತಮಿಳುನಾಡು	
ಮಧುರೈ	ಸು. ವೆಂಕಟೇಶನ್
ಕೊಯಂಬತ್ತೂರ್	ಪಿ.ಆರ್. ನಟರಾಜನ್
ತ್ರಿಪುರ	
ತ್ರಿಪುರ ಪೂರ್ವ(ಎಸ್.ಟಿ)	ಜೀತೆಂದ್ರ ಚೌಧರಿ
ತ್ರಿಪುರ ಪಶ್ಚಿಮ	ಶಂಕರ್ ಪ್ರಸಾದ್ ದತ್ತ
ಪಶ್ಚಿಮ ಬಂಗಾಳ	
ಜಲ್‌ಪೈಗುರಿ	ಭಗಿರಥ ರಾಯ್
ರಾಯ್‌ಗಂಜ್	ಮಹಮ್ಮದ್ ಸಲೀಂ
ಮುರ್ಶಿದಾಬಾದ್	ಬದ್ರುದ್ದಾಜಾ ಖಾನ್
ರಾಣಾಘಾಟ್	ರಮಾ ಬಿಸ್ವಾಸ್ (ಮಹಿಳೆ)
ಬಂಗಾವ್ (ಎಸ್.ಸಿ)	ಅಲೋಕೇಶ್ ದಾಸ್
ಡಮ್ ಡಮ್	ನೇಪಾಳದೇಬ್ ಭಟ್ಟಾಚಾರ್ಯ
ಡೈಮಂಡ್ ಹಾರ್ಬರ್	ಡಾ. ಫುವದ್ ಹಲೀಂ
ಜಾಧವಪುರ	ಬಿಕಾಶ್ ರಂಜನ್ ಭಟ್ಟಾಚಾರ್ಯ
ಕೊಲ್ಕತಾ ದಕ್ಷಿಣ	ಡಾ. ನಂದಿನಿ ಮುಖರ್ಜಿ (ಮಹಿಳೆ)
ಉಲುಬೇರಿಯಾ	ಡಾ. ಮಕ್‌ಸುದಾ ಖಾತುನ್ (ಮಹಿಳೆ)
ಹೂಗ್ಲಿ	ಪ್ರದೀಪ್ ಸಾಹಾ
ಅರಂಬಾಗ್	ಶಕ್ತಿ ಮೋಹನ್ ಮಲಿಕ್
ಬಿಷ್ಣುಪುರ್ (ಎಸ್.ಸಿ.)	ಸುನಿಲ್ ಖಾನ್
ಬರ್ಧಮಾನ್ ಪೂರ್ವ (ಎಸ್.ಸಿ)	ಈಶ್ವರ ಚಂದ್ರದಾಸ್
ಬರ್ಧಮಾನ್ ದುರ್ಗಾಪುರ	ಅಭಾಶ್ ರಾಯ ಚೌಧರಿ
ಬೀರಭೂಮ್	ಡಾ.ರೆಝಉಲ್ ಕರೀಂ
ಡಾರ್ಜಿಲಿಂಗ್	ಸಮನ್ ಪಾಠಕ್
ಕೃಷ್ಣನಗರ	ಡಾ॥ ಸಂತನು ಝಾ
ಬ್ಯಾರಕ್‌ಪುರ್	ಗಾರ್ಗಿ ಚಟರ್ಜಿ (ಮಹಿಳೆ)
ಮಥುರಾಪುರ್ (ಎಸ್.ಸಿ)	ಡಾ॥ ಶರತ್ ಹಲ್ದರ್
ಕೋಲ್ಕತ ಉತ್ತರ	ಕನ್ನಿಕ ಬೋಸ್ (ಘೋಷ) (ಮಹಿಳೆ)
ಹೌರಾ	ಸುಮಿತ್ರ ಅಧಿಕಾರಿ
ಶ್ರೀರಾಮಪುರ್	ತೀರ್ಥಂಕರ್ ರಾಯ
ತಮ್ಲುಕ್	ಎಸ್.ಕೆ. ಇಬ್ರಾಹಿಂ ಅಲಿ
ಕಾಂತಿ	ಪಾರಿತೋಷ್ ಪಟ್ನಾಯಕ್
ಝಾರ್‌ಗ್ರಾಮ್ (ಎಸ್.ಟಿ.)	ದೆಬ್ಲಿನಾ ಹೆಂಬ್ರಾಮ್ (ಮಹಿಳೆ)
ಬಂಕುರಾ	ಅಮಿಯ ಪಾತ್ರಾ
ಅಸನ್ಸೋಲ್	ಗೌರಾಂಗ್ ಚಟರ್ಜಿ
ಬೋಲಾಪುರ್ (ಎಸ್.ಟಿ.)	ಡಾ. ರಾಮ್ ಚಂದ್ರ ಡೊಮ್
ಆಂಧ್ರ ಪ್ರದೇಶ	
ಕರ್ನೂಲ್	ಕೆ. ಪ್ರಭಾಕರ ರೆಡ್ಡಿ
ನೆಲ್ಲೂರ್	ಚಂದ್ರ ರಾಜಗೋಪಾಲ
ಜಾರ್ಖಂಡ್	
ರಾಜಮಹಲ್(ಎಸ್.ಟಿ)	ಗೋಪಿನ್ ಸೋರೆನ್
ಕರ್ನಾಟಕ	
ಚಿಕ್ಕಬಳ್ಳಾಪುರ	ಎಸ್. ವರಲಕ್ಷ್ಮಿ (ಮಹಿಳೆ)
ತೆಲಂಗಾಣ	
ನಲ್ಗೊಂಡ	ಮಲ್ಲು ಲಕ್ಷ್ಮಿ (ಮಹಿಳೆ)
ಖಮ್ಮಮ್	ಬಿ. ವೆಂಕಟ್
ಉತ್ತರಖಂಡ್	
ತೆಹ್ರಿ	ರಾಜೇಂದ್ರ ಪುರೋಹಿತ್
ಲಕ್ಷದ್ವೀಪ	
ಲಕ್ಷದ್ವೀಪ (ಎಸ್.ಟಿ)	ಶರೀಫ್ ಖಾನ್

ಸಂಪಾದಕೀಯ

ದಾರಿ ತಪ್ಪಿಸುತ್ತಿರುವ ಮಂಡ್ಯ ಬೆಳವಣಿಗೆ

ನಮ್ಮ ಸಿನಿಮಾ ಕಲಾವಿದರು ಒಳ್ಳೆಯ ಕಲಾವಿದರು. ಅದರಲ್ಲಿ ಎರಡು ಮಾತಿಲ್ಲ. ಒಬ್ಬೊಬ್ಬರಲ್ಲಿ ಕನಿಷ್ಠ ಒಂದು ವಿಶೇಷ ಪ್ರತಿಭೆ, ಅದಕ್ಕೆ ತಕ್ಕಂತೆ ಅವರ ಅಭಿಮಾನಿಗಳು ಅವರಿಗೆ ಪ್ರೀತಿಯಿಂದ ಬೇರೆ ಪೂರಕ ಹೆಸರುಗಳನ್ನಿಟ್ಟು ಕರೆಯುತ್ತಾರೆ. ಇವರೆಲ್ಲರ ಬಗ್ಗೆ ಕನ್ನಡಿಗರು ಮಾತ್ರವಲ್ಲ, ಇತರ ಕೆಲವು ಭಾಷಿಕರು ಸಹ ಅಭಿಮಾನ ವ್ಯಕ್ತ ಪಡಿಸುತ್ತಾರೆ.

ಆದರೆ, ನಮ್ಮ ಸಿನಿಮಾ ಕಲಾವಿದರಲ್ಲಿ ಮನುಷ್ಯ ಸಹಜವಾದ ದೌರ್ಬಲ್ಯಗಳೂ ಇವೆ. ಅದೇನು ಆಶ್ಚರ್ಯ ಪಡುವ ವಿಷಯವಲ್ಲ. ಕೆಲವೊಮ್ಮೆ ಈ ದೌರ್ಬಲ್ಯಗಳು ಬೀದಿ ರಂಪಾಟಗಳಾಗಿ ಅವರ ಅಭಿಮಾನಿಗಳಿಗೆ ಮುಜುಗರ ಉಂಟು ಮಾಡುತ್ತವೆ. ವೃತ್ತಿ ಆಧಾರಿತ ದ್ವೇಷ, ಅಸೂಯೆಗಳು ಕೆಲವೊಮ್ಮೆ ಇಣುಕುತ್ತವೆ. ಕಲಾವಿದರು ನಾಡಿನ ಜನತೆಗೆ, ವಿಶೇಷವಾಗಿ ಯುವ ಜನರಿಗೆ ಮಾದರಿಯಾಗಬೇಕು. ಒಬ್ಬೊಬ್ಬರ ಸುತ್ತ ಅವರ ಅಭಿಮಾನಿಗಳು ಬೇರೆ ಬೇರೆ ಸಂಘಗಳನ್ನು, ತಂಡಗಳನ್ನು ರಚಿಸಿಕೊಳ್ಳುವದರಲ್ಲಿ ತಪ್ಪಿಲ್ಲ. ಆದರೆ ಕನ್ನಡದ ಕಲಾವಿದರು ಎಲ್ಲರೂ ಒಂದೇ ತಾಯಿಯ ಮಕ್ಕಳಂತೆ ಇರಬೇಕು. ನಾಡಿನಲ್ಲಿ ಜನರ ನೆಮ್ಮದಿಯನ್ನು ಹಾಳು ಮಾಡುವಂತಹ ಜಾತಿ ಆಧಾರಿತ,ಧರ್ಮಆಧಾರಿತ,ಭಾಷೆ ಆಧಾರಿತ, ಪ್ರದೇಶ ಆಧಾರಿತ ವಿವಾದಗಳು ಎದ್ದು ಬಂದಾಗ ಕಲಾವಿದರು ಎಲ್ಲರನ್ನೂ ಒಂದುಗೂಡಿಸಿ ಒಂದಾಗಿ ಮುನ್ನಡೆಸುವವರು ಆಗಿರಬೇಕು.

ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಇತ್ತೀಚಿನ ಕೆಲವು ಬೆಳವಣಿಗೆಗಳು ನಾಡ ಪ್ರೇಮಿಗಳಿಗೆ ಕೊಂಚ ಆತಂಕವನ್ನು ಉಂಟು ಮಾಡಿದೆ ಎನ್ನಬಹುದು. ಎರಡು ಖ್ಯಾತ ಹಾಗೂ ಜನಪ್ರಿಯ ಕಲಾವಿದ ಕುಟುಂಬಗಳು ಚುನಾವಣಾ ಸಮರದಲ್ಲಿ ಪರಸ್ಪರ ವಿರುದ್ಧವಾಗಿ ನಿಂತಿರುವುದೇ ಆತಂಕದ ಬೆಳವಣಿಗೆಗೆ ಕಾರಣವಾಗಿದೆ. ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕಿದೆ. ಈ ಹಕ್ಕು ಕಲಾವಿದರಿಗೂ ಇದೆ. ಆದರೆ, ಈ ಚುನಾವಣೆಯ ಹಿಂದೆ ನಡೆದು ಹೋಗಿರುವ ಕೆಲವು ಘಟನೆಗಳು ಮತ್ತು ಚುನಾವಣೆಯ ಘೋಷಣೆಯಾದ ನಂತರ ಎರಡೂ ಕಡೆಯಿಂದ ವ್ಯಕ್ತವಾದ ಅಭಿಪ್ರಾಯಗಳು, ಮಾತುಗಳು ಚುನಾವಣಾ ಕಣದಲ್ಲಿ ಬಿರುಗಾಳಿಯನ್ನು ಎಬ್ಬಿಸಿ ದಂತೆ ಭಾಸವಾಗುತ್ತದೆ.

ಚುನಾವಣೆಗಳಲ್ಲಿ ಮತದಾರರು ಸ್ವತಂತ್ರವಾಗಿ ಮತದಾನ ಮಾಡುವಂತಿರಬೇಕು, ಅವರ ಮೇಲೆ ಪ್ರಭಾವಬೀರಿ ಅವರು ಮುಕ್ತವಾಗಿ ಮತ ಚಲಾಯಿಸುವುದನ್ನು ತಡೆಯುವುದು ಪ್ರಜಾಪ್ರಭುತ್ವಕ್ಕೆ ಶೋಭೆ ತರಲಾರದು ಮತದಾರನನ್ನು ಒತ್ತಡಕ್ಕೆ ಒಳಪಡಿಸಬಾರದು.

ರಾಜಕೀಯ ಪಕ್ಷಗಳು, ಹಾಗೂ ಮತಯಾಚನೆ ಮಾಡುವ ಅಭ್ಯರ್ಥಿಗಳು ಮತದಾರನನ್ನು ಚಿಂತನೆಗೆ ಒಳಪಡಿಸಬೇಕು.ನಮಗೆ ಕೇಂದ್ರದಲ್ಲಿ ಎಂತಹ ಸರ್ಕಾರ ಬೇಕು? ಅದರ ಧೋರಣೆಗಳು ಹೇಗಿರಬೇಕು. ಆ ಧೋರಣೆಗಳನ್ನು ಜಾರಿಗೆ ತರುವ ಸಾಮರ್ಥ್ಯ ಪಕ್ಷಕ್ಕೆ ಇದೆಯಾ? ಇದೆಲ್ಲವನ್ನು ಚರ್ಚೆಗೆ ತರಬೇಕು.ಅದನ್ನು ಬಿಟ್ಟು ಎಲ್ಲವನ್ನೂ ವೈಯಕ್ತಿಕ ಮಟ್ಟಕ್ಕೆ ಇಳಿಸುವುದು, ಹಣ ಬಲ, ತೋಳ್ಬಲ,ಜಾತಿ ಬಲ ಪ್ರದರ್ಶಿಸುವುದು ಸೂಕ್ತವಲ್ಲ.

ಸ್ವತಂತ್ರವಾಗಿ ಸ್ಪರ್ಧಿಸುವುದಕ್ಕೆ ನಮ್ಮ ದೇಶದ ಚುನಾವಣೆ ಕಾಯ್ದೆಯಲ್ಲಿ ಅವಕಾಶವಿದೆ. ಆದರೆ ಒಬ್ಬ ಅಭ್ಯರ್ಥಿ ಯಾವುದಾದರೊಂದು ನೋಂದಾಯಿತ ಪಕ್ಷವನ್ನು ಪ್ರತಿನಿಧಿಸುವುದೇ ಹೆಚ್ಚು ಸೂಕ್ತ. ಸ್ವತಂತ್ರ ಅಭ್ಯರ್ಥಿಯನ್ನು ಯಾರು ಪ್ರಶ್ನಿಸುವಂತಿಲ್ಲ. ಆತನನ್ನು ನಿಯಂತ್ರಿಸುವ ಯಾವ ನಿಯಮಾವಳಿ ಇರುವುದಿಲ್ಲ. ಏನಿದ್ದರೂ ವ್ಯಕ್ತಿಗತ ತೀರ್ಮಾನ, ಮತದಾರರು ಸಹ ಪಕ್ಷಕ್ಕೆ ಮತ ನೀಡಲು ಬಯಸುತ್ತಾರೆ. ಯಾವುದೇ ವಿಶೇಷ ಸಂದರ್ಭದಲ್ಲಿ ಮಾತ್ರ ಸ್ವತಂತ್ರ ಅಭ್ಯರ್ಥಿ ಪಕ್ಷಗಳ ಅಭ್ಯರ್ಥಿಗಳನ್ನು ಸೋಲಿಸಿ ಗೆಲ್ಲುವುದುಂಟು. ಸ್ವತಂತ್ರವಾಗಿ ಗೆದ್ದು ಅನಂತರ ಕುದುರೆ ವ್ಯಾಪಾರಕ್ಕೋ, ಆಪರೇಷನ್....ಕ್ಕೋ ದಾಳ ಆಗುವುದು ಒಳ್ಳೆಯದಲ್ಲ.

ನಮ್ಮ ದೇಶ ಒಂದು ಸಂಕೀರ್ಣ ಪರಿಸ್ಥಿತಿಯನ್ನು ಹಾದು ಹೋಗುತ್ತಿದೆ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಮೂಡಿಬಂದ ಆದರ್ಶಪ್ರಾಯ ಜನರ ಐಕ್ಯತೆಗೆ ಈಗ ಧಕ್ಕೆಯಾಗಿದೆ. ನಮ್ಮೊಳಗಿನ ಕೋಮು ಆಧಾರಿತ, ಜಾತಿ ಆಧಾರಿತ ಅಂತರ ಹೆಚ್ಚುತ್ತಿದೆ. ಮತದಾರರು ಈ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಾಗಿದೆ. ಮಂಡ್ಯ ಬೆಳವಣಿಗೆ ಮತದಾರರನ್ನು ದಾರಿ ತಪ್ಪಿಸದಿರಲಿ. ಧೋರಣೆಗಳ ಬಗ್ಗೆ ಚರ್ಚೆಯಾಗಲಿ. ವ್ಯಕ್ತಿಗತವಾಗಿ ಯಾರು ಹೆಚ್ಚು, ಯಾರು ಕಡಿಮೆ ಎಂಬ ವಿಚಾರಗಳು ಮುಖ್ಯವಾಗಬಾರದು. ರಾಜ್ಯದ ಅಭಿವೃದ್ಧಿ ಬಗ್ಗೆ ದೇಶದ ಅಭಿವೃದ್ಧಿ ಬಗ್ಗೆ ಚರ್ಚೆಯಾಗಲಿ. ಅಪ್ಪ–ಮಕ್ಕಳು ಎನ್ನುವುದಾಗಲೀ, ಅಮ್ಮ ಮಕ್ಕಳು ಎನ್ನುವುದಾಗಲೀ ಸರಿಯಲ್ಲ. ಅದು ಒಡಕಿಗೆ ಕಾರಣವಾಗುತ್ತದೆ. ಧೋರಣೆಗಳ ಪ್ರಶ್ನೆಗಳನ್ನು ಚರ್ಚೆಗೆ ತಂದರೆ ಒಡಕಿನ ಪ್ರಶ್ನೆಗಳು ಮೂಲೆ ಗುಂಪಾಗುತ್ತವೆ.

ಫೆಬ್ರವರಿ 20 ರ ಸುಪ್ರೀಂ ಕೋರ್ಟ್ ತೀರ್ಪು

ಆದಿವಾಸಿಗಳಿಗೆ ಬೀದಿಪಾಲು ಆಗುವ ಭಯದ ಛಾಯೆ



ಕಳೆದ ಪೆಬ್ರವರಿ 20 ರ ಸುಪ್ರೀಂ ಕೋರ್ಟ್ ತೀರ್ಪು ಬೆಳ್ತಂಗಡಿ ತಾಲೂಕಿನ ಆದಿವಾಸಿ, ಅರಣ್ಯವಾಸಿಗಳ ಪಾಲಿಗೆ ಸಿಡಿಲು ಬಡಿದಂತಾಗಿತ್ತು. ಬೆಳ್ತಂಗಡಿ ತಾಲೂಕಿನ ಬಹುಭಾಗ ಅರಣ್ಯದಿಂದ ಕೂಡಿದೆ. ಒಂದು ಕಡೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಸಮಸ್ಯೆಗಳಿಗೆ ಸಿಕ್ಕಿ ಒದ್ದಾಡಿ ಹಲವಾರು ಆದಿವಾಸಿ ಕುಟುಂಬಗಳು ತಮ್ಮ ನೆಲೆಯನ್ನು ಕಳೆದುಕೊಂಡಿದೆ. ಬಳಿಕ ಹುಲಿ ಸಂರಕ್ಷಣಾ ವಲಯ, ಆನೆ ಕಾರಿಡಾರ್, ಯುನೆಸ್ಕೋ ವರದಿ, ಪರಿಸರ ಸೂಕ್ಷ್ಮ ವಲಯ, ಪುಷ್ಪಗಿರಿ ರಾಷ್ಟ್ರೀಯ ಉದ್ಯಾನವನ, ಮಾದವ ಗಾಡ್ಗೀಳ್ ವರದಿ, ಕಸ್ತೂರಿ ರಂಗನ್ ವರದಿಯಿಂದ ಒಕ್ಕಲೇಲುವ ಜೀವಭಯದಿಂದ ಜೀವನ ನಡೆಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ನ ತೀರ್ಪು ಬೀದಿಪಾಲು ಆಗುವ ಭಯದ ಛಾಯೆ ಆವರಿಸಿದೆ.

2006 ರ ಅರಣ್ಯ ಹಕ್ಕು ಕಾಯ್ದೆಯಡಿ ತಾಲೂಕಿನ ಸಾವಿರಾರು ಆದಿವಾಸಿ, ಅರಣ್ಯವಾಸಿಗಳು ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಆದರೆ ಅಧಿಕಾರಿಗಳ ಬೇಜಾವಬ್ದಾರಿ, ನಿರ್ಲಕ್ಷ್ಯದಿಂದ 1298 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಇನ್ನೂ ಸರಿ ಸುಮಾರು 20000 ಕ್ಕೂ ಹೆಚ್ಚು ಕುಟುಂಬಗಳು ಅರ್ಜಿಯೇ ಸಲ್ಲಿಸಿಲ್ಲ. ಸುಪ್ರೀಂ ಕೋರ್ಟ್ ನ ತೀರ್ಪು ಜ್ಯಾರಿಯಾದರೆ ಬೆಳ್ತಂಗಡಿ ತಾಲೂಕಿನ ಕೆಲವು ಗ್ರಾಮಗಳ ಹೆಸರನ್ನು ತಾಲೂಕಿನ ಭೂಪಟದಿಂದ ಮಾಯವಾಗುತ್ತದೆ.

ಇಂತಹ ಸಂದರ್ಭದಲ್ಲಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ತೀವ್ರ ಸ್ವರೂಪದ ಹೋರಾಟಕ್ಕೆ ತೀರ್ಮಾನಿಸಿತು. ಲೋಕಸಭಾ ಚುನಾವಣೆಯ ಹೊಸ್ತಿಲಲ್ಲಿ ಆದಿವಾಸಿ, ಅರಣ್ಯವಾಸಿಗಳು ತನ್ನ ಕೈತಪ್ಪಬಹುದು ಎಂಬ ದುರಾಲೋಚನೆಯಿಂದ ಬಿಜೆಪಿ ಪಕ್ಷದ ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಹೋರಾಟದ ದಿನದಂದೇ ಅರಣ್ಯವಾಸಿಗಳ ಸಭೆಯನ್ನು ಏರ್ಪಡಿಸಿದರು. ಚುನಾವಣೆ ದಿನಾಂಕ ಘೋಷಣೆಯಾಗಿ, ನೀತಿ ಸಂಹಿತೆ ಹೆಸರಿನಲ್ಲಿ ಹೋರಾಟ ನಡೆಸಲು ಸಾಧ್ಯವಾಗದಿದ್ದರೂ ಸಮಾವೇಶ ಯಶಸ್ವಿಯಾಗಿ ನಡೆಯಿತು.

ಶಬರಿಮಲೆ ದೇವಾಲಯಕ್ಕೆ ಮಹಿಳೆಯರ ಪ್ರವೇಶಿಸಲು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ವಿರುದ್ಧ ಬೀದಿ ರಂಪಾಟ ಮಾಡಿದ ಸಂಸದ ನಳೀನ್ ಕುಮಾರ್ ಕಟೀಲ್, ಅದೇ ಕೋರ್ಟ್ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವ ಬಗ್ಗೆ ನೀಡಿದ ತೀರ್ಪಿನ ವಿಚಾರದಲ್ಲಿ ಮೌನ ವಹಿಸಿದ್ದಾರೆ ಎಂದಾದರೆ ಇಂತಹ ಸಂಸದರ ಅಗತ್ಯವಿದೆಯೇ ಎಂದು ಹೈಕೋರ್ಟ್ ನ ಹಿರಿಯ ನ್ಯಾಯವಾದಿ, ಪ್ರಗತಿಪರ ಚಿಂತಕ ಸುದೀರ್ ಕುಮಾರ್ ಮುರೊಳ್ಳಿ ಪ್ರಶ್ನಿಸಿದರು.

ಅವರು ಸೋಮವಾರ ಬೆಳ್ತಂಗಡಿಯ ಅಂಬೇಡ್ಕರ್ ಭವನದಲ್ಲಿ ನಡೆದ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆದ ಅರಣ್ಯವಾಸಿಗಳ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ತನ್ನ ಪ್ರೀತಿಗಾಗಿ ಸಹೋದರನನ್ನು ಕೊಲೆ ಮಾಡಿದ ಕಾರಣಕ್ಕಾಗಿ ತನ್ನ ಬತ್ತದ ಬಣವೆ ಎಂಬಂತೆ ಇಡೀ ಜಿಲ್ಲೆಗೆ ಬೆಂಕಿ ಹಚ್ಚುತ್ತೇನೆ ಎಂದು ಬೊಬ್ಬಿಟ್ಟ ಈ ಜಿಲ್ಲೆಯ ಸಂಸದ ಅರಣ್ಯವಾಸಿಗಳ ಪರವಾಗಿ ಏಕೆ ಮಾತನಾಡಲ್ಲ? ಎಂದು ಪ್ರಶ್ನಿಸಿದ ಮುರೊಳ್ಳಿ, ಸುಪ್ರೀಂ ಕೋರ್ಟ್ ನ ತೀರ್ಪು ಜಾತಿ, ಧರ್ಮವನ್ನು ಸೇರಿಸಿ ಅರಣ್ಯವಾಸಿಗಳ ವಿರುದ್ಧವಾಗಿದ್ದು, ತೀರ್ಪಿನ ಪ್ರಕಾರ ಒಕ್ಕಲೆಬ್ಬಿಸುವ ವಿರುದ್ಧ ಜಾತಿ, ಧರ್ಮವನ್ನು ಮರೆತು ಸಂಘಟಿತ ಹೋರಾಟ ಅಗತ್ಯವಿದೆ ಎಂದ ಅವರು ಸುಪ್ರೀಂ ಕೋರ್ಟ್ ನ ತೀರ್ಪು ಕೋಟ್ಯಾಂತರ ಜನರನ್ನು ಒಕ್ಕಲೆಬ್ಬಿಸುವ ಭೀತಿಯಿಂದ ಬದುಕನ್ನು ನಡೆಸುತ್ತಿದ್ದಾರೆ. ತೀರ್ಪಿಗೆ ತಡೆಯಾಜ್ಞೆ ಇದೆಯೇ ಹೊರತು ತೀರ್ಪು ರದ್ದುಗೊಂಡಿಲ್ಲ.

ಪುಟ 4 ಕ್ಕೆ

ಬಾಳಿಗ ಕೊಲೆ ತನಿಖೆ ಆಗ್ರಹಿಸಿ ದೇಶಪ್ರೇಮಿ ಸಂಘಟನೆಗಳಿಂದ ಮೆರವಣಿಗೆ



ವರದಿ: ವಾ.ಉ.

ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗ ಕೊಲೆ ನಡೆದು 3 ವರ್ಷ ಕಳೆದರೂ ಕೊಲೆ ಮಾಡಿದ ಆರೋಪಿಗಳಿಗೆ ಶಿಕ್ಷೆಯಾಗಿಲ್ಲ. ಈ ಪ್ರಕರಣವನ್ನು ಕೂಡಲೇ ವಿಶೇಷ ತನಿಖಾ ತಂಡಕ್ಕೆ ವಹಿಸಬೇಕು ಎಂದು ವಿಚಾರವಾದಿಗಳ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಪ್ರೊ.ನರೇಂದ್ರ ನಾಯಕ್ ಆಗ್ರಹಿಸಿದರು.

ನಗರದ ವೆಂಕಟರಮಣ ದೇವಸ್ಥಾನದ ಬಳಿಯಿಂದ ವಿನಾಯಕ ಬಾಳಿಗ ಅವರ ಮನೆಯವರೆಗೆ ದೇಶಪ್ರೇಮಿ ಸಂಘಟನೆಗಳ ವತಿಯಿಂದ ಗುರುವಾರ ಆಯೋಜಿಸಿದ್ದ ಮೆರವಣಿಗೆ ನಂತರ ಬಾಳಿಗ ಅವರ ಮನೆಯ ಮುಂಭಾಗದಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಡಿವೈಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ, ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿದ್ದಕ್ಕಾಗಿಯೇ ವಿನಾಯಕ ಬಾಳಿಗ ಕೊಲೆಯಾಗಿದೆ. ಪ್ರಕರಣವನ್ನು ಮುಚ್ಚಿ ಹಾಕಲು ಯತ್ನಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬಾಳಿಗ ಅವರ ಹೋರಾಟದ ನೆನಪು ಸಮಾಜದಿಂದ ಅಳಿಸಿ ಹೋಗಬಾರದು. ಅವರ ಕುಟುಂಬದವರಿಗೆ ನೈತಿಕ ಬೆಂಬಲ ನೀಡಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ದಲಿತ ಸಂಘರ್ಷ ಸಮಿತಿ ಮುಖಂಡ ದೇವದಾಸ, ವೈದ್ಯ ಡಾ.ಪಿ.ವಿ.ಭಂಡಾರಿ ಹಾಗೂ ವಿದ್ವಾಂಸ ಎಚ್. ಎಸ್. ಪಂಡಿತಾರಾಧ್ಯ ಅವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಬಾಳಿಗ ಕುಟುಂಬದ ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬಡ ಮೀನುಗಾರ ಕುಟುಂಬದ ಮೇಲೆ ದೌರ್ಜನ್ಯ – ಜಿಲ್ಲಾಧಿಕಾರಿಗೆ ಮನವಿ

ಮಂಗಳೂರು ನೇತ್ರಾವತಿ ನದಿಯ ತೀರಕ್ಕೆ ಕಳೆದ 25 ವರುಷಗಳಿಂದ ಚಿಕ್ಕಮಂಗಳೂರಿನಿಂದ ವಲಸೆ ಬಂದಿರುವ ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬಡ ಕುಟುಂಬವೊಂದು ಜಪ್ಪಿನಮೊಗರು ಸೇತುವೆಯ ಬಳಿ ತೆಪ್ಪದ ಮೂಲಕ ಬಲೆ ಬೀಸಿ ಮೀನು ಹಿಡಿಯುವ ಕಾಯಕವನ್ನು ನಡೆಸುತ್ತಾ ಬಂದಿದೆ. ಈ ರೀತಿ ತಮ್ಮಷ್ಟಕ್ಕೆ ತಾವು ಮೀನು ಹಿಡಿದು ಬದುಕುತ್ತಿರುವ ಕುಟುಂಬಕ್ಕೆ ಕಳೆದ ಹಲವು ದಿನಗಳಿಂದ ಸ್ಥಳೀಯ ಕೆಲವೊಂದು ಜನರ ಗುಂಪು ನಿರಂತರ ಕಿರುಕುಳವನ್ನು ನೀಡುತ್ತಿರುವುದಲ್ಲದೇ, ನೇತ್ರಾವತಿ ನದಿಯಲ್ಲಿ ಮೀನು ಹಿಡಿಯಬಾರದೆಂದು ಬೆದರಿಕೆ ಒಡ್ಡುತ್ತಿದೆ. ಮಾತ್ರವಲ್ಲ ಹಲವು ಬಾರಿ ಗಂಭೀರವಾಗಿ ಹಲ್ಲೆಯನ್ನು ಮಾಡುವುದರ ಮೂಲಕ ದೌರ್ಜನ್ಯ ನಡೆಸುತ್ತಿದ್ದಾರೆ. ಇತ್ತೀಚೆಗೆ ನದಿಯಲ್ಲಿ ಬಲೆ ಹಾಕಿ ಮೀನು ಹಿಡಿಯುತ್ತಿದ್ದ ಸಂದರ್ಭದಲ್ಲಿ ಹಾಕಿದ ಬಲೆಯನ್ನು ಕಿತ್ತು ಬಲವಂತದಿಂದ ಅವರ ವಶದಲ್ಲಿ ಇಟ್ಟು ಕೊಂಡಿರುತ್ತಾರೆ. ಕೇವಲ ಮೀನು ಹಿಡಿಯುವ ಕಾಯಕವನ್ನೇ ನಂಬಿ ಬದುಕುತ್ತಿರುವ ಬಡ ಕುಟುಂಬ ಇಂತಹ ದಿನ ನಿತ್ಯದ ದೌರ್ಜನ್ಯದಿಂದಾಗಿ ಬಹಳ ನೋವನ್ನು ಅನುಭವಿಸುವಂತಾಗಿದೆ. ಕಳೆದ ಹಲವು ದಿನಗಳಿಂದ ದುಡಿಮೆ ಇಲ್ಲದೆ ಒಂದೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಕೂಡಲೇ ಈ ಬಡ ಮೀನುಗಾರರು ಅನುಭವಿಸುತ್ತಿರುವ ಸಮಸ್ಯೆಯನ್ನು ಬಗೆಹರಿಸಬೇಕು. ಹಾಗು ತಮ್ಮ ಕಾಯಕ ನಡೆಸಲು ಉಂಟಾದ ಅಡ್ಡಿಯನ್ನು ನಿವಾರಿಸಿ ಕೊಡಬೇಕೆಂದು ಮಾನ್ಯ ಜಿಲ್ಲಾಧಿಕಾರಿ ಹಾಗು ಮೀನುಗಾರಿಕಾ ಇಲಾಖೆಯ ಉಪನಿರ್ದೇಶಕರಿಗೆ ಡಿವೈಎಫ್‌ಐ ದ.ಕ ಜಿಲ್ಲಾ ಸಮಿತಿಯಿಂದ ಮನವಿಯನ್ನು ಸಲ್ಲಿಸಲಾಯಿತು. ಈ ವೇಳೆ ಡಿವೈಎಫ್‌ಐ ದ.ಕ ಜಿಲ್ಲಾಧ್ಯಕ್ಷ ಬಿ.ಕೆ ಇಮ್ತಿಯಾಜ್ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಉಪಸ್ಥಿತರಿದ್ದರು.



ಆದಿವಾಸಿಗಳಿಗೆ ಬೀದಿಪಾಲು ಆಗುವ ಭಯ....... ಪುಟ 3 ರಿಂದ

ಕೇಂದ್ರ ಸರ್ಕಾರದ ಪರವಾಗಿ ಯಾವುದೇ ವಕೀಲರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಾದ ಮಂಡನೆ ಮಾಡದಿರುವುದೇ ಪರೋಕ್ಷವಾಗಿ ಇಂತಹ ತೀರ್ಪು ಬರಲು ಕಾರಣವಾಗಿದೆ. ಜನರನ್ನು ಭಾವನಾತ್ಮಕವಾಗಿ ಒಡೆಯುವ ಜನರು ತಮ್ಮ ಹೊಣೆಗಾರಿಕೆಯನ್ನು ನಿರ್ಲಕ್ಷಿಸಿ, ಅರಣ್ಯವಾಸಿಗಳ ಜೀವನದಲ್ಲಿ ಚೆಲ್ಲಾಟವಾಡುತ್ತಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಅಧ್ಯಕ್ಷ ವಸಂತ ನಡ ಮಾತನಾಡಿ ಆದಿವಾಸಿಗಳ ಹೋರಾಟವನ್ನು ದಮನಿಸಲು ಶಾಸಕ ಹರೀಶ್ ಪೂಂಜ ಹುನ್ನಾರ ನಡೆಸಿದ್ದು, ಈ ದಿನವೇ ಅರಣ್ಯವಾಸಿಗಳ ಸಭೆ ನಡೆಸಿದ್ದಾರೆ. ಶಾಸಕರಾಗಿ ಹತ್ತು ತಿಂಗಳ ನಂತರ ಚುನಾವಣೆಯಲ್ಲಿ ಆದಿವಾಸಿಗಳನ್ನು ದುರುಪಯೋಗ ಪಡಿಸಿಕೊಳ್ಳುವ ಉದ್ದೇಶದಿಂದ ಅರಣ್ಯವಾಸಿಗಳ ಸಭೆ ನಡೆಸಲಾಗಿದೆ ಎಂದರು. ಈ ಚುನಾವಣೆ ಆದಿವಾಸಿ ಸಮುದಾಯವನ್ನು ಒಕ್ಕಲೆಬ್ಬಿಸುವ ಬಗ್ಗೆ ತುಟಿ ಬಿಚ್ಚದ ಕೇಂದ್ರ ಸರ್ಕಾರದ ವಿರುದ್ಧ ಹೋರಾಟವಾಗಲಿ ಎಂದರು.

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕ ಎಸ್ ವೈ ಗುರುಶಾಂತ್ ಮಾತನಾಡಿ ನಮ್ಮನಾಳುವ ಸರ್ಕಾರಗಳ ಧೋರಣೆಯ ಭಾಗವಾಗಿ ಅರಣ್ಯ ಸಂಪತ್ತಿನ ಲೂಟಿಗಾಗಿ ಮುಕ್ತ ಬಾಗಿಲು ತೆರೆದು ಬಹುರಾಷ್ಟ್ರೀಯ ಕಂಪನಿಗಳಿಗಾಗಿ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವ ಹುನ್ನಾರದ ಭಾಗವಾಗಿ ಸುಪ್ರೀಂ ಕೋರ್ಟ್ ನ ತೀರ್ಪು ಪೂರಕವಾಗಿದೆ. ಆ ಕಾರಣಕ್ಕಾಗಿ ಸುಪ್ರೀಂ ಕೋರ್ಟ್ ನ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಮೀನಮೇಷ ಮಾಡಿ ಆದಿವಾಸಿಗಳ ಜೀವನವನ್ನು ಅತ್ಯಂತ ಅಪಾಯಕಾರಿ ಸ್ಥಿತಿಗೆ ತಳ್ಳುತ್ತಿದೆ. ಆ ಕಾರಣಕ್ಕಾಗಿ ನಾವು ಮಾಡು ಇಲ್ಲವೇ ಮಡಿ ಹೋರಾಟ ಮಾಡಬೇಕಾದ ಅಗತ್ಯವಿದೆ ಎಂದರು.

ಸಭೆಯನ್ನು ಉದ್ದೇಶಿಸಿ ಮಾಜಿ ಶಾಸಕ ಕೆ.ವಸಂತ ಬಂಗೇರ ಮಾತನಾಡಿ ಕೇಂದ್ರದ ಬಿಜೆಪಿ ಸರ್ಕಾರ ಜನಸಾಮಾನ್ಯರ ಬದುಕುವ ಸಂವಿಧಾನ ಬದ್ಧ ಹಕ್ಕನ್ನು ಕಸಿದುಕೊಂಡಿದೆ. ಇದೀಗ ಸುಪ್ರೀಂ ಕೋರ್ಟ್ ತೀರ್ಪಿನ ವಿ ಚಾ ರ ದ ಲ್ಲಿ ಂ ು ೂ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ, ಈ ತಪ್ಪನ್ನು ಮರೆಮಾಚಲು ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅರಣ್ಯವಾಸಿಗಳ ಸಭೆ ನಡೆಸಿ ತೇಪೆ ಹಾಕಲು ಪ್ರಂುತ್ನಿಸುತ್ತಿದ್ದಾರೆ. ಅರಣ್ಯವಾಸಿಗಳು ಈ ಕಪಟ ನಾಟಕಕ್ಕೆ ಬಲಿಯಾಗಬಾರದು ಎಂದರು.



ನ್ಯಾಯವಾದಿ, ಸಿಪಿಐ(ಎಂ) ಮುಖಂಡ ಶಿವಕುಮಾರ್ ಎಸ್.ಎಂ ಮಾತನಾಡಿದರು. ವೇದಿಕೆಯಲ್ಲಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಕಾರ್ಯದರ್ಶಿ ಜಯಾನಂದ ಪಿಲಿಕಲ, ಉಪಾಧ್ಯಕ್ಷ ಲಕ್ಷ್ಮಣ ಆಲಂಗಾಯಿ ಉಪಸ್ಥಿತರಿದ್ದರು. ಸಂಚಾಲಕ ಶೇಖರ್ ಲಾಯಿಲ ಸ್ವಾಗತಿಸಿ ವಂದಿಸಿದರು. ●

ಉ.ಕ. ಜಿಲ್ಲೆಯ ಹಿರಿಯ ರೈತ ಹೋರಾಟಗಾರ ಇನ್ನಿಲ್ಲ



ಜಿಲ್ಲೆಯ ಹಿರಿಯ ರೈತ ಹೋರಾಟಗಾರ ನೈಯಾ ಪೈಸೆ ಚಳುವಳಿ ಖ್ಯಾತಿಯ 82 ವರ್ಷದ ಹಿರಿಯ ಸಂಗಾತಿ ಮಂಜುನಾಥ ಪುಲ್ಕರ್ ಇಂದು ಸಂಜೆ ದಾಂಡೇಲಿಯಲ್ಲಿರುವ ನಮ್ಮ ಕಚೇರಿಯಲ್ಲಿ ನಿಧನರಾದರು. ಇವರು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಯಾಗಿ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾಗಿ ಸಂಘಟನೆಯ ಪೂರ್ಣಾವಧಿ ಕಾರ್ಯಕರ್ತರಾಗಿ ದುಡಿದರು. ಜಿಲ್ಲೆಯಲ್ಲಿ ರೈತ ಕಾರ್ಮಿಕ ಆದಿವಾಸಿ ವಿದ್ಯಾರ್ಥಿ ಯುವಜನ ಮಹಿಳಾ ಚಳುವಳಿಗೆ ಮಾರ್ಗದರ್ಶನ ಮಾಡಿದ್ದರು. ●





ಎಚ್.ಎಸ್. ಮಂಜುನಾಥ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ರಾಜ್ಯದ ಜನತೆಗೆ ಉತ್ತಮ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವ ಸರ್ಕಾರಿ ಒಡೆತನದ ಬೃಹತ್ ಉದ್ದಿಮೆಯಾಗಿದೆ. ಈ ನಿಗಮವು ಇಡೀ ರಾಷ್ಟ್ರದಲ್ಲಿಯೇ ಅತ್ಯುತ್ತಮವಾದ ಸಂಸ್ಥೆ ಎಂಬ ಹೆಗ್ಗಳಿಕೆ ಪಡೆದಿದೆ. ಹಾಗೂ ನೂರಾರು ಪ್ರಶಸ್ತಿಗಳನ್ನು ಕೇಂದ್ರ ಸರ್ಕಾರ ಹಾಗೂ ಇತರೆ ಸಂಸ್ಥೆಗಳಿಂದ ಗಳಿಸಿದೆ. ಈ ರೀತಿಯಲ್ಲಿ ಸಂಸ್ಥೆಯು ಕೋಟ್ಯಂತರ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ಒದಗಿಸಲು ಚಾಲಕರು, ನಿರ್ವಾಹಕರು, ಚಾಲಕ ಕಮ್ ನಿರ್ವಾಹಕರು, ತಾಂತ್ರಿಕ, ಭದ್ರತಾ ಮತ್ತು ಆಡಳಿತ ಸಿಬ್ಬಂದಿ ಹಗಲು ರಾತ್ರಿ ದುಡಿಯುತ್ತಿದ್ದಾರೆ. ಈ ನಿಗಮವು ಸರ್ಕಾರಿ ಒಡೆತನದ ಸಂಸ್ಥೆಯಾಗಿದ್ದು, ಕಾನೂನಿನ ಅಡಿಯಲ್ಲಿ ಆಡಳಿತ ನಡೆಸಬೇಕಾಗಿದೆ. ಕಾರ್ಮಿಕರಿಗೆ ಹಲವು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿದೆ. ಇತ್ತೀಚೆಗೆ ಸಾರಿಗೆ ಕಾರ್ಮಿಕರು ಕಳೆದ 25 ವರ್ಷಗಳಿಂದ ಸರ್ಕಾರ ಮತ್ತು ಆಡಳಿತ ವರ್ಗದ ಕಾರ್ಮಿಕ ವಿರೋಧಿ ಧೋರಣೆಗಳಿಂದಾಗಿ ತೀವ್ರವಾದ ದೌರ್ಜನ್ಯ, ಕಿರುಕುಳವನ್ನು ದಿನನಿತ್ಯ ಅನುಭವಿಸುತ್ತಿದ್ದಾರೆ. ಆಡಳಿತ ವರ್ಗದ ತೀವ್ರ ಕಿರುಕುಳಗಳಿಂದ ನೊಂದವರು ಆತ್ಮಹತ್ಯೆಗಳಿಗೆ ಶರಣಾಗುವಂತಹ ಪರಿಸ್ಥಿತಿಗೆ ತಲುಪಲಾಗಿದೆ.

ಕಾರ್ಮಿಕರ ಸಮಸ್ಯೆಗಳನ್ನು ಕಾರ್ಮಿಕ ಸಂಘಟನೆಗಳೊಂದಿಗೆ ಚರ್ಚಿಸಿ ಬಗೆಹರಿಸುವ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ತಿಲಾಂಜಲಿ ನೀಡಿದ್ದಾರೆ. ಕಿರುಕುಳ ಅನುಭವಿಸುವ ಕಾರ್ಮಿಕರು ಪ್ರತಿಹಂತದಲ್ಲೂ ಅಧಿಕಾರಿಗಳಿಗೆ ಲಂಚ ನೀಡಬೇಕಾದ ಪರಿಸ್ಥಿತಿಯನ್ನು ರೂಪಿಸಿಕೊಂಡಿದ್ದಾರೆ. ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ಒದಗಿಸಲು ದುಡಿಯುವುದಕ್ಕಾಗಿ ಬಂದ ಕಾರ್ಮಿಕರು ತಮ್ಮ ಮೇಲಧಿಕಾರಿಗಳಿಗೆ ಲಂಚ ನೀಡಿ ಕರ್ತವ್ಯ ನಿರ್ವಹಣೆ ಮಾಡುವ ಕೆಟ್ಟ ಪರಿಸ್ಥಿತಿಗೆ ಬಂದು ತಲುಪಿದ್ದೇವೆ. ಕರ್ತವ್ಯದ ವೇಳೆ ಆಗುವ ಸಣ್ಣಪುಟ್ಟ ಪ್ರಕರಣಗಳಿಗೂ, ರಜೆ ಪಡೆಯಲು ಹಣ ನೀಡಬೇಕಾದ ಪರಿಸ್ಥಿತಿಯನ್ನು ನಿರ್ಮಿಸಿಕೊಂಡಿದ್ದಾರೆ. ನಿಯಮಾನುಸಾರ ಆಡಳಿತ ನಡೆಸಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕಾಗಿದೆ. ಕಾರ್ಮಿಕರ ಸಮಸ್ಯೆಗಳನ್ನು ಘಟಕ, ವಿಭಾಗ ಹಾಗೂ ಕೇಂದ್ರ ಕಚೇರಿ ಮಟ್ಟದಲ್ಲಿ ಕಾರ್ಮಿಕ ಸಂಘಗಳೊಂದಿಗೆ ಚರ್ಚಿಸಿ ಬಗೆಹರಿಸುವ ವ್ಯವಸ್ಥೆಯೇ ಇಲ್ಲವಾಗಿದೆ. ಅಧಿಕಾರಿಗಳು ಮನಸೋ ಇಚ್ಛೆ ಆಡಳಿತ ನಡೆಸುತ್ತಿದ್ದಾರೆ. ಕಾನೂನು ಪ್ರಕಾರ ದಿನವೊಂದಕ್ಕೆ 8ರಿಂದ 9 ಗಂಟೆ ವಾರಕ್ಕೆ 48ರಿಂದ 54 ಗಂಟೆಗಳಿಗೂ ಅಧಿಕವಾಗಿ ದುಡಿಸಬಾರದು. ಆದರೆ ಬಾರ್ ಡ್ಯೂಟಿ ಹೆಸರಿನಲ್ಲಿ 2 ದಿನಕ್ಕೆ 36 ಗಂಟೆಗಳಿಗೂ ಅಧಿಕವಾಗಿ ದುಡಿಸಲಾಗುತ್ತಿದೆ. ಫಾರಂ ನಂ.4 ಅನ್ನು ತಯಾರಿಸಲು ಇದ್ದ ನಿಯಮಗಳನ್ನು ಗಾಳಿಗೆ ತೂರಲಾಗಿದೆ. ಗಂಟೆಗೆ ವೇಗದೂತಕ್ಕೆ 40 ಕಿಮೀ, ಸಾಮಾನ್ಯ ವಾಹನಕ್ಕೆ 30 ಕಿಮೀ, ನಿಗದಿಪಡಿಸಲಾಗಿತ್ತು. ಈಗ ನಿಯಮ ತಿದ್ದುಪಡಿ ಇಲ್ಲದೆ ಗಂಟೆಗೆ ವೇಗದೂತಕ್ಕೆ 55 ಕಿಮೀ, ಸಾಮಾನ್ಯ ವಾಹನಕ್ಕೆ 45 ಕಿಮೀ ಹೆಚ್ಚಳ ಮಾಡಿ ನಿಗದಿಪಡಿಸಲಾಗಿದೆ. 300 ಕಿಮೀ 8 ಗಂಟೆಗಳ ಕಾಲ ಡ್ಯೂಟಿ ನಿಗದಿಪಡಿಸುವ ಬದಲು 410 ಕಿಮೀ ಅಂದರೆ 110 ಕಿಮೀ ಹೆಚ್ಚಿಸಲಾಗಿದೆ. ಇದರಿಂದಾಗಿ ಚಾಲಕ ಮತ್ತು ನಿರ್ವಾಹಕರಿಗೆ ಕೆಲಸದ ಒತ್ತಡ ಜಾಸ್ತಿಯಾಗಿದೆ. ಮಾತ್ರವಲ್ಲದೆ ಷೆಡ್ಯೂಲ್ ಒಟಿಯನ್ನು ಕಡಿತಗೊಳಿಸಲಾಗಿದೆ. ಇಂತಹ ಕ್ರಮ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ.

ಈ ರೀತಿಯಲ್ಲಿ ತೀವ್ರವಾಗಿ ಕೆಲಸದ ಒತ್ತಡವನ್ನು ಹೆಚ್ಚಿಸುವುದರಿಂದ ಚಾಲಕ-ನಿರ್ವಾಹಕರ



ಸಾರಿಗೆ ನೌಕರರ ಹಾಸನ ವಿಭಾಗ ಮಟ್ಟದ ಸಮಾವೇಶ

ಸಾರಿಗೆ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಮಸ್ಯೆಗಳ ಕುರಿತು ಚರ್ಚಿಸಲು ಮತ್ತು ಅವುಗಳಿಗೆ ಸಂಘಟನಾತ್ಮಕವಾಗಿ ಪರಿಹಾರಗಳನ್ನು ಕಂಡುಕೊಳ್ಳಲು ಹಾಸನ ವಿಭಾಗ ಮಟ್ಟದ ಸಾರಿಗೆ ನೌಕರರ ಸಮಾವೇಶವನ್ನು ಹಾಸನದ ಸಾಲಗಾಮೆ ರಸ್ತೆಯ ಅರಳೀಕಟ್ಟೆ ವೃತ್ತದಲ್ಲಿರುವ ಸಂಸ್ಕೃತ ಭವನದಲ್ಲಿ ದಿನಾಂಕ 28 ಮಾರ್ಚ್ 2019ರ ಗುರುವಾರ ಬೆಳಗ್ಗೆ 10.30 ಗಂಟೆಗೆ ನಡೆಸಲಾಗುತ್ತಿದ್ದು ಈ ಸಮಾವೇಶಕ್ಕೆ ಹಾಸನ ವಿಭಾಗದ ಎಲ್ಲಾ ಕಾರ್ಮಿಕರು, ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಮನವಿ ಮಾಡಲಾಗಿದೆ.

ಆರೋಗ್ಯ ತೀವ್ರವಾಗಿ ಹದಗೆಡುತ್ತಿದೆ. ಷೆಡ್ಯೂಲ್‌ಗೆ ಅನುಗುಣವಾಗಿ ಕಾರ್ಮಿಕರ ಅನುಪಾತ ಕಡಿಮೆ ಮಾಡಿರುವುದರಿಂದ ಇತರೆ ಎಲ್ಲಾ ಕಾರ್ಮಿಕರ ಅನುಪಾತ ಕಡಿಮೆ ಮಾಡಿರುವುದರಿಂದ ಇತರೆ ಎಲ್ಲಾ ಕಾರ್ಮಿಕರಿಗೂ ಕೆಲಸ ಒತ್ತಡ ಜಾಸ್ತಿಯಾಗಿದೆ. 5 ವಾಹನಗಳಿಗಿಂತ ಹೆಚ್ಚು ವಾಹನಗಳು ರಾತ್ರಿ ತಂಗುವ ಸ್ಥಳದಲ್ಲಿ ವಿಶ್ರಾಂತಿ ಕೊಠಡಿ, ಶೌಚಾಲಯಗಳನ್ನು ನೀಡಲು ಆಡಳಿತಾತ್ಮಕವಾಗಿ ತೀರ್ಮಾನಿಸಿದ್ದರೂ ಜಾರಿಯಾಗಿಲ್ಲ. ದೊಡ್ಡ ಬಸ್ ನಿಲ್ದಾಣಗಳಲ್ಲಿಯೂ ಸಹ ಚಾಲಕ-ನಿರ್ವಾಹಕರಿಗೆ ರಾತ್ರಿ ತಂಗಲು ವಿಶ್ರಾಂತಿ ಕೊಠಡಿಗಳನ್ನು ನೀಡುತ್ತಿಲ್ಲ. ರಾತ್ರಿ ತಂಗುವ ವೇಳೆ ವಾಹನಗಳಲ್ಲೇ ಮಲಗಲು ವ್ಯವಸ್ಥಿತ ಸೌಲಭ್ಯವಿಲ್ಲ. ಹಲವು ಕಡೆ ಮಹಿಳಾ ಸಿಬ್ಬಂದಿಗಳಿಗೆ ವಿಶ್ರಾಂತಿ ಕೊಠಡಿಗಳಿಲ್ಲ. ಕರ್ತವ್ಯದ ವೇಳೆ ಆಗುವ ಸಣ್ಣಪುಟ್ಟ ಪ್ರಕರಣಗಳಿಗೆ ವಿಪರೀತವಾದ ದಂಡ ಹಾಕುವುದು, ಇಂಕ್ರಿಮೆಂಟ್ ಕಡಿತ, ಅಮಾನತುಗೊಳಿಸುವುದು ನಂತರ ಘಟಕ ಬದಲಾಯಿಸಿ ಕಿರುಕುಳ ನೀಡುವುದು ಸರ್ವೇಸಾಮಾನ್ಯವಾಗಿದೆ. ತನಿಖಾಧಿಕಾರಿಗಳು ತನಿಖೆ ವೇಳೆ ಹಲವು ರೀತಿಯ ದೌರ್ಜನ್ಯ ನಡೆಸುತ್ತಾರೆ. ನ್ಯಾಯಯುತವಾಗಿ ಮಾತನಾಡಿದರೆ ದುರ್ನಡತೆ ಎಂದು ವಿಶೇಷ ವರದಿ ಹಾಕಿ ಕಿರುಕುಳ ನೀಡಲಾಗುತ್ತಿದೆ. ವಿಶೇಷ ವರದಿಗೆ ಯಾವುದೇ ದಾಖಲೆಗಳು ಇರಬೇಕಿಲ್ಲ.

ಸಾರಿಗೆ ನಿಗಮದಲ್ಲಿ ಸುತ್ತೋಲೆಗಳನ್ನು ಕಾನೂನಿನಡಿ ಮಾಡುವುದಿಲ್ಲ. ಅಧಿಕಾರಿಗಳು ತಮಗೆ ಬೇಕಾದಂತೆ ಸುತ್ತೋಲೆಗಳನ್ನು ತಯಾರಿಸಿ ಕಾರ್ಮಿಕರಿಗೆ ಕಿರುಕುಳ ನೀಡಲಾಗುತ್ತಿದೆ. ಆಡಳಿತ ವರ್ಗ ಫಾರಂ ನಂ.4 ಪ್ರಕಾರ ಡ್ಯೂಟಿ ಮಾಡಲು ತಿಳಿಸಿ ಚಾಲಕ-ನಿರ್ವಾಹಕರಿಗೆ, ಇಪಿಕೆಎಂ ಮತ್ತು ಕೆಎಂಪಿಎಲ್ ಹೆಸರಿನಲ್ಲಿ ನಿರಂತರ ಕಿರುಕುಳ ನೀಡಲಾಗುತ್ತಿದೆ. ರಾತ್ರಿ ಪಾಳಿ ಕೆಲಸ ಮಾಡಿ ಬಂದರೆ ಬೆಳಗ್ಗೆ ಯಾವುದಾದರೊಂದು ಗ್ರಾಮಕ್ಕೆ ಹೋಗಿ ಬರುವಂತೆ ಡ್ಯೂಟಿ ನಿಗದಿ ಮಾಡಲಾಗುತ್ತದೆ. ಇಡೀ ರಾತ್ರಿ ವಾಹನ ಚಾಲನೆ ಮಾಡಿ ಬಂದ ಚಾಲಕರಿಗೆ ಮತ್ತೊಂದು ಶಿಕ್ಷೆ. ಇಪಿಕೆಎಂ ಮತ್ತು ಕೆಎಂಪಿಎಲ್ ಕಡಿಮೆ ಇದ್ದರೆ ರಾತ್ರಿ ವೇಳೆಯಲ್ಲಿ ಕರ್ತವ್ಯ ನಿರ್ವಹಿಸಿ ಬಂದ ಚಾಲಕ, ನಿರ್ವಾಹಕರು ಘಟಕಕ್ಕೆ ಬಂದಾಗ ಸಂಚಾರಿ ಅಧಿಕಾರಿಗಳು ಹಾಗೂ ಘಟಕ ವ್ಯವಸ್ಥಾಪಕರು ಘಟಕಕ್ಕೆ ಬರುವವರೆಗೂ ಕಾಯಬೇಕು. ಅವರು ವಿಶ್ರಾಂತಿಯನ್ನೂ ಪಡೆಯಲು ಹೋಗುವಂತಿಲ್ಲ.

ಸಾರಿಗೆ ಸಂಸ್ಥೆಯಲ್ಲಿ ಕಾರ್ಮಿಕ ಸಂಘದ ಮಾನ್ಯತೆಗಾಗಿ ಚುನಾವಣೆಯನ್ನು 1996ರಿಂದ ನಡೆಸಿಲ್ಲ. ಸಾರಿಗೆ ನೌಕರರಿಗೆ ಸಂಘದ ಆಯ್ಕೆ ಮಾಡುವ ಹಕ್ಕನ್ನೇ ನೀಡದೆ ದಬ್ಬಾಳಿಕೆ ಮಾಡಲಾಗುತ್ತಿದೆ. ಸಾರಿಗೆ ನಿಗಮದಲ್ಲಿ ಕೈಗಾರಿಕಾ ಪ್ರಜಾಪ್ರಭುತ್ವ ಸಂಪೂರ್ಣ ನಶಿಸಿ ಹೋಗಿದೆ. ಸರ್ಕಾರಿ ಸ್ವಾಮ್ಯದ ಸಂಸ್ಥೆಯಲ್ಲಿ ನಿರಂಕುಶ ಆಡಳಿತ ನಡೆಯುತ್ತಿದೆ. ಖಾಸಗಿ ಮಾಲೀಕರಿಗಿಂತ ತೀವ್ರತರವಾದ ಶೋಷಣೆ ಮಾಡಲಾಗುತ್ತಿದೆ. 1996ರಿಂದ ಇಲ್ಲಿಯವರೆಗೂ ಕಾನೂನುಬದ್ಧ ಕೈಗಾರಿಕಾ ಒಪ್ಪಂದ ಮಾಡಿಲ್ಲ. ಅದಕ್ಕಾಗಿಯೇ ವೇತನ ಅತ್ಯಂತ ಕನಿಷ್ಠಮಟ್ಟದಲ್ಲಿದೆ.

ಇದರ ಭಾಗವಾಗಿ ಹಾಸನ ವಿಭಾಗದ ಕಾರ್ಮಿಕರೂ ಸಹ ದೌರ್ಜನ್ಯ ಕಿರುಕುಳಗಳನ್ನು ಅನುಭವಿಸುತ್ತಿದ್ದಾರೆ. ಕಾರ್ಮಿಕರು ಸಂಘಟಿತರಾಗಿ ಸರ್ಕಾರ ಮತ್ತು ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸಬೇಕಾಗಿದೆ. ಕಾರ್ಮಿಕರ ಮೇಲೆ ನಡೆಸುತ್ತಿರುವ ದೌರ್ಜನ್ಯ, ಅನ್ಯಾಯದ ಕ್ರಮಗಳು, ಕಾನೂನುಬಾಹಿರವಾದ ಆಡಳಿತ ಕ್ರಮವನ್ನು ನಿಲ್ಲಿಸುವಂತೆ ಒತ್ತಾಯಿಸಬೇಕಿದೆ. ಸಾರಿಗೆ ನಿಗಮದಲ್ಲಿ ಕಾರ್ಮಿಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಿ ಕಾನೂನುಬದ್ಧ ಆಡಳಿತ ನಡೆಸುವಂತೆ ಚಳವಳಿಗಳನ್ನು ನಡೆಸಬೇಕಾಗಿದೆ. ಸಾರಿಗೆ ನಿಗಮಕ್ಕೆ ಬರಬೇಕಾದ ಆದಾಯವನ್ನು ಅನಧಿಕೃತ ಖಾಸಗಿ ವಾಹನಗಳನ್ನು ದೋಚುತ್ತಿವೆ. ಸರ್ಕಾರ ಅನಧಿಕೃತ ಖಾಸಗಿ ವಾಹನಗಳ ಹಾವಳಿಯನ್ನು ತಡೆಗಟ್ಟಲು ಮುಂದಾಗಬೇಕು. ಸಾರಿಗೆ ನಿಗಮಕ್ಕೆ ಸರ್ಕಾರ ಬಜೆಟ್‌ನಲ್ಲಿ ಹಣ ಮೀಸಲಿಟ್ಟು ಸಾರ್ವಜನಿಕರಿಗೆ ಅತಿಮುಖ್ಯ ಮೂಲಭೂತ ಸೌಕರ್ಯಗಳಲ್ಲಿ ಒಂದಾದ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ. ಪ್ರಯಾಣಿಕರ ಸಾರಿಗೆಯನ್ನು ಸಂಪೂರ್ಣ ರಾಷ್ಟ್ರೀಕರಣ ಮಾಡಬೇಕು.

ಈ ಹಿನ್ನೆಲೆಯಲ್ಲಿ ಹಾಸನ ವಿಭಾಗದ ಕಾರ್ಮಿಕರ ಸಮಾವೇಶವನ್ನು ಹಾಸನದ ಅರಳೀಕಟ್ಟೆ ವೃತ್ತದಲ್ಲಿರುವ ಸಂಸ್ಕೃತ ಭವನದಲ್ಲಿ ದಿನಾಂಕ 28 ಮಾರ್ಚ್ 2019ರ ಗುರುವಾರ ಬೆಳಗ್ಗೆ 10.30 ಗಂಟೆಗೆ ನಡೆಸಲು ತೀರ್ಮಾನಿಸಲಾಗಿದೆ. ಹಾಸನ ವಿಭಾಗದ ಪ್ರಾದೇಶಿಕ ಕಾರ್ಯಾಗಾರದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ಮನವಿ ಮಾಡಲಾಗಿದೆ.

ಹಕ್ಕೊತ್ತಾಯಗಳು

1) ಕಾನೂನು ಬಾಹಿರವಾಗಿ ಕಿಮೀಗಳನ್ನು ಹೆಚ್ಚಿಸಿ ಫಾರಂ-4 ತಯಾರಿಸುತ್ತಿರುವ ಹಾಗೂ ಷೆಡ್ಯೂಲ್ ಒಟಿ ಕಡಿತ ಮಾಡುವುದನ್ನು ವಿರೋಧಿಸಿ
2) ಕಾನೂನಿನನ್ವಯ ಕೆಲಸದ ಅವಧಿಯನ್ನು ನಿಗದಿಗೊಳಿಸಲು ಒತ್ತಾಯಿಸಿ
3) ಹಕ್ಕಿನ ರಜೆ ಪಡೆಯಲು ಅವಕಾಶ ಕಲ್ಪಿಸಬೇಕು
4) ಷೆಡ್ಯೂಲ್ ಅನುಪಾತ ಕಡಿಮೆ ಮಾಡಿ ಕೆಲಸದ ಒತ್ತಡ ಹೆಚ್ಚಳ ವಿರೋಧಿಸಿ
5) ಘಟಕಗಳಲ್ಲಿ ಶುದ್ಧ ಕುಡಿಯುವ ನೀರು, ಕ್ಯಾಂಟೀನ್ ಸೌಲಭ್ಯಗಳನ್ನು ವಿಶ್ರಾಂತಿ ಗೃಹಗಳ ಸೌಲಭ್ಯಕ್ಕಾಗಿ
6) ವಸತಿಗೃಹಗಳ ನಿರ್ಮಾಣಕ್ಕಾಗಿ ಒತ್ತಾಯಿಸಿ
7) ರಾತ್ರಿ ತಂಗುವ ಸ್ಥಳದಲ್ಲಿ ವಿಶ್ರಾಂತಿ ಕೊಠಡಿ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು
8) ಕಾರ್ಮಿಕ ಸಂಘಗಳ ಚಟುವಟಿಕೆಗಳಿಗೆ ಅಡ್ಡಿಪಡಿಸುವ ಆಡಳಿತ ವರ್ಗದ ಧೋರಣೆಗಳನ್ನು ವಿರೋಧಿಸಿ
9) ಮಾನ್ಯತೆಗಾಗಿ ಕಾರ್ಮಿಕ ಸಂಘದ ಚುನಾವಣೆ ನಡೆಸಲು ಒತ್ತಾಯಿಸಿ
10) ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಿ ಕಾರ್ಮಿಕರ ಮೇಲಿನ ದೌರ್ಜನ್ಯ ಕಿರುಕುಳ ಇಂಕ್ರಿಮೆಂಟ್ ಕಡಿತ, ದಂಡದ ಆಡಳಿತ ನಿಲ್ಲಿಸಿ
11) ಸರ್ಕಾರ ಬಜೆಟ್‌ನಲ್ಲಿ ಸಾರಿಗೆ ನಿಗಮಗಳಿಗೆ ಹಣ ಒದಗಿಸಲು ಒತ್ತಾಯಿಸಿ
12) ಅನಧಿಕೃತ ಖಾಸಗಿ ವಾಹನಗಳ ಕಾರ್ಯಾಚರಣೆ ತಡೆಗಟ್ಟಿ, ಸಾರಿಗೆ ನಿಗಮಗಳ ಆದಾಯ ಹೆಚ್ಚಿಸಲು ಒತ್ತಾಯಿಸಿ
13) ಬಾರ್ ಡ್ಯೂಟಿ ಬದಲು ಎ/ಬಿ ಮಾರ್ಗಗಳನ್ನು ಆರಂಭಿಸಬೇಕು.

●

ಏಜೆನ್ಸಿದಾರರ ಮತ್ತು ಚಂದಾದಾರರ ಗಮನಕ್ಕೆ

ಏಜೆನ್ಸಿದಾರರಿಂದ ದೊಡ್ಡ ಮೊತ್ತದ ಪತ್ರಿಕೆಯ ಹಣ ಬಾಕಿಯಿದ್ದು ಪತ್ರಿಕೆಯನ್ನು ಹೊರ ತರುವುದು ಅಸಾಧ್ಯವಾಗಿದೆ. ನೀವು ಕೊಡಬೇಕಾದ ಬಾಕಿ ಹಣವನ್ನು ಇಂದಿನಿಂದ ಒಂದು ವಾರಗಳ ಒಳಗಾಗಿ ನೀವು ಬಾಕಿಯನ್ನು ಪಾವತಿ ಮಾಡದಿದ್ದರೆ ಪ್ರತಿಕೆಯನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಮ್ಮಿಂದ ಬರಬೇಕಾದ ಬಾಕಿ ಹಣದಲ್ಲಿ ಅರ್ಧದಷ್ಟನ್ನಾದರೂ ಕೂಡಲೇ ಕಳುಹಿಸಬೇಕೆಂದು ಕೋರಲಾಗಿದೆ.

ಅನೇಕ ನಮ್ಮ ವಾರ್ಷಿಕ ಚಂದಾದಾರರ ಚಂದಾ ಅವಧಿ ಮುಗಿದಿದ್ದು ಅವರು ಕೂಡಲೇ ವಾರ್ಷಿಕ ಚಂದಾ ಪಾವತಿ ಮಾಡಬೇಕೆಂದು ಕೋರುತ್ತೇವೆ.

-ಸಂಪಾದಕರು

ಹೆಣ್ಣು ಹೆಣ್ಣೆಂದು ಬೀಳುಗಳೆವರು ಕಣ್ಣು ಕಾಣದ ---!



ಪ್ರೊ. ಟಿ. ಆರ್. ಚಂದ್ರಶೇಖರ

ನಾಗರಿಕ ನೋಂದಣಿ ವ್ಯವಸ್ಥೆಯು ಪ್ರಕಟಿಸಿರುವ 2016ರ ವರದಿಯ ಪ್ರಕಾರ ರಾಜ್ಯದಲ್ಲಿ ಜನನದ ಸಂದರ್ಭದ ಲಿಂಗ ಅನುಪಾತವು 2007ರಲ್ಲಿ 1004ರಷ್ಟಿದ್ದುದು 2016ರಲ್ಲಿ 896ಕ್ಕಿಳಿದಿದೆ. 2018-19ರಲ್ಲಿ ಲಿಂಗಾನುಪಾತವನ್ನು ಉತ್ತಮಪಡಿಸುವುದಕ್ಕೆ ಸಂಬಂಧಿಸಿದ ಬೇಟಿ ಬಚಾವೋ-ಬೇಟಿ ಪಡಾವೋ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರ ಬಜೆಟ್ಟಿನಲ್ಲಿ ನೀಡಿದ್ದ ಅನುದಾನ ರೂ.11 ಕೋಟಿ. ಅದರಲ್ಲಿ ಖರ್ಚಾಗಿರುವುದು ರೂ.1.64 ಕೋಟಿ. ಈ ಯೋಜನೆಗಾಗಿ ಲಿಂಗ ಅನುಪಾತ ಕುಸಿಯುತ್ತಿರುವ ವಿಜಯಪುರ ಜಿಲ್ಲೆಯನ್ನು 2014-15ರಲ್ಲಿ ಆಯ್ಕೆ ಮಾಡಲಾಗಿತ್ತು. ಅಲ್ಲಿ ಏನಾಗಿದೆ? ಅಲ್ಲಿ ಲಿಂಗಾನುಪಾತ 2016ರಲ್ಲಿ 850. ಬೀದರಿನಲ್ಲಿ 2016ರ ಲಿಂಗಾನುಪಾತ ಕೇವಲ 743. ಹುಟ್ಟಿನ ಒಟ್ಟು ಮಕ್ಕಳಲ್ಲಿ ಹೆಣ್ಣು ಶಿಶುಗಳ ಪ್ರಮಾಣ ಶೇ.42.61. ಈ ಸಮಸ್ಯೆಯ ಗಂಭೀರತೆಯು ಸರ್ಕಾರಕ್ಕೆ ಅರ್ಥವಾಗಿಲ್ಲ ಎನ್ನುವುದು ಇದರಿಂದ ತಿಳಿಯುತ್ತದೆ.

ಪ್ರತಿ ವರ್ಷದಂತೆ ಈ ವರ್ಷವೂ ಮಾರ್ಚ್ 8 ರಂದು ಮಹಿಳಾ ದಿನಾಚರಣೆಯನ್ನು ಆಚರಿಸಿದ್ದಾಯಿತು. ಆದರೆ ನಮ್ಮ ಸರ್ಕಾರಕ್ಕೆ ಅದರ ಮಹತ್ವ ಅರ್ಥವಾಗಿಲ್ಲ. ಅಂದು ರಾಜ್ಯದ ಜನಸಂಖ್ಯೆಯಲ್ಲಿನ ಸುಮಾರು ಅರ್ಧದಷ್ಟಿರುವ ಮಹಿಳೆಯರ ಸ್ಥಿತಿಗತಿಯ ಬಗ್ಗೆ ಪರಾಮರ್ಶೆ ಮಾಡುವ ಪ್ರಯತ್ನವನ್ನು ಅದು ಮಾಡಲಿಲ್ಲ. ಮಹಿಳೆಯರ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳ ಬಗ್ಗೆ, ಅವರ ಸಮಸ್ಯೆಗಳ ಬಗ್ಗೆ ಒಮ್ಮೆಯಾದರೂ ವಿಧಾನಸಭೆ/ಪರಿಷತ್ತಿನಲ್ಲಿ ಶಾಸಕರು ಚರ್ಚೆ ಮಾಡಲಿಲ್ಲ. ಮಹಿಳೆಯರಿಗೆ ಸಂಬಂಧಿಸಿದ ಆಘಾತಕಾರಿ ಸಂಗತಿಗಳನ್ನು ಕುರಿತಂತೆ ಗಂಭೀರ ಚಿಂತನೆ ಸರ್ಕಾರದ ಮಟ್ಟದಲ್ಲಿ ನಡೆದದ್ದು ಕಾಣಲಿಲ್ಲ. ಸರ್ಕಾರಗಳು ಮಹಿಳೆಯರ ಸಮಸ್ಯೆಗಳನ್ನು ಎಷ್ಟೊಂದು ಉಡಾಪೆಯಿಂದ ತಳ್ಳಿ ಹಾಕುತ್ತವೆ ಎನ್ನುವುದಕ್ಕೆ ರಾಜ್ಯದ ಮಹಿಳೆಯರು ನಡೆಸಿದ ಮದ್ಯ ನಿಷೇಧ ಚಳುವಳಿ ನಿಯೋಗದ ಜೊತೆಯಲ್ಲಿ ನಮ್ಮ ಮುಖ್ಯಮಂತ್ರಿಗಳು ನಡೆದುಕೊಂಡ ರೀತಿಯು ಸಾಕ್ಷಿಯಾಗಿದೆ.


ಮಹಿಳಾ ಕೇಂದ್ರಿತ ಬಜೆಟ್ ಎನ್ನುವುದಿದೆ. ಅದೊಂದು ಕಾಟಾಚಾರದ ಸಂಗತಿಯಾಗಿ ಬಿಟ್ಟಿದೆ. ಇದರಲ್ಲಿ ಬಜೆಟ್ಟಿನಲ್ಲಿ ಮಹಿಳಾ ಉದ್ದೇಶಿತ ಕಾರ್ಯಕ್ರಮಗಳಿಗೆ ನೀಡಲಾದ ಅನುದಾನದ ಬಗ್ಗೆ ಸರ್ಕಾರವು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಿರುತ್ತದೆಯೇ ವಿನಾ ಸದರಿ ಕಾರ್ಯಕ್ರಮಗಳ ಫಲಿತಾಂಶ-ಫಲಪ್ರಾಪ್ತಿಯ ಮತ್ತು ಪರಿಣಾಮಗಳ ಬಗ್ಗೆ ಅದು ಮಾತನಾಡುವುದಿಲ್ಲ. ಏಕೆಂದರೆ ಅಲ್ಲಿ ಹೇಳಿಕೊಳ್ಳುವುದಕ್ಕೆ ಏನೂ ಇರುವುದಿಲ್ಲ! ಉದಾಹರಣೆಗೆ 2018-19ರಲ್ಲಿ ಲಿಂಗಾನುಪಾತವನ್ನು ಉತ್ತಮಪಡಿಸುವುದಕ್ಕೆ ಸಂಬಂಧಿಸಿದ ಬೇಟಿ ಬಚಾವೋ-ಬೇಟಿ ಪಡಾವೋ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರ ಬಜೆಟ್ಟಿನಲ್ಲಿ ನೀಡಿದ್ದ ಅನುದಾನ ರೂ.11 ಕೋಟಿ. ಅದರಲ್ಲಿ ಖರ್ಚಾಗಿರುವುದು ರೂ.1.64 ಕೋಟಿ. ಈ ಯೋಜನೆಗಾಗಿ ಲಿಂಗ ಅನುಪಾತ ಕುಸಿಯುತ್ತಿರುವ ವಿಜಯಪುರ ಜಿಲ್ಲೆಯನ್ನು 2014-15ರಲ್ಲಿ ಆಯ್ಕೆ ಮಾಡಲಾಗಿತ್ತು. ಅಲ್ಲಿ ಏನಾಗಿದೆ? ಅಲ್ಲಿ ಲಿಂಗಾನುಪಾತ 2016ರಲ್ಲಿ 850. ಬೀದರಿನಲ್ಲಿ 2016ರ ಲಿಂಗಾನುಪಾತ ಕೇವಲ 743. ಹುಟ್ಟಿನ ಒಟ್ಟು ಮಕ್ಕಳಲ್ಲಿ ಹೆಣ್ಣು ಶಿಶುಗಳ ಪ್ರಮಾಣ ಶೇ.42.61. ಈ ಸಮಸ್ಯೆಯ ಗಂಭೀರತೆಯು ಸರ್ಕಾರಕ್ಕೆ ಅರ್ಥವಾಗಿಲ್ಲ ಎನ್ನುವುದು ಇದರಿಂದ ತಿಳಿಯುತ್ತದೆ.

ನಾಗರಿಕ ನೋಂದಣಿ ವ್ಯವಸ್ಥೆಯು ಪ್ರಕಟಿಸಿರುವ 2016ರ ವರದಿಯ ಪ್ರಕಾರ ರಾಜ್ಯದಲ್ಲಿ ಜನನದ ಸಂದರ್ಭದ ಲಿಂಗ ಅನುಪಾತವು 2007ರಲ್ಲಿ 1004ರಷ್ಟಿದ್ದುದು 2016ರಲ್ಲಿ 896ಕ್ಕಿಳಿದಿದೆ. ಅಖಿಲ ಭಾರತ ಮಟ್ಟದಲ್ಲಿ ಇದು 903 ರಿಂದ 877ಕ್ಕಿಳಿದಿದೆ. ರಾಷ್ಟ್ರಮಟ್ಟಕ್ಕಿಂತ ನಮ್ಮದು ಉತ್ತಮವಾಗಿದೆ ಎಂದು ಬೀಗುವಂತಹ ಸಂಗತಿ ಇದಲ್ಲ. ರಾಜ್ಯದಲ್ಲಿ 2016ರಲ್ಲಿ ನೋಂದಣೆಯಾದ ಒಟ್ಟು ಮಕ್ಕಳ ಜನನ 11,07,258. ಇದರಲ್ಲಿ ಹೆಣ್ಣು ಶಿಶುಗಳ ಸಂಖ್ಯೆ 5,23,369 ಮತ್ತು ಗಂಡು ಶಿಶುಗಳ ಸಂಖ್ಯೆ 5,83,889. ಈ ಅಂಕಿಗಳ ಪ್ರಕಾರ ರಾಜ್ಯದಲ್ಲಿ 2016ರಲ್ಲಿ ಜನನದ ಸಂದರ್ಭದ ಪ್ರತಿ ಸಾವಿರ ಗಂಡು ಶಿಶುಗಳ ಎದುರಿಗೆ ಹುಟ್ಟಿದ ಹೆಣ್ಣು ಶಿಶುಗಳ ಸಂಖ್ಯೆ (ಲಿಂಗ ಅನುಪಾತ) 896. ಪ್ರತಿ ಸಾವಿರ ಗಂಡು ಮಕ್ಕಳ ಎದುರಿಗೆ ಹೆಣ್ಣು ಮಕ್ಕಳ ಕೊರತೆ 104. ರಾಜ್ಯದಲ್ಲಿ 2016ರಲ್ಲಿ(ಒಂದು ವರ್ಷದಲ್ಲಿ) ಒಟ್ಟು ಹೆಣ್ಣು ಮಕ್ಕಳ ಜನನದ ಕೊರತೆ 60,520. ಇದನ್ನು ಅಮರ್ತ್ಯ ಸೇನ್ "ಕಾಣೆಯಾದ ಹೆಣ್ಣು ಮಕ್ಕಳು" ಎನ್ನುತ್ತಾರೆ. ಒಟ್ಟು ಹುಟ್ಟಿದ ಹೆಣ್ಣು ಮಕ್ಕಳಲ್ಲಿ 2016ರಲ್ಲಿ ಕಾಣೆಯಾದ ಹೆಣ್ಣು ಶಿಶುಗಳ ಪ್ರಮಾಣ ಶೇ.11.56. ಇದೊಂದು ಅತ್ಯಂತ ಆಘಾತಕಾರಿ ಬೆಳವಣಿಗೆ. ಜನನದ ಸಂದರ್ಭದಲ್ಲಿನ ಲಿಂಗ ಅನುಪಾತದ ಕುಸಿತವು ಹೀಗೆ ಮುಂದುವರಿದರೆ ಲಿಂಗ ಸಂಬಂಧಗಳ ಸ್ಥಿತಿಯು ರಾಜ್ಯದಲ್ಲಿ ಎಲ್ಲಿಗೆ ಬರಬಹುದು? ಇದು ಹುಟ್ಟಿದ ಸಂದರ್ಭದಲ್ಲಿನ ಸ್ಥಿತಿ. ಇದು ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಮುಂದೆ ಯಾವ ಬಗೆಯ ಗಂಡಾತರವನ್ನು ಉಂಟು ಮಾಡಬಹುದು ಎಂಬುದನ್ನು ಊಹಿಸಿಕೊಳ್ಳುವುದಕ್ಕೆ ಭಯವಾಗುತ್ತದೆ. ಇದೊಂದು ಅತ್ಯಂತ ಗಂಭೀರ ಸಮಸ್ಯೆ.



ಹೆಣ್ಣು ಮಕ್ಕಳ ಬಗ್ಗೆ ಸಮಾಜಕ್ಕೆ ಏಕೆ ಇಷ್ಟೊಂದು ತಿರಸ್ಕಾರ ಮತ್ತು ಗಂಡು ಮಕ್ಕಳ ಬಗ್ಗೆ ಅತಿಯಾದ ವ್ಯಾಮೋಹ? ಇದು ಲಿಂಗ ಅಸಮಾನತೆಯ ಪರಮೋಚ್ಛ ಸೂಚಿಯಾಗಿದೆ. ನಮ್ಮದು ಮೂಲತಃ ಪುರುಷಶಾಹಿ ಪರಂಪರೆ. ಲಿಂಗ ಅಸಮಾನತೆ ಎನ್ನುವುದು ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಒಂದು ವಿಕೃತಿ. ಧಾರ್ಮಿಕವಾಗಿಯೂ ನಮ್ಮದು ಲಿಂಗ ತಾರತಮ್ಯವನ್ನು ಪೋಷಿಸಿಕೊಂಡು ಬಂದಿರುವ ಸಂಸ್ಕೃತಿ. ಸೂತಕದ-ಮುಟ್ಟಿನ ಹೆಸರಿನಲ್ಲಿ ಅವಳಿಗೆ ಧಾರ್ಮಿಕ ಹಕ್ಕುಗಳನ್ನು ನಿರಾಕರಿಸಲಾಯಿತು. ವಿಚಿತ್ರವೆಂದರೆ 21ನೆಯ ಶತಮಾನದಲ್ಲಿ ಮಹಿಳೆಯರಿಗೆ ವಿಧಿಸಿದ್ದ ಧಾರ್ಮಿಕ ಹಕ್ಕುಗಳ ನಿರಾಕರಣೆಯನ್ನು ಉಗ್ರವಾಗಿ ಸಮರ್ಥಿಸಲಾಗುತ್ತಿದೆ. ಇದಕ್ಕೆ ಶಬರಿಮಲ ಪ್ರಕರಣ ಸಾಕ್ಷಿಯಾಗಿದೆ. ಶಬರಿಮಲ ದೇವಾಲಯಕ್ಕೆ ಮಹಿಳೆಯರ ಪ್ರವೇಶದ ಮೇಲಿದ್ದ ನಿಷೇಧವನ್ನು ರದ್ದುಪಡಿಸಿ ಸರ್ವೋಚ್ಛ ನ್ಯಾಯಾಲಯದ ಸಂವಿಧಾನ ಪೀಠದ ನೀಡಿದ ತೀರ್ಪನ್ನು ಮನುವಾದಿಗಳು ಪ್ರತಿಭಟಿಸುತ್ತಿದ್ದಾರೆ. ಸಂಪ್ರದಾಯದ ರಕ್ಷಣೆ ಹೆಸರಿನಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಗಳೇ ಪ್ರತಿಭಟನೆಯನ್ನು ಬೆಂಬಲಿಸುತ್ತಿರುವುದು ವಿಷಾದನೀಯ. ನ್ಯಾಯಾಲಯವು ತನ್ನ ಸೆಪ್ಟೆಂಬರ್ 28, 2018ರ ತೀರ್ಪಿನಲ್ಲಿ ಮಹಿಳೆಯರಿಗೆ ದೇವಾಲಯ ಪ್ರವೇಶದ ನಿರಾಕರಣೆಯು ಸ್ಪಷ್ಟವಾಗಿ ಸಂವಿಧಾನದ ಪರಿಚ್ಛೇದ 17ರ ಉಲ್ಲಂಘನೆ ಎಂದು ಹೇಳಿದೆ. ಪರಂಪರೆಯಿಂದ ಹರಿದುಕೊಂಡು ಬರುತ್ತಿರುವ ತಾರತಮ್ಯವಾದಿ ಪ್ರಣಾಳಿಕೆಯನ್ನು ಊರ್ಜಿತಗೊಳಿಸಬೇಕೆನ್ನುವ ಸಾಂಪ್ರದಾಯಿಕವಾದಿಗಳ ಚಿಂತನೆಯು ಇಂದಿಗೂ ಗಟ್ಟಿಯಾಗಿದೆ. ಎಲ್ಲಿಯವರೆಗೆ ಇಂತಹ ಅಭಿವೃದ್ಧಿ, ಸಮಾನತೆ, ಮನುಷ್ಯ ಗೌರವ ವಿರೋಧಿ ಚಿಂತನೆಯನ್ನು ನಿರ್ನಾಮ ಮಾಡುವುದಿಲ್ಲವೋ ಅಲ್ಲಿಯವರೆಗೆ ಸಮಾಜದಲ್ಲಿ ಲಿಂಗ ತಾರತಮ್ಯ ಗಟ್ಟಿಯಾಗಿಯೇ ಮುಂದುವರಿಯುತ್ತದೆ ಮತ್ತು ಲಿಂಗ ಅನುಪಾತ ಕುಸಿಯುತ್ತಲೇ ನಡೆಯುತ್ತದೆ.

ಲಿಂಗ ಅನುಪಾತದ ಕುಸಿತವನ್ನು ತಡೆಯುವುದಕ್ಕೆ ಸರ್ಕಾರಗಳು ಅನೇಕ ಕ್ರಮಗಳನ್ನು ಜಾರಿಗೊಳಸಿವೆ. ನಮ್ಮ ರಾಜ್ಯದಲ್ಲಿ ಭಾಗ್ಯಲಕ್ಷ್ಮಿ ಕಾರ್ಯಕ್ರಮವಿದೆ. ಕೇಂದ್ರದಲ್ಲಿ ಬೇಟಿ ಪಡಾವೋ, ಬೇಟಿ ಬಚಾವೋ ಇದೆ. ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯಲು ಗರ್ಭಧಾರಣೆ ಪೂರ್ವ ಮತ್ತು ಪ್ರಸವಪೂರ್ವ ರೋಗಪತ್ತೆ ತಂತ್ರಜ್ಞಾನ ಕಾಯಿದೆ ಜಾರಿಯಲ್ಲಿದೆ. ಇವು ಯಾವುವೂ ಲಿಂಗ ಅನುಪಾತದ ಕುಸಿತವನ್ನು ತಡೆಯುವಲ್ಲಿ ಯಶಸ್ವಿಯಾಗಿಲ್ಲ. ಇಂತಹ ವಿಷಯಗಳಲ್ಲಿ ಶಾಸನಗಳು ಫಲ ನೀಡುವುದು ಕಷ್ಟ. ಅವು ಒಂದು ಹಂತದವರೆಗೆ ಕೆಲಸ ಮಾಡಬಹುದು. ಲಿಂಗ ಅನುಪಾತದ ವಿಷಯವು ಗಂಡು-ಹೆಣ್ಣುಗಳ ನಡುವಿನ ಮಾನಸಿಕ, ಭಾವನಾತ್ಮಕ ವಿಷಯ. ಇದು ಕೌಟುಂಬಿಕ ವ್ಯವಸ್ಥೆಗೆ ಸಂಬಂಧಿಸಿದ ಸಂಗತಿ.



ಇಂತಹ ವಿಷಯದಲ್ಲಿ ಸರ್ಕಾರಗಳು ಮಧ್ಯೆ ಪ್ರವೇಶಿಸಲು ಸಿದ್ಧವಿರುವುದಿಲ್ಲ ಅಥವಾ ಅಂತಹ ಒಂದು ನೆಪವನ್ನು ಅವು ಮುಂದು ಮಾಡುತ್ತವೆ. ಇದು ಸರ್ಕಾರಗಳಿಗೆ ಲಿಂಗ ಸಮಾನತೆಯ ಅರ್ಥ ತಿಳಿದಿಲ್ಲ ಎಂಬುದನ್ನು ತೋರಿಸುತ್ತದೆ. ಕುಟುಂಬದಲ್ಲಿ ಸಂತಾನೋತ್ಪತ್ತಿ ಬಗ್ಗೆಯಾಗಲಿ ಅಥವಾ ಆರ್ಥಿಕ ಸಂಗತಿಗಳ ಬಗ್ಗೆಯಾಗಲಿ ತೀರ್ಮಾನ ತೆಗೆದುಕೊಳ್ಳುವ ವಿಷಯದಲ್ಲಿ ಮಹಿಳೆಯರಿಗೆ ಹೆಚ್ಚಿನ ಅಧಿಕಾರ ಇಲ್ಲದಿರುವುದು ಲಿಂಗ ಅನುಪಾತದ ಕುಸಿತಕ್ಕೆ ಒಂದು ಕಾರಣವಾಗಿದೆ.

ಬಲಹೀನ ಮಹಿಳೆಯರು ಮತ್ತು ಮಕ್ಕಳು

ಮಹಿಳೆಯರನ್ನು ಅಬಲೆ ಎನ್ನುವ ಅರ್ಥದಲ್ಲಿ 'ಬಲಹೀನ' ಎಂಬ ನುಡಿಯನ್ನು ಇಲ್ಲಿ ಬಳಸುತ್ತಿಲ್ಲ. ಅದು ಸೆಕ್ಸಿಯಿಷ್ಟ ನುಡಿ ಎನ್ನುವ ಅರಿವು ನನಗಿದೆ. ಆದರೆ ಇಲ್ಲಿ ನಾನು ಹೇಳಲು ಪ್ರಯತ್ನಿಸುತ್ತಿರುವುದು ರಾಜ್ಯದಲ್ಲಿ ಮಹಿಳೆಯರು ಮತ್ತು ಮಕ್ಕಳು ಎದುರಿಸುತ್ತಿರುವ ತೀವ್ರ ರಕ್ತಹೀನತೆ (ಅನೀಮಿಯ). ಈ ವಿಷಯದ ಬಗ್ಗೆ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸರ್ವೆ(ಎನ್ ಎಫ್ ಎಚ್ ಎಸ್ 4)ಯ 2015-16ರ ನಾಲ್ಕನೆ ಸುತ್ತಿನ ವರದಿಯ ಪ್ರಕಾರ ಕರ್ನಾಟಕದಲ್ಲಿ 15 ರಿಂದ 49 ವಯೋಮಾನದ ಸಂತಾನೋತ್ಪತ್ತಿ ಸಾಮರ್ಥ್ಯದ ಮಹಿಳೆಯರಲ್ಲಿ ಅನೀಮಿಯ ಎದುರಿಸುತ್ತಿರುವವರ ಪ್ರಮಾಣ ಶೇ.45. ಇದು ಅತ್ಯಧಿಕ ಶೇ.58.7 ರಾಯಚೂರು ಜಿಲ್ಲೆಯಲ್ಲಿದೆ. ಇದೇ ರೀತಿ 6 ರಿಂದ 59 ತಿಂಗಳು ವಯೋಮಾನದ ಮಕ್ಕಳಲ್ಲಿ ರಕ್ತಹೀನತೆ ಪ್ರಮಾಣ 2015-16ರಲ್ಲಿ ಶೇ.61. ರಾಯಚೂರು, ಕಲಬುರಗಿ, ಬಳ್ಳಾರಿ, ಯಾದಗಿರಿ ಜಿಲ್ಲೆಗಳಲ್ಲಿ ಹುಟ್ಟಿದ ಮಕ್ಕಳಲ್ಲಿ ಶೇ.70 ರಷ್ಟು ಅನೀಮಿಯ ಎದುರಿಸುತ್ತಿರುತ್ತಾರೆ. ರಕ್ತಹೀನತೆ, ಅಪೌಷ್ಟಿಕತೆ, ಬಡತನ, ಹಸಿವು ಎದುರಿಸುತ್ತಿರುವ ಮಕ್ಕಳು ಸುಶಿಕ್ಷಿತ-ದೃಢಕಾಯದ ಭಾರತೀಯ ನಾಗರಿಕರಾಗುವುದು ಸಾಧ್ಯವೇ?


ನಮ್ಮದು ಒಕ್ಕೂಟ ರಾಜಕೀಯ ವ್ಯವಸ್ಥೆ. ಇಲ್ಲಿ ರಾಜ್ಯ ಸರ್ಕಾರಗಳ ಹಣಕಾಸು ಸ್ಥಿತಿಗತಿಯು ತುಂಬಾ ದುರ್ಬಲವಾಗಿರುತ್ತದೆ. ತೆರಿಗೆ ಮೂಲಗಳು ಸಮೃದ್ಧವಾಗಿರುವುದಿಲ್ಲ. ಇಂತಹ ಸ್ಥಿತಿಯಲ್ಲಿ ಹಣಕಾಸು ಸ್ಥಿತಿಯು ಸಬಲವಾಗಿರುವ ಮತ್ತು ತೆರಿಗೆ ಮೂಲಗಳು ಅತ್ಯಂತ ಉತ್ತಮ ಉತ್ಪಾದಕವಾಗಿರುವುದರಿಂದ ಕೇಂದ್ರ ಸರ್ಕಾರವು ಲಿಂಗ ಅನುಪಾತದ ಕುಸಿತ ಮತ್ತು ಅಪೌಷ್ಟಿಕತೆ ಸಮಸ್ಯೆಗಳ ಬಗ್ಗೆ ಬೃಹತ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಗತ್ಯವಿದೆ. ಈ ಸಮಸ್ಯೆ ರಾಜ್ಯಕ್ಕೆ ಮಾತ್ರ ಸೀಮಿತವಾದುದಲ್ಲ. ಇವು ಅಖಿಲ ಭಾರತ ಸಮಸ್ಯೆಗಳು. ಇದನ್ನು ಎದುರಿಸಬೇಕಾದ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೂ ಇದೆ. ಆದರೆ ಅದು ಇಂದು ಕೇವಲ ಜಿಡಿಪಿ, ನಿರುದ್ಯೋಗ-ಉದ್ಯೋಗ, ಅನಾಣ್ಯೀಕರಣ ಮುಂತಾದವುಗಳ ವರದಿಗಳಲ್ಲಿನ ಅಂಕಿಸಂಖ್ಯೆಯನ್ನು ತಿರುಚುವುದರಲ್ಲಿ ವಿಕೃತಗೊಳಿಸುವುದರಲ್ಲಿ ನಿರತವಾಗಿದೆ. ಲಿಂಗ ಸಮಾನತೆ ಬಗ್ಗೆ ಮಾತನಾಡುವುದು ಎಲ್ಲಿ ನಮ್ಮ ಪರಂಪರೆಗೆ ವಿರುದ್ಧವಾಗುತ್ತದೋ ಎನ್ನುವ ಭಯದಲ್ಲಿ ಅದು ಮುಳುಗಿ ಹೋಗಿರುವಂತೆ ಕಾಣುತ್ತದೆ.

ಕೇಂದ್ರವಾಗಲಿ ಅಥವಾ ರಾಜ್ಯಗಳಾಗಲಿ ಲಿಂಗ ಸಮಾನತೆ ಕಾರ್ಯಕ್ರಮಗಳ ಮೇಲೆ ವಿನಿಯೋಗಿಸುವ ಹಣವನ್ನು ಅನುತ್ಪಾದಕ ಎಂದು ತಿಳಿಯಬೇಕಾಗಿಲ್ಲ. ವಿಶ್ವಬ್ಯಾಂಕು ತನ್ನ 2012ರ ವಿಶ್ವ ಅಭಿವೃದ್ಧಿ ವರದಿಯಲ್ಲಿ ಲಿಂಗ ಸಮಾನತೆಯನ್ನು ಸ್ಮಾರ್ಟ್ ಎಕನಾಮಿಕ್ಸ್ ಎಂದು ಕರೆದಿದೆ. ಲಿಂಗ ಸಮಾನತೆಯು ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ. ಅದು ಅಭಿವೃದ್ಧಿಯ ಚಾಲಕ ಶಕ್ತಿ. ಲಿಂಗ ಸಮಾನತೆ ಎನ್ನುವುದು ಅಭಿವೃದ್ಧಿಯ ಸಾಧನ ಮಾತ್ರವಲ್ಲ. ಅದು ಮಹಿಳೆಯರು ಘನತೆಯಿಂದ ಮತ್ತು ಗೌರವದಿಂದ ಬದುಕಲು ಅನುವು ಮಾಡಿಕೊಡುವ ಒಂದು ಕ್ರಮ.

ಕರ್ನಾಟಕ ಸರ್ಕಾರ ಮತ್ತು ಸಂಬಂಧಿಸಿದ ಇಲಾಖೆಗಳು ಎನ್‌ಎಫ್‌ಎಚ್‌ಎಸ್ 4 ವರದಿಯನ್ನು(2015-16) ಮತ್ತು ನಾಗರಿಕ ನೋಂದಣೆ ವ್ಯವಸ್ಥೆ 2016 ವರದಿಗಳನ್ನು ಗಂಭೀರವಾಗಿ ಅಧ್ಯಯನ ಮಾಡಿ ಸೂಕ್ತವಾದ ಕ್ರಮಗಳನ್ನು ಸಮರೋಪಾದಿಯಲ್ಲಿ ಹಮ್ಮಿಕೊಳ್ಳಬೇಕು. ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯುವುವದಕ್ಕೆ ಸಂಬಂಧಿಸಿದ ಕಾನೂನುಗಳನ್ನು ಬಲಪಡಿಸಬೇಕು. ಶಾಲಾ-ಕಾಲೇಜುಗಳಲ್ಲಿ ವಿಚಾರ ಸಂಕಿರಣಗಳ ಮೂಲಕ ಲಿಂಗ ಸಮಾನತೆ ಬಗ್ಗೆ ಜಾಗೃತಿ ಮೂಡಿಸಬೇಕು. ●

ಭಾರತಕ್ಕೆ ಅಮೆರಿಕಾದ ಆಣತಿ!

ಮತ್ತೆ ಮಂಡಿಯೂರುತ್ತಿರುವ ಮೋದಿ ಸರಕಾರ



ಇರಾನಿನಿಂದ ತೈಲ ಆಮದಿನ ವಿಚಾರದಲ್ಲಿ ಅಮೆರಿಕಾದ ಆಣತಿಗೆ ತಲೆಬಾಗಿದ್ದ ಮೋದಿ ಸರಕಾರ ಈಗ ಮತ್ತೆ ವೆನೆಜುವೆಲಾದಿಂದ ತೈಲ ಆಮದಿನ ವಿಚಾರದಲ್ಲೂ ಒತ್ತಡಕ್ಕೆ ಒಳಗಾಗಿದೆ. ವೆನೆಜುವೆಲಾದಿಂದ ತೈಲ ಖರೀದಿಸುವುದರ ವಿರುದ್ಧ ಭಾರತ ಮತ್ತು ಇತರ ದೇಶಗಳಿಗೆ 'ಎಚ್ಚರಿಕೆ' ನೀಡಿದ್ದ ಅಮೆರಿಕದ ರಾಷ್ಟ್ರೀಯ ಭದ್ರತೆ ಸಲಹೆಗಾರ ಜಾನ್ ಬೋಲ್ಟನ್, ಈಗ, ಈ ಕುರಿತ ಅಮೆರಿಕದ 'ಕಳವಳವು' ಪರಿಹಾರಗೊಂಡಿದೆ ಎಂದು ಪ್ರತಿಕ್ರಿಯಿಸಿರುವುದು ಅಮೆರಿಕದ ಒತ್ತಡಗಳಿಗೆ ಭಾರತ ಹೇಗೆ ಈಡಾಗುತ್ತಿದೆ ಎನ್ನುವುದರ ಸಂಕೇತವಾಗಿದೆ*

ಪ್ರಕಾಶ್ ಕಾರಟ್



ಅಮೆರಿಕದ ಒತ್ತಡಕ್ಕೆ ಬಲಿ ಬೀಳುವ ಮೋದಿ ಸರಕಾರದ ಹೇಡಿತನದ ಧೋರಣೆಯ ಇನ್ನೊಂದು ಉದಾಹರಣೆಯೂ ಬಯಲಿಗೆ ಬಂದಿದೆ. ಅಮೆರಿಕದಲ್ಲಿ ಸುಂಕದಿಂದ ವಿನಾಯ್ತಿ ಇದ್ದ ಭಾರತದ 1900 ಸರಕುಗಳಿಗೆ ಇನ್ನು ಮುಂದೆ ಸುಂಕ ವಿಧಿಸಲಾಗುತ್ತದೆ. ಆದರೆ ಇದಕ್ಕೆ ಮೋದಿ ಸರಕಾರದ ಉಗ್ರ ಪ್ರತಿಕ್ರಿಯೆಯೇನೂ ಇಲ್ಲ.

ಅಮೆರಿಕದ ವ್ಯೂಹಾತ್ಮಕ ಮಿತ್ರ ದೇಶವಾಗುವುದಕ್ಕೆ ಮೋದಿ ಸರಕಾರ ದೊಡ್ಡ ಬೆಲೆಯನ್ನೇ ತೆರುತ್ತಿದೆ; ದೇಶದ ಸಾರ್ವಭೌಮತ್ವವನ್ನೇ ಅದು ಒತ್ತೆಯಿಡುತ್ತಿದೆ.

ಭಾರತವು ಯಾರಿಂದ ತೈಲವನ್ನು ಖರೀದಿಸಬೇಕು ಎಂಬ ಬಗ್ಗೆ ಅಮೆರಿಕ ನಿರ್ದೇಶನ ನೀಡುವುದರೊಂದಿಗೆ ಇತಿಹಾಸ ಮರುಕಳಿಸುತ್ತಿದೆ. ಇರಾನ್‌ನ ತೈಲ ವ್ಯವಹಾರದ ಮೇಲೆ ಕಳೆದ ವರ್ಷ ಏಕಪಕ್ಷೀಯವಾಗಿ ನಿರ್ಬಂಧ ವಿಧಿಸಿದ ನಂತರ ಇರಾನ್‌ನಿಂದ ಭಾರತ ತೈಲ ಖರೀದಿಸುವುದನ್ನು ಗಣನೀಯ ಪ್ರಮಾಣದಲ್ಲಿ ಕಡಿತ ಮಾಡಿಕೊಳ್ಳುವಂತೆ ಅಮೆರಿಕ ಒತ್ತಡ ಹೇರಿತ್ತು. ಇದೀಗ ಮತ್ತೆ ಅದೇ ಕೆಲಸಕ್ಕೆ ಕೈಹಾಕಿದೆ, ತಾನು ಕಾನೂನುಬಾಹಿರ ನಿರ್ಬಂಧ ಹೇರಿರುವ ವೆನಿಜುವೆಲಾದಿಂದ ತೈಲ ಖರೀದಿ ನಿಲ್ಲಿಸುವಂತೆ ಭಾರತದ ಮೇಲೆ ಅದು ಒತ್ತಡ ಹೇರುತ್ತಿದೆ.

ಸಾಮ್ರಾಜ್ಯಶಾಹಿ ಸೂಪರ್‌ಪವರ್‌ನೊಂದಿಗೆ ವ್ಯೂಹಾತ್ಮಕ ಸಂಬಂಧಗಳಿಗೆ ತನ್ನನ್ನು ಬಂಧಿಸಿಕೊಂಡ ಮೋದಿ ಸರಕಾರ ರಾಷ್ಟ್ರೀಯ ಹಿತಗಳಿಗೆ ಅನುಗುಣವಾಗಿ ವರ್ತಿಸುವಲ್ಲಿ ಅಸಮರ್ಥವಾಗಿದೆ. ಅದು ದೇಶದ ಇಂಧನ ಭದ್ರತೆಯನ್ನು ಕಾಪಾಡಿಕೊಳ್ಳುವಲ್ಲಿ ಅಸಮರ್ಥವಾಗಿದೆ.

2018ರ ಕೊನೆಯ ತ್ರೈಮಾಸಿಕದ ವರೆಗೆ ಭಾರತಕ್ಕೆ ತೈಲ ಸರಬರಾಜು ಮಾಡುವ ಮೂರನೇ ದೊಡ್ಡ ದೇಶವಾಗಿತ್ತು ಇರಾನ್. ಇರಾನ್‌ನೊಂದಿಗಿನ ಪರಮಾಣು ಒಪ್ಪಂದವನ್ನು ಕಡಿದುಕೊಂಡ ನಂತರ ಅಮೆರಿಕವು ಇರಾನ್‌ನ ತೈಲ ವ್ಯವಹಾರದ ಮೇಲೆ ಏಕಪಕ್ಷೀಯ ನಿರ್ಬಂಧವನ್ನು ಹೇರಿತು. ಈ ನಿರ್ಬಂಧಗಳನ್ನು ಭಾರತ ಪಾಲಿಸಬೇಕೆಂದು ಅದು ಒತ್ತಾಯಿಸಿತು. ಅಮೆರಿಕದ ಒತ್ತಡಕ್ಕೆ ತಕ್ಷಣವೇ ಮಣಿದ ಮೋದಿ ಸರಕಾರ ಇರಾನ್‌ನಿಂದ ತೈಲ ಖರೀದಿಯನ್ನು ಕಡಿಮೆ ಮಾಡುವುದಾಗಿ ಭರವಸೆ ನೀಡಿತು. ಮತ್ತು ಇತರ ಏಳು ದೇಶಗಳೊಂದಿಗೆ ಆರು ತಿಂಗಳ ಅವಧಿಗೆ (2018 ನವೆಂಬರ್‌ನಿಂದ 2019 ಮಾರ್ಚ್‌ವರೆಗೆ) ಕಡಿಮೆ ಪ್ರಮಾಣದ ತೈಲ ಖರೀದಿಗೆ ವಿನಾಯಿತಿ ಪಡೆಯಿತು.

ಇರಾನ್‌ನಿಂದ ಭಾರತ ತೈಲ ಖರೀದಿಯನ್ನು ದಿನಕ್ಕೆ 300 ಸಾವಿರ ಬ್ಯಾರೆಲ್‌ಗಳಿಗೆ ಇಳಿಸಿತು. ವಿದೇಶಾಂಗ ಕಾರ್ಯದರ್ಶಿ ಗೋಖಲೆ ಅವರ ಇತ್ತೀಚಿನ ವಾಷಿಂಗ್ಟನ್‌ಗೆ ಭೇಟಿ ವೇಳೆ ಮೋದಿ ಸರಕಾರ ವಿನಾಯಿತಿಯನ್ನು ಇನ್ನಷ್ಟು ಕಾಲ ವಿಸ್ತರಿಸುವಂತೆ ಮನವಿ ಮಾಡಿತು. ಇರಾನ್‌ನಿಂದ ಭಾರತದ ತೈಲ ಖರೀದಿಯನ್ನು ಪೂರ್ಣವಾಗಿ ನಿಲ್ಲಿಸಲು ಅಮೆರಿಕ ಒಂದು ವೇಳಾಪಟ್ಟಿಯನ್ನು ಸಿದ್ಧಪಡಿಸಿದ್ದಿರಬಹುದು.

ಇದು ಚೀನಾ ವಹಿಸಿದ ನಿಲುವಿಗೆ ತೀರಾ ವ್ಯತಿರಿಕ್ತವಾದುದಾಗಿದೆ. ಇರಾನ್‌ನಿಂದ ತೈಲ ಆಮದನ್ನು ಕಡಿತಗೊಳಿಸುವಂತೆ ಅಮೆರಿಕ ಕಳೆದ ವರ್ಷ ಚೀನಾಕ್ಕೆ ಸೂಚಿಸಿದಾಗ ಚೀನಾ ಅದನ್ನು ಖಂಡತುಂಡವಾಗಿ ತಿರಸ್ಕರಿಸಿತ್ತು. ಚೀನಾ ದೇಶ ಇರಾನ್‌ನ ಅತಿದೊಡ್ಡ ತೈಲ ಆಮದು ದೇಶವಾಗಿದ್ದು ಅದು ಈಗಲೂ ಮುಂದುವರಿದಿದೆ.

ಇರಾನ್‌ನಿಂದ ತೈಲ ಆಮದಿಗೆ ಸಂಬಂಧಿಸಿದಂತೆ ಒತ್ತಡಕ್ಕೆ ಮಣಿದ ಕೆಲವೇ ತಿಂಗಳುಗಳೊಳಗೆ ಇದೀಗ ವೆನಿಜುವೆಲಾದಿಂದ ತೈಲ ಆಮದನ್ನು ನಿಲ್ಲಿಸುವಂತೆ ಅಮೆರಿಕ ಆಗ್ರಹಿಸಿದೆ. ಇದು ಭಾರತದ ಇಂಧನ ನೀತಿಗೆ ಇನ್ನೊಂದು ದೊಡ್ಡ ಹೊಡೆತವಾಗಿದೆ. ಯಾಕೆಂದರೆ ಇರಾನ್ ಸ್ಥಾನದಲ್ಲಿ ಭಾರತಕ್ಕೆ ತೈಲ ಸರಬರಾಜು ಮಾಡುವ ಮೂರನೇ ದೊಡ್ಡ ದೇಶವಾಗಿ ವೆನೆಜುವೆಲಾ ಹೊರಹೊಮ್ಮಿತ್ತು.

ವೆನುಜುವೆಲಾದ ಮಾಡುರೊ ಸರಕಾರದ ಮೇಲೆ ಅಮೆರಿಕ 'ಯುದ್ಧ' ಸಾರಿದ್ದು ಅಲ್ಲಿನ ಸರಕಾರಿ ಒಡೆತನದ ತೈಲ ಕಂಪೆನಿ ಪಿಡಿವಿಎಸ್‌ಎ ಮೇಲೆ ಕಠಿಣ ದಿಗ್ಬಂಧನಗಳನ್ನು ವಿಧಿಸಿದೆ.

ವೆನೆಜುವೆಲಾದಿಂದ ತೈಲ ಖರೀದಿಸುವುದರ ವಿರುದ್ಧ ಭಾರತ ಮತ್ತು ಇತರ ದೇಶಗಳಿಗೆ ಅಮೆರಿಕದ ರಾಷ್ಟ್ರೀಯ ಭದ್ರತೆ ಸಲಹೆಗಾರ ಜಾನ್ ಬೋಲ್ಟನ್ ಎಚ್ಚರಿಕೆ ನೀಡಿದ್ದಾರೆ. ತದನಂತರ, ಈ ವಿಚಾರವಾಗಿ ತಾನು ಭಾರತದ ರಾಷ್ಟ್ರೀಯ ಭದ್ರತೆ ಸಲಹೆಗಾರ ಅಜಿತ್ ದೋವಲ್ ಜೊತೆ ಎರಡು ಬಾರಿ ಮಾತನಾಡಿರುವುದಾಗಿಯೂ ಬೋಲ್ಟನ್ ಬಹಿರಂಗವಾಗಿ ಹೇಳಿದ್ದಾರೆ. ಪುಲ್ವಾಮಾ ದಾಳಿ ಮತ್ತು ಅದರ ನಂತರದ ಬೆಳವಣಿಗೆಗಳ ಸಂಬಂಧ ದೋವಲ್ ಜೊತೆ ಮಾತನಾಡುವಾಗ ಬೋಲ್ಟನ್ ಈ ವಿಚಾರ ಪ್ರಸ್ತಾವಿಸಿದ್ದರೆಂಬುದು ಮಹತ್ವದ್ದಾಗಿದೆ.

ವೆನೆಜುವೆಲಾದಿಂದ ಭಾರತ ತೈಲ ಖರೀದಿಸುವುದರ ಸಂಬಂಧ ಉಂಟಾಗಿರುವ ಅಮೆರಿಕದ ಕಳವಳವು ಪರಿಹಾರಗೊಂಡಿದೆ ಎಂದು ಬೋಲ್ಟನ್ ಪ್ರತಿಕ್ರಿಯಿಸಿರುವುದು ಅಮೆರಿಕದ ಒತ್ತಡಗಳಿಗೆ ಭಾರತ ಹೇಗೆ ಈಡಾಗುತ್ತಿದೆ ಎನ್ನುವುದರ ಸಂಕೇತವಾಗಿದೆ.

ಭಾರತದ ವಿದೇಶಾಂಗ ಕಾರ್ಯದರ್ಶಿ ಗೋಖಲೆ ಮಾರ್ಚ್ 11ರಂದು ವಾಷಿಂಗ್ಟನ್‌ನಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಪೊಂಪಿಯೊರನ್ನು ಭೇಟಿ ಮಾಡಿದಾಗ, ಭಾರತವು ಮಾಡುರೊ ಆಡಳಿತದ ಆರ್ಥಿಕತೆಯ ಜೀವನಾಡಿಯಾಗಬಾರದು ಎಂದು ಆಗ್ರಹಿಸಿದರು. ಇರಾನ್‌ನಲ್ಲಿ ತನ್ನ ಪ್ರಯತ್ನಗಳಿಗೆ ಭಾರತದ ಅದ್ಭುತ ಬೆಂಬಲದ ರೀತಿಯಲ್ಲೇ "ವೆನಿಜುವೆಲಾದ ಜನತೆ ಎದುರಿಸುತ್ತಿರುವ ನಿಜವಾದ ಅಪಾಯವನ್ನು ಭಾರತ ಅರ್ಥ ಮಾಡಿಕೊಳ್ಳುತ್ತದೆಂಬ ವಿಶ್ವಾಸ ನನಗಿದೆ" ಎಂದೂ ಪೊಂಪಿಯೊ ಈ ಸಂದರ್ಭದಲ್ಲಿ ಹೇಳಿದರು.

ಭಾರತದ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳ ತೈಲ ಕಂಪೆನಿಗಳು ವಾಣಿಜ್ಯ ಹಿತಾಸಕ್ತಿ ಮೇರೆಗೆ ತೈಲೋತ್ಪಾದಕ ದೇಶಗಳಿಂದ ತೈಲವನ್ನು ಖರೀದಿಸುತ್ತಿವೆ. ಇರಾನ್‌ನಿಂದ ತುಂಬಾ ಅನುಕೂಲಕರ ಷರತ್ತುಗಳು ಹಾಗೂ ಅಗ್ಗದ ಸಾಗಾಟ ದರದೊಂದಿಗೆ ಭಾರತ ತೈಲವನ್ನು ಪಡೆಯುತ್ತಿತ್ತು. ವೆನಿಜುವೆಲಾ ಕೂಡ ಅನುಕೂಲಕರ ಷರತ್ತುಗಳೊಂದಿಗೆ ತೈಲವನ್ನು ಪೂರೈಸುತ್ತಿದೆ. ಈ ದೇಶಗಳಿಂದ ತೈಲ ಖರೀದಿಯನ್ನು ನಿಲ್ಲಿಸುವುದರಿಂದ ಭಾರತದ ವಾಣಿಜ್ಯ ಹಿತಾಸಕ್ತಿಗಳು ಮತ್ತು ಇಂಧನ ಭದ್ರತೆ ಅಪಾಯಕ್ಕೆ ಸಿಲುಕಲಿದೆ. ಇದರ ಬದಲಿಗೆ ಭಾರತವು ಅಮೆರಿಕದ ತೈಲವನ್ನು ಖರೀದಿಸಲು ಆರಂಭಿಸಿದೆ. ಅಮೆರಿಕದ ತೈಲ ಕಂಪೆನಿಗಳಿಂದ ಪೂರೈಕೆಗಾಗಿ ಇಂಡಿಯನ್ ಆಯಿಲ್ ಕಂಪೆನಿ (ಐಒಸಿ) ಇದೇ ಮೊದಲ ಬಾರಿಗೆ ಒಪ್ಪಂದ ಮಾಡಿಕೊಂಡಿದೆ.

ಅಮೆರಿಕದ ಒತ್ತಡಕ್ಕೆ ಬಲಿ ಬೀಳುವ ಮೋದಿ ಸರಕಾರದ ಹೇಡಿತನದ ಧೋರಣೆಯ ಇನ್ನೊಂದು ಉದಾಹರಣೆಯೂ ಬಯಲಿಗೆ ಬಂದಿದೆ. ಟ್ರಂಪ್ ತನ್ನ ವಾಣಿಜ್ಯ ಸಮರದಲ್ಲಿ ಭಾರತವನ್ನು ಗುರಿ ಮಾಡಿಕೊಂಡಿದ್ದಾರೆ. ಭಾರತದಿಂದ ಆಮದು ಮಾಡಿಕೊಳ್ಳುವ 1900 ವಸ್ತುಗಳ ಮೇಲೆ ತೆರಿಗೆ ವಿಧಿಸದ (ಝೀರೊ ಟ್ಯಾರಿಫ್) ತನ್ನ ಆದ್ಯತೆಯ ವ್ಯವಸ್ಥೆಯನ್ನು ಅಮೆರಿಕ ವಾಪಸ್ ಪಡೆದಿದೆ. ಆದರೆ ಇದಕ್ಕೆ ಉಗ್ರವಾಗಿ ಪ್ರತಿಕ್ರಿಯಿಸಿ ಭಾರತದ ಹಿತವನ್ನು ಕಾಯಲು ಅಮೆರಿಕದ ವಸ್ತುಗಳ ಮೇಲೆ ದುಬಾರಿ ತೆರಿಗೆ ಹೇರಿ ಮುಯ್ಯಿ ತೀರಿಸಲು ಮೋದಿ ಸರಕಾರ ಮುಂದಾಗಿಲ್ಲ.

ಅಮೆರಿಕದ ವ್ಯೂಹಾತ್ಮಕ ಮಿತ್ರ ದೇಶವಾಗುವುದಕ್ಕೆ ಮೋದಿ ಸರಕಾರ ದೊಡ್ಡ ಬೆಲೆಯನ್ನೇ ತೆರುತ್ತಿದೆ; ದೇಶದ ಸಾರ್ವಭೌಮತ್ವವನ್ನೇ ಅದು ಒತ್ತೆಯಿಡುತ್ತಿದೆ.

ಅನು: ವಿಶ್ವ

ಸಾಮ್ರಾಜ್ಯಶಾಹಿ ಆಕ್ರಮಣದ ವಿರುದ್ಧ ವೆನೆಝುವೆಲಾ ಜನತೆಯ ಹೋರಾಟಕ್ಕೆ ಭಾರತದ ಕಾರ್ಮಿಕರ ಬೆಂಬಲ– ದಿಲ್ಲಿಯಲ್ಲಿ ಸೌಹಾರ್ದ ಸಮಾವೇಶ



ವೆನೆಝುವೆಲಾ ಬೊಲಿವೇರಿಯನ್ ಗಣತಂತ್ರದದ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರಕಾರವನ್ನು ಅಸ್ಥಿರಗೊಳಿಸಲು ಅಮೆರಿಕನ್ ಸರಕಾರ ಮತ್ತು ಅದರ ಮಿತ್ರರುಗಳು ಹೆಚ್ಚಿಸುತ್ತಿರುವ ಆಕ್ರಮಣಗಳ ಹಿನ್ನೆಲೆಯಲ್ಲಿ ಮಾರ್ಚ್ 19ರಂದು ನವದೆಹಲಿಯಲ್ಲಿ ಭಾರತದ ಕಾರ್ಮಿಕರ ಸೌಹಾರ್ದ ಸಮಾವೇಶ ನಡೆಯಿತು. ಡಬ್ಲ್ಯುಎಫ್‌ಟಿಯು (ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟ)ಗೆ ಸಂಯೋಜಿತವಾಗಿರುವ ಭಾರತದ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಎಐಟಿಯುಸಿ, ಎಐಯುಟಿಯುಸಿ, ಎಐಸಿಸಿಟಿಯು, ಯುಟಿಯುಸಿ, ಟಿಯುಸಿಸಿ ಮತ್ತು ಇತರ ಸಂಯೋಜಿತ ಸಂಘಟನೆಗಳಾದ ರಾಜ್ಯ ಸರಕಾರಿ ನೌಕರರ ಒಕ್ಕೂಟ, ಕೇಂದ್ರ ಸರಕಾರಿ ನೌಕರರು ಮತ್ತು ಕಾರ್ಮಿಕರ ಸಮನ್ವಯ ಸಂಘಟನೆ, ಬಿಎಸ್‌ಎನ್‌ಎಲ್ ನೌಕರರ ಸಂಘ, ವಿಮಾನೌಕರರ ಸಂಘ ಮತ್ತು ಬ್ಯಾಂಕ್ ನೌಕರರ ಒಕ್ಕೂಟದ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು.

ಡಬ್ಲ್ಯುಎಫ್‌ಟಿಯು ನ ಉಪ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಸಿಐಟಿಯು ಮುಖಂಡ ಸ್ವದೇಶ್ ದೇವ್ ರಾಯ್, ಎಐಟಿಯುಸಿ ಯ ಬಿ.ವಿ.ವಿಜಯಲಕ್ಷ್ಮಿ, ಎಐಸಿಸಿಟಿಯು ನ ಸಂತೋಷ್ ರಾಯ್ ಮತ್ತು ಎಐಯುಟಿಯುಸಿ ಯ ಎಂ.ಚೌರಾಸಿಯ ಇದ್ದ ಅಧ್ಯಕ್ಷ ಮಂಡಳಿ ಈ ಸಮಾವೇಶವನ್ನು ನಡೆಸಿಕೊಟ್ಟಿತು.

ಸಮಾವೇಶ ಅಂಗೀಕರಿಸಿದ ನಿರ್ಣಯು ವೆನೆಝುವೆಲಾ ಜನತೆಯೊಂದಿಗೆ ಭಾರತದ ಕಾರ್ಮಿಕ ವರ್ಗದ ಸೌಹಾರ್ದ ವನ್ನು ವ್ಯಕ್ತಪಡಿಸಿತು. ಭಾರತದ ಅತ್ಯಂತ ಜನಪ್ರಿಯ ವಿದೇಶಾಂಗ ಧೋರಣೆಯಿಂದ ಹಿಂದೆ ಸರಿದಿರುವ ಮೋದಿ ಸರಕಾರ ವೆನೆಝುವೆಲಾದ ಸಾರ್ವಭೌಮತೆಯ ಮತ್ತು ತಮ್ಮ ರಾಜಕೀಯ ಮುಖಂಡತ್ವವನ್ನು ನಿರ್ಧರಿಸುವ ಅಲ್ಲಿನ ಜನತೆಯ ಹಕ್ಕಿನ ರಕ್ಷಣೆಗೆ ದೃಢವಾಗಿ ಮುಂದೆ ಬರಲು ನಿರಾಕರಿಸಿರುವ ನಿಲುವು ತಳೆದಿರುವುದನ್ನು ಈ ಸಮಾವೇಶ ಖಂಡಿಸಿತು. ಅಲ್ಲದೆ, ಅಮೆರಿಕಾದ ನಿರ್ಬಂಧಗಳಿಂದಾಗಿ ವೆನೆಝುವೆಲಾದಿಂದ ತೈಲ ಆಮದಿನ ಮೇಲೆ ಉಂಟಾಗಿರುವ ತೀವ್ರ ಹೊಡೆತ ಭಾರತದ ರಾಷ್ಟ್ರೀಯ ಹಿತಾಸಕ್ತಿಗಳಿಗೂ ಧಕ್ಕೆ ತರುತ್ತಿದೆ ಎಂದು ನಿರ್ಣಯ ಗಮನಿಸಿತು.

ಭಾರತ ಸರಕಾರ ವೆನೆಝುವೆಲಾ ಜನತೆಯೊಂದಿಗೆ, ನಮ್ಮ ದೇಶದ ದೀರ್ಘ ಕಾಲದ ಗೆಳೆತನ ಮತ್ತು ಪರಸ್ಪರ ಸಹಕಾರದ ದೀರ್ಘಕಾಲದಿಂದ ನಡೆಸಿಕೊಂಡು ಬಂದಿರುವ ಧೋರಣೆಯನ್ನು ಪುನರುಚ್ಚರಿಸಬೇಕು, ವೆನೆಝುವೆಲಾದ ವಿರುದ್ಧ ಡೊನಾಲ್ಡ್ ಟ್ರಂಪ್ ಒತ್ತಡಗಳಿಗೆ ಮಣಿಯಬಾರದು ಎಂದು ಸಮಾವೇಶ ಆಗ್ರಹಿಸಿದೆ.

ಭಾರತದ ಕಾರ್ಮಿಕ ವರ್ಗ ಮತ್ತು ದೇಶಪ್ರೇಮಿ ಜನತೆ ಜನಸಮೂಹಗಳನ್ನು ವೆನೆಝುವೆಲಾ ಜನತೆಯ ಬೆಂಬಲಕ್ಕೆ ಅಣಿನೆರೆಸಬೇಕು ಎಂದು ಈ ಸಮಾವೇಶ ಮನವಿ ಮಾಡಿಕೊಂಡಿದೆ.





ಧಾರವಾಡದ ಘೋರ ದುರಂತ

ನಿತ್ಯಾನಂದಸ್ವಾಮಿ

ಧಾರವಾಡದಿಂದ ಬೆಳಗಾವಿಗೆ ಹೋಗುವ ರಸ್ತೆಯ ಹೊಸ ಬಸ್ ನಿಲ್ದಾಣದ ಪಕ್ಕದಲ್ಲಿರುವ ಬಹು ಮಹಡಿ ಕಟ್ಟಡವೊಂದು ಏಕಾಏಕಿ ಕುಸಿದು ಬಿದ್ದ ಪರಿಣಾಮವಾಗಿ 14 ಕ್ಕು ಹೆಚ್ಚು ಜನರು ಸಾವಿಗೀಡಾಗಿದ್ದು, 60 ಕ್ಕೂ ಹೆಚ್ಚು ಮಂದಿಯನ್ನು ಕುಸಿದ ಕಟ್ಟಡದ ಅಡಿಯಿಂದ ರಕ್ಷಿಸಲಾಗಿದೆ. ನಗರೀಕರಣ ತೀವ್ರಗೊಳ್ಳುತ್ತಿದ್ದಂತೆ ರಾಜ್ಯದಲ್ಲಿ ಇಂತಹ ಘೋರ ದುರಂತಗಳು ಮೇಲಿಂದ ಮೇಲೆ ಸಂಭವಿಸುತ್ತಿದ್ದು ಧಾರವಾಡದ ಈ ಪ್ರಕರಣ ಇತ್ತೀಚಿನ ವರ್ಷಗಳಲ್ಲಿ ರಾಜ್ಯದಲ್ಲಿ ಸಂಭವಿಸಿದ ಅತಿ ದೊಡ್ಡ ಕಟ್ಟಡ ಕುಸಿತದ ಪ್ರಕರಣವಾಗಿದೆ ಎನ್ನಬಹುದು.

ಘಟನೆಯ ವರದಿಗಳು ದಿಗ್ಭ್ರಮೆ ಹುಟ್ಟಿಸುತ್ತವೆ. ಇಪ್ಪತ್ನಾಲ್ಕು ಸಾವಿರ ಚದರಡಿಯ ದೈತ್ಯ ಕಟ್ಟಡ ರಭಸದಿಂದ ನೆಲಕ್ಕುರುಳಿದಾಗ ಸಿಮೆಂಟ್ ಸ್ಲ್ಯಾಬ್‌ಗಳ ಅಡಿಯಲ್ಲಿ ನುಜ್ಜುಗುಜ್ಜಾದವರು ಕ್ಷಣದಲ್ಲೇ ಪ್ರಾಣ ಬಿಟ್ಟರು. ಎಲ್ಲೆಲ್ಲೂ ದೂಳು, ಎಲ್ಲೆಲ್ಲೂ ಕತ್ತಲು, ಕೆಲವರು ಉಸಿರಾಡಲಾಗದೆ, ಶ್ವಾಸಕೋಶದಲ್ಲಿ ದೂಳು ತುಂಬಿಕೊಂಡು ಒದ್ದಾಡಿ, ಒದ್ದಾಡಿ ಸಾವನ್ನಪ್ಪಿದರು. ಅಲ್ಲಿ ವಿವಿಧ ವಿಭಾಗಗಳ ಜನಗಳು ಸಿಕ್ಕಿಹಾಕಿಕೊಂಡಿದ್ದರು. ಮುಖ್ಯವಾಗಿ ಕಟ್ಟಡ ನಿರ್ಮಾಣ ಕಾರ್ಮಿಕರು. ಅವರಲ್ಲಿ ಉತ್ತರ ಭಾರತದ ಕಾರ್ಮಿಕರು ಸಹ ಇದ್ದರು. ಅಂಗಡಿಗಳಿಗೆ ಬಂದ ಗ್ರಾಹಕರು, ಕಂಪ್ಯೂಟರ್ ಸೆಂಟರ್‌ನಲ್ಲಿ ಬಂದಿದ್ದ ವಿದ್ಯಾರ್ಥಿಗಳಿದ್ದರು.

ಸೀಮಂತ ಕಾರ್ಯ ಮಾಡಿಕೊಳ್ಳಬೇಕಾಗಿದ್ದ ಗರ್ಭಿಣಿ ಜ್ಯೋತಿ ಹಿರೇಮಠ ತನ್ನ ಪತಿ ಆಶೀತ ಮತ್ತು ಮಾವ ಮಹೇಶ್ವರಯ್ಯ ಅವರನ್ನು ಕಳೆದುಕೊಂಡು ಗೋಳಾಡುತ್ತಿದ್ದಳು. ಅವಶೇಷಗಳ ಅಡಿಯಲ್ಲಿ ಸಿಕ್ಕಿಹಾಕಿಕೊಂಡಿರುವ ನನ್ನ ತಮ್ಮ ಸಹದೇವ ಸಾಳುಂತೆ (50) ಯನ್ನು ಹೊರತೆಗಿರಿ ಎಂದು ಅಕ್ಕ ಗಂಗೂಬಾಯಿ ರೋದಿಸುತ್ತಿದ್ದರು. ತನ್ನ ಏಳು ವರ್ಷದ ಮಗಳು ದಿವ್ಯಾಳ ಶವದೊಂದಿಗೆ ಅವಶೇಷಗಳ ಅಡಿಯಲ್ಲಿ 34 ತಾಸು ಕಾಲ ಕಳೆದ ತಾಯಿ ಪ್ರೇಮಾ ಉಣಕಲ್ ಅತ್ತು ಅತ್ತು ಕಣ್ಣೀರೆಲ್ಲ ಬತ್ತಿ ಹೋಗಿದ್ದವು. ಅಬ್ದುಲ್ ಖಾದರ್ ಜಿಲಾನಿ ತನ್ನ ತಾಯಿಯನ್ನು ತಬ್ಬಿಕೊಂಡು ಮೃತಪಟ್ಟ ತಂದೆಯನ್ನು ನೆನೆದು ಗೋಳಾಡುತ್ತಿದ್ದನು. ಬದುಕುಳಿದಿದ್ದ ಮಗುವೊಂದರ ಮೇಲೆ ಸಿಮೆಂಟ್ ಬ್ಲಾಕ್‌ವೊಂದು ಬಿದ್ದ ಪರಿಣಾಮವಾಗಿ ಆ ಮಗು ಮೃತಪಟ್ಟಿತು. ಅನೇಕ ಮೃತ ದೇಹಗಳು ವಿರೂಪಗೊಂಡಿದ್ದರ ಪರಿಣಾಮವಾಗಿ ಅವುಗಳನ್ನು ಗುರುತಿಸುವುದೂ ಸಹ ಸಮಸ್ಯೆಯಾಯಿತು. ಅವಶೇಷಗಳ ಅಡಿಯಲ್ಲಿ ಸಿಲುಕಿರುವವರ ಸಂಬಂಧಿಕರ ಆಕ್ರಂದನ, ಹೇಗಾದರೂ ಮಾಡಿ ಬದುಕಿಸಿಕೊಡಿ ಎಂದು ಪರಿಹಾರ ಕಾರ್ಯದಲ್ಲಿ ತೊಡಗಿರುವವರ ಮುಂದೆ ಅವರು ಬೇಡಿಕೊಳ್ಳುವ ದೃಶ್ಯ ನೋಡುವವರ ಮನ ಕುಲುಕುವಂತಿತ್ತು.

ಮುಖ್ಯ ಮಂತ್ರಿಗಳು, ಮಂತ್ರಿಗಳು, ಶಾಸಕರು ಘಟನಾ ಸ್ಥಳಕ್ಕೆ ಹೋಗಿದ್ದಾರೆ. ರಕ್ಷಣಾ ಕಾರ್ಯಾಚರಣೆಯನ್ನು ಪರಿಶೀಲಿಸಿದ್ದಾರೆ. ಪ್ರಾಣ ಕಳೆದುಕೊಂಡವರ ಹಾಗೂ ಗಾಯಗೊಂಡವರ ಸಂಬಂಧಿಕರನ್ನು ಬೇಟಿಯಾಗಿ ಸಾಂತ್ವನ ಹೇಳಿದ್ದಾರೆ. ಅಗತ್ಯ ಪರಿಹಾರ ನೀಡಲು ಎಲ್ಲ ಅಧಿಕಾವನ್ನು ಮುಖ್ಯ ಕಾರ್ಯದರ್ಶಿಗಳಿಗೆ ವಹಿಸಿದ್ದಾರೆ. ಇಂತಹ ದುರಂತಗಳಿಗೆ ಬಲಿಯಾಗುವವರೆಲ್ಲರೂ ಹೆಚ್ಚಾಗಿ ಅಮಾಯಕರು, ವಲಸೆ ಬಂದ ಬಡವರು. ಧಾರವಾಡ ದುರಂತದಲ್ಲಿ ಪ್ರಾಣ ಕಳೆದುಕೊಂಡ ಬಡಪಾಯಿಗಳು ಅವರವರ ಕುಟುಂಬಗಳಿಗೆ ಮುಖ್ಯ ಆಸರೆಯಾಗಿದ್ದವರು. ಕುಸಿದ ಕಟ್ಟಡವನ್ನು ಮತ್ತೆ ಕಟ್ಟಬಹುದು. ಆದರೆ ಎಷ್ಟು ಪರಿಹಾರ ಕೊಟ್ಟರೂ ಅವರ ಬದುಕನ್ನು ಮತ್ತೆ ಮೊದಲಿನಂತೆ ಕಟ್ಟಲು ಸಾಧ್ಯವಿಲ್ಲ.

'ಇಂಥ ದುರ್ಘಟನೆಗಳು ನಡೆಯದಂತೆ ಎಚ್ಚರ ವಹಿಸಲು ಚುನಾವಣೆ ನಂತರ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ನಿರ್ಮಾಣ ಹಂತದ ಕಟ್ಟಡ ಕುಸಿದು ಕೂಲಿ ಕಾರ್ಮಿಕರ ಜೀವ ಬಲಿತೆಗೆದುಕೊಂಡಿರುವುದು ರಾಜ್ಯದಲ್ಲಿ ಇದೇ ಮೊದಲೇನಲ್ಲ. ಬೆಂಗಳೂರಿನಲ್ಲಂತೂ ಇಂತಹ ದುರಂತಗಳು ಮೇಲಿಂದ ಮೇಲೆ ಸಂಭವಿಸುತ್ತಲೇ ಇವೆ. ಯಾಕೆ ಇದುವರೆಗೂ ಸರ್ಕಾರಗಳೂ ಯಾವುದೇ ಶಾಶ್ವತ ಕ್ರಮ ಕೈಗೊಂಡಿಲ್ಲ? ಬಡ ಕೂಲಿಕಾರರ ಜೀವಕ್ಕೆ ಬೆಲೆಯೇ ಇಲ್ಲವೇ?

ಕುಸಿದ ಕಟ್ಟಡಕ್ಕೆ ಸಂಬಂಧಿಸಿದ ಕೆಲವರನ್ನು ಪೊಲೀಸರು ಬಂಧಿಸಿ ಕ್ರಮ ಕೈಗೊಳ್ಳಲಾಗಿದೆ ಎನ್ನಲಾಗುತ್ತಿದೆ. ಇಂತಹ ಘಟನೆಗಳಲ್ಲಿ ಎಲ್ಲ ತಪ್ಪಿತಸ್ಥರನ್ನು ಬಂಧಿಸಿ ಅವರ ವಿರುದ್ಧ, ಅವರು ಯಾರೇ ಇರಲಿ, ಕ್ರಮ ಜರಗಿಸುವುದೇನೋ ಆಗಲೇಬೇಕು. ಆದರೆ ನಂತರ ಅವರು ತಮ್ಮ ಪ್ರಭಾವ ಬಳಸಿ, ಸಾಕ್ಷ್ಯಗಳ ಕೊರತೆ ನೆಪದಲ್ಲಿ ಖುಲಾಸೆಯಾಗುವುದನ್ನು ತಡೆಯುವವರು ಯಾರು? 2007 ರಲ್ಲಿ 68 ಮಂದಿ ಸಾವಿಗೆ ಕಾರಣವಾಗಿದ್ದ ಸಂಜೋತಾ ರೈಲು ಸ್ಫೋಟ ಪ್ರಕರಣಕ್ಕೆ ಸಂಬಂಧಿದಂತೆ ಸ್ವಾಮಿ ಅಸೀಮಾನಂದ ಮತ್ತು ಇತರ ಮೂವರು, ಆರೋಪಿಗಳು ಖುಲಾಸೆಯಾಗಿಲ್ಲವೆ? ಬಂಧನ ಮಾಡಿದ್ದಾರೆ. ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದಾರೆ ಎಂದಾಕ್ಷಣ ಕುಸಿದ ಕಟ್ಟಡದ ಅಡಿಯಲ್ಲಿ ಪ್ರಾಣಬಿಟ್ಟರು ಅಮಾಯಕರಿಗೆ ನ್ಯಾಯ ಸಿಕ್ಕಂತೆ ಆಗುವುದಿಲ್ಲ. ಪೊಲೀಸರು ರಾಜಕೀಯ ಪ್ರಭಾವಕ್ಕೆ ಸೊಪ್ಪು ಹಾಕಬಾರದು. ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾಗುವ ವರೆಗೂ ಪೊಲೀಸ್ ಅಧಿಕಾರಿಗಳು ಪಟ್ಟುಹಿಡಿದು, ನಿರ್ಲಕ್ಷ ತೋರದೆ, ಆಮಿಷಕ್ಕೆ ಒಳಗಾಗದೆ ತಮ್ಮ ಹುದ್ದೆಗೆ ಗೌರವ ಬರುವಂತೆ ಮಾಡಬೇಕು.

ಧಾರವಾಡ ದುರಂತದ ನಂತರ, ಇಂತಹ ದುರಂತಗಳಿಗೆ ಕಾರಣಗಳನ್ನು ಪಟ್ಟಿ ಮಾಡುವ ಕೆಲಸ ಮತ್ತೆ ಆರಂಭವಾಗಿದೆ. ಮಣ್ಣಿನ ಸುರಕ್ಷಿತ ಧಾರಣಾ ಸಾಮರ್ಥ್ಯದ ಪರೀಕ್ಷೆ ಮಾಡದಿರುವುದು, ಫಿಲ್ಲರ್ ಮರಳು ಬಳಸುವುದು, ಪಾಯ ಹಾಕಿದ ಮೇಲೆ ಮೂಲ ವಿನ್ಯಾಸದಲ್ಲಿ ಮಾರ್ಪಾಡು ಮಾಡುವುದು, ಪಿಲ್ಲರ್ ಹಾಕುವಾಗ ನಿಗದಿಗಿಂತ ಕಡಿಮೆ ಗುಣಮಟ್ಟದ ಕಬ್ಬಿಣ ಬಳಸುವುದು ಇತ್ಯಾದಿ. ಸರ್ಕಾರಗಳ ಬಂಡವಾಳಶಾಹಿಪರ ನೀತಿಗಳಿಂದಾಗಿ ಅನಿಯಮಿತವಾಗಿ ನಗರೀಕರಣ ಬೆಳೆಯುತ್ತಿದೆ. ನೈಸರ್ಗಿಕ ಮರಳಿನ ಕೊರತೆ ತೀವ್ರವಾಗಿದೆ. ಮಳೆಯ ಕೊರತೆ ಮರಳಿನ ಕೊರತೆಗೆ ಕಾರಣವಾಗುತ್ತದೆ. ಕೊರತೆಯ ಮರಳನ್ನು ಜನಸಾಮಾನ್ಯರಿಗೆ ಅವರ ಕೈಗೆಟುಕುವ ದರಗಳಲ್ಲಿ ಒದಗಿಸಲು ಸರ್ಕಾರದ ಕಾರ್ಯಕ್ರಮವಿಲ್ಲ. ಮರಳಿನ ಕಳ್ಳ ಸಾಗಾಣಿಕೆ ಬೆಳೆಯುತ್ತಿದ್ದು ಅದನ್ನು ತಡೆಯಲು ಹೋಗುವ ಪ್ರಾಮಾಣಿಕ ಅಧಿಕಾರಿಗಳ ಮೇಲೆ ಹಲ್ಲೆಗಳಾಗುತ್ತವೆ. ಮರಳಿನ ಬೆಲೆ ಗಗನಕ್ಕೇರುತ್ತದೆ. ಬಡವರಿಗೆ ಮನೆಕಟ್ಟಲು ಮರಳು ಸಿಗುವುದಿಲ್ಲ. ಕಟ್ಟಡ ಕಾರ್ಮಿಕರಿಗೆ ಕೆಲಸ ಸಿಗುವುದಿಲ್ಲ. ಹೀಗಾಗಿ ಫಿಲ್ಲರ್ ಮರಳನ್ನು ಹೆಚ್ಚು ಹೆಚ್ಚಾಗಿ ಅಕ್ರಮವಾಗಿ ಬಳಕೆ ಮಾಡಲಾಗುತ್ತದೆ. ಇದರಿಂದ ಕಟ್ಟಡಗಳ ಭದ್ರತೆಗೆ ಧಕ್ಕೆ ಉಂಟಾಗುತ್ತದೆ.

ಇಂತಹ ಅನಾಹುತಗಳಿಗೆ ಬಂಡವಾಳಶಾಹಿ ಲಾಭಕೋರತನವೇ ಪ್ರಮುಖ ಕಾರಣವಾಗಿರುತ್ತದೆ. ಮಾಲೀಕರು ಅಥವ ರಿಯಲ್ ಎಸ್ಟೇಟ್ ಕುಳಗಳು ಲಾಭಗಳಿಗಾಗಿ ಈ ಕಟ್ಟಡ ನಿರ್ಮಾಣ ದಂಧೆಗೆ ಇಳಿಯುತ್ತಾರೆ. ಕಡಿಮೆ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ ಉಳಿತಾಯ ಮಾಡಲು ನೋಡುತ್ತಾರೆ. ಗುತ್ತಿಗೆದಾರರು, ಇಂಜಿನಿಯರುಗಳೂ ತಮ್ಮ ಪಾಲಿನ ಲೂಟಿ ಮಾಡುತ್ತಾರೆ. ಎಲ್ಲರೂ ಸೇರಿ ಕಳಪೆಮಟ್ಟದ ಸಾಮಗ್ರಿಗಳನ್ನು, ಅಗತ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಬಳಸಿ ಕುಸಿದು ಹೋಗುವ ಕಟ್ಟಡಗಳನ್ನು ಕಟ್ಟುತ್ತಾರೆ. ಖಾಸಗಿ ಕ್ಷೇತ್ರದಲ್ಲಿ ಹೀಗೆ ಲೂಟಿ ಮಾಡುವವರು ಸರ್ಕಾರಿ ಕ್ಷೇತ್ರದಲ್ಲಿ ಸುಮ್ಮನಿರುತ್ತಾರಾ?

ಅಲ್ಲಿ 'ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದಂತೆ' ಮಾಡಿ ಮುಗಿಸುತ್ತಾರೆ. ಇದರ ಪರಿಣಾಮವಾಗಿ ಸೇತುವೆಗಳು, ಮೇಲ್ಸೇತುವೆಗಳು, ಅಣೆಕಟ್ಟುಗಳು, ಕಾಲುವೆಗಳು, ನೀರಿನ ಟ್ಯಾಂಕ್‌ಗಳು, ರಸ್ತೆಗಳು, ಶಾಲೆಗಳು, ಆಸ್ಪತ್ರೆಗಳು ಕುಸಿದು ಬಿದ್ದು ಅಮಾಯಕರನ್ನು ಸಾಯಿಸುತ್ತವೆ. ಅಧಿಕಾರಿಗಳಿಗೂ ಗುತ್ತಿಗೆದಾರರಿಗೂ ನಡುವೆ ಇರುವ ಗುಪ್ತವಾದ ಮೈತ್ರಿ ಸರ್ಕಾರಿ ಅನುದಾನದ ದುರ್ಬಳಕೆಗೆ ಕಾರಣವಾಗುತ್ತದೆ.

ಬಂಡವಾಳಶಾಹಿ ಪದ್ಧತಿ ಇರುವವರೆಗೂ ಭ್ರಷ್ಟಾಚಾರ, ಲಾಭಕೋರತನ ಇದ್ದೇ ಇರುತ್ತದೆ. ಬಂಡವಾಳಶಾಹಿಗಳನ್ನು ಬೆಂಬಲಿಸುತ್ತಾ ಭ್ರಷ್ಟಾಚಾರದ ನಿರ್ಮೂಲನೆ ಮಾಡುತ್ತೇನೆ ಎಂದು ಘೋಷಣೆ ಮಾಡುವುದು ಪ್ರಧಾನಿ ನರೇಂದ್ರ ಮೋದಿಯವರು 100 ದಿನಗಳಲ್ಲಿ ವಿದೇಶಗಳಲ್ಲಿರುವ ಕಪ್ಪು ಹಣವನ್ನು ವಾಪಸ್ಸ್ ತರುತ್ತೇನೆ ಎಂದು ಹೇಳಿದಂತೆ. ಲಾಭಕೋರ ಬಂಡವಾಳಶಾಹಿ ಪದ್ಧತಿ ವಿರುದ್ಧ ಮಾತೆತ್ತದ ಮೋದಿ ಬಂಡವಾಳಗಾರರ ಏಜೆಂಟ್.



ಮೈಸೂರಲ್ಲಿ 'ಮಾರ್ಕ್ಸ್ 200-ಕ್ಯಾಪಿಟಲ್ 150 ಮಾಲಿಕೆ' 3ನೇ ಕಂತಿನ ಪುಸ್ತಕ ಬಿಡುಗಡೆ

'ಮಾನವ ಚರಿತ್ರೆಯ ಅಧ್ಯಯನಕ್ಕೆ ವಿಜ್ಞಾನ-ತಂತ್ರಜ್ಞಾನದ ಅಧ್ಯಯನ ಅಗತ್ಯ'



ವಸಂತರಾಜ ಎನ್.ಕೆ.

'ಮಾನವ ಚರಿತ್ರೆಯ ಅಧ್ಯಯನಕ್ಕೆ ವಿಜ್ಞಾನ-ತಂತ್ರಜ್ಞಾನದ ಅಧ್ಯಯನ ಅಗತ್ಯ' ಎಂದು ಜನವಿಜ್ಞಾನ ಚಳುವಳಿಗಳ ಅಖಿಲ ಭಾರತ ಜಾಲದ ಅಧ್ಯಕ್ಷ ಡಾ. ಸವ್ಯಸಾಚಿ ಚಟರ್ಜಿ ಅವರು ಹೇಳಿದರು. ಅವರು ಕ್ರಿಯಾ-ನವಕರ್ನಾಟಕ ಪ್ರಕಾಶನಗಳು ಮೈಸೂರಿನಲ್ಲಿ ಮಾರ್ಚ್ 17ರಂದು ಆಯೋಜಿಸಿದ್ದ 'ಮಾರ್ಕ್ಸ್ 200-ಕ್ಯಾಪಿಟಲ್ 150 ಮಾಲಿಕೆ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ 'ಮಾರ್ಕ್ಸ್‌ವಾದ ಮತ್ತು ವಿಜ್ಞಾನ' ವಿಷಯದಲ್ಲಿ ಉಪನ್ಯಾಸ ನೀಡಿದರು. ಮಾರ್ಕ್ಸ್ ಕೃತಿಗಳಾದ 'ಮತಧರ್ಮದ ಕುರಿತು', 'ಲೂಯಿ ಬೋನಪಾರ್ಟೆಯ ಹದಿನೆಂಟನೇ ಬ್ರೂಮೇರ್ ಮತ್ತು ಕೂಲಿಗೆಲಸ ಹಾಗೂ ಬಂಡವಾಳ', ಮತ್ತು ಹಿರಿಯ ಕಮ್ಯುನಿಸ್ಟ್ ನಾಯಕ ಬಿ.ವಿ.ಕಕ್ಕಿಲ್ಲಾಯ ಅವರು ಬರೆದ ಮಹತ್ವದ ಕೃತಿ 'ಕಾರ್ಲ್ ಮಾರ್ಕ್ಸ್, ಬದುಕು-ಬರಹ' ಎಂಬ ಮೂರು ಪುಸ್ತಕಗಳನ್ನು ಅಂದು ಬಿಡುಗಡೆ ಮಾಡಲಾಯಿತು.

ಮಾನವ ಚರಿತ್ರೆಯಲ್ಲಿ ವಿಜ್ಞಾನ-ತಂತ್ರಜ್ಞಾನಗಳು ಮಹತ್ವದ ಪಾತ್ರ ವಹಿಸಿವೆ. ಆದ್ದರಿಂದ ಅವುಗಳದ್ದೇ ಚಾರಿತ್ರಿಕ ಬೆಳವಣಿಗೆಯನ್ನು ಮತ್ತು ಸಮಾಜದ ಬದಲಾವಣೆಯಲ್ಲಿ ಅವು ವಹಿಸಿದ ಪಾತ್ರವನ್ನು ಅಧ್ಯಯನ ಮಾಡುವುದು ಅಗತ್ಯ ಎಂದು ಚಿಂತಕರಾದ ಮಾರ್ಕ್ಸ್-ಎಂಗೆಲ್ಸ್ ಕಂಡುಕೊಂಡಿದ್ದರು. ಮಾನವನ ಅಸ್ತಿತ್ವ ಮತ್ತು ವಿಚಾರಗಳ ಮೇಲೆ ವಿಜ್ಞಾನ-ತಂತ್ರಜ್ಞಾನಗಳು ಆಳವಾದ ಪ್ರಭಾವ ಬೀರುವುದರಿಂದಲೂ ಇಂತಹ ಅಧ್ಯಯನದ ಅಗತ್ಯವನ್ನು ಅವರು ಮನಗಂಡಿದ್ದರು. ಮಾರ್ಕ್ಸ್-ಎಂಗೆಲ್ಸ್ ಈ ಕೆಲಸವನ್ನು ತಮ್ಮ ನಡುವೆ ಹಂಚಿಕೊಂಡಿದ್ದರು. ಗಣಿತದ ಅಧ್ಯಯನವನ್ನು ಮಾರ್ಕ್ಸ್ ವಹಿಸಿಕೊಂಡರೆ, ಇತರ ಎಲ್ಲಾ ವಿಜ್ಞಾನ-ತಂತ್ರಜ್ಞಾನಗಳ ವಿಭಾಗಗಳ ಅಧ್ಯಯನವನ್ನು ಎಂಗೆಲ್ಸ್ ವಹಿಸಿಕೊಂಡಿದ್ದರು. ಇದರ ಫಲವಾಗಿ ಬಂದ 'ಪ್ರಕೃತಿಯ ಗತಿತಾರ್ಕಿಕತೆ' (ಡಯಲೆಕ್ಟಿಕ್ಸ್ ಆಫ್ ನೇಚರ್) ಎಂಗೆಲ್ಸ್ ಅವರ ಮಹತ್ವದ ಕೃತಿ. ಉತ್ಪಾದನಾ ಪ್ರಕ್ರಿಯೆಯಲ್ಲಿ ಯಂತ್ರಗಳ ಮತ್ತು ಒಟ್ಟಾರೆಯಾಗಿ ತಂತ್ರಜ್ಞಾನದ ಪಾತ್ರ, ಕೆಲಸದ ದಿನದ ಉದ್ದ ಮತ್ತು ಕಾರ್ಮಿಕರ ಮೇಲೆ ಅವುಗಳ ಇತರ ಪರಿಣಾಮಗಳು ಮತ್ತು ಸಾಪೇಕ್ಷ ಮಿಗುತಾಯ ಮೌಲ್ಯವನ್ನು ಗರಿಷ್ಠಗೊಳಿಸುವವಲ್ಲಿ ತಂತ್ರಜ್ಞಾನದ ಪಾತ್ರಗಳನ್ನು 'ಬಂಡವಾಳ'ದ ಸಂಪುಟ 1ರಲ್ಲಿ ಅದಕ್ಕೆ ಮೀಸಲಿಟ್ಟ ಎರಡು ಅಧ್ಯಾಯಗಳಲ್ಲಿ ವಿವರವಾಗಿ ಮಾರ್ಕ್ಸ್ ನಿರೂಪಿಸಿದ್ದಾರೆ. ಇವಲ್ಲದೆ ಇತರ ಹಲವು ಕೃತಿಗಳಲ್ಲಿ, ವಿಶೇಷವಾಗಿ ತತ್ವಶಾಸ್ತ್ರೀಯ ಕೃತಿಗಳಲ್ಲಿ, ಇಬ್ಬರೂ ಈ ಕುರಿತು ತಮ್ಮ ಚಿಂತನೆಗಳನ್ನು ನಿರೂಪಿಸಿದ್ದಾರೆ, ಎಂದು ಡಾ. ಚಟರ್ಜಿ ಅವರು ತಿಳಿಸಿದರು.

ಕೈಗಾರಿಕಾ ಕ್ರಾಂತಿ ನಡೆದು ಅವುಗಳ ಪರಿಣಾಮ ಗರಿಷ್ಠಗೊಂಡ ಸನ್ನಿವೇಶದಲ್ಲಿ, ವಿಜ್ಞಾನ-ತಂತ್ರಜ್ಞಾನಗಳ ಅಧ್ಯಯನವನ್ನು ಮಾರ್ಕ್ಸ್-ಎಂಗೆಲ್ಸ್ ಮಾಡುತ್ತಿದ್ದರು. ನ್ಯೂಟನನ ಚಲನೆಯ 3 ನಿಯಮಗಳು ಮತ್ತು ಗುರುತ್ವಾಕರ್ಷಣೆಯ ನಿಯಮಗಳು ಸಾರ್ವತ್ರಿಕ ನಿಯಮಗಳು ಎಂದು ಸಾಧಿತವಾಗಿ ಅವುಗಳನ್ನು ಆಕಾಶಕಾಯಗಳಿಗೆ ಅನ್ವಯಿಸುವ ಕೆಪ್ಲರ್, ಗ್ಯಾಲಿಲಿಯೋ, ಹ್ಯಾಲಿ ಮುಂತಾದವರ ಕೊಪರ್ನಿಕನ್ ಕ್ರಾಂತಿಯನ್ನು ಮುನ್ನಡೆಸಿದ್ದರ ಆಳವಾದ ಪರಿಣಾಮ ವೈಚಾರಿಕತೆಯ ಮೇಲೆ ಬೀರಿದ್ದ ಸನ್ನಿವೇಶ ಅದು. ಪ್ರಾಕೃತಿಕ ವಿದ್ಯಮಾನಗಳ ಚಲನಶೀಲತೆಯನ್ನು ವಿವರಿಸುವುದು ಮಾತ್ರವಲ್ಲ, ಹ್ಯಾಲಿ ಧೂಮಕೇತು ಮುಂದಿನ ಬಾರಿ ಯಾವಾಗ ಬರುತ್ತದೆ ಎಂದು ಮೊದಲೇ ವೈಜ್ಞಾನಿಕವಾಗಿ ನಿರ್ಧರಿಸುವ ಮೂಲಕ, ಅವುಗಳ 'ಭವಿಷ್ಯ' ಸಹ ಹೇಳುವುದು ವಿಜ್ಞಾನದಿಂದ ಸಾಧ್ಯ ಎಂದೂ ಸಾಧಿತವಾಗಿದ್ದ ಸನ್ನಿವೇಶವದು. ಚಾರ್ಲ್ಸ್ ಡಾರ್ವಿನ್ ಅವರ ಮೇರುಗ್ರಂಥ 'ಜೀವಿಗಳ ಉಗಮ' ಪ್ರಕಟವಾಗಿ 'ಜೀವ ವಿಕಾಸವಾದ' ವೈಚಾರಿಕ ಅಲ್ಲೋಲ ಕಲ್ಲೋಲ ಉಂಟು ಮಾಡಿದ್ದ ಸನ್ನಿವೇಶ ಸಹ ಅದಾಗಿತ್ತು. ಈ ವೈಜ್ಞಾನಿಕ ಕ್ರಾಂತಿಯನ್ನು ನಿರ್ದೇಶಿಸಿದ್ದ ಕೆಲವು ಸಾಮಾನ್ಯ ಅಂಶಗಳನ್ನು ಮಾರ್ಕ್ಸ್-ಎಂಗೆಲ್ಸ್ ಗ್ರಹಿಸಿ ಅದನ್ನು ಸಮಾಜದ ಚಲನೆಯ ಅಧ್ಯಯನಕ್ಕೆ ಅನ್ವಯಿಸಿದರು. ಎಲ್ಲಾ ವಸ್ತುಗಳು ಮತ್ತು ವಿದ್ಯಮಾನಗಳನ್ನು ಅವುಗಳ ಚಲನೆಯ ಸ್ಥಿತಿಯಲ್ಲಿ ಅಧ್ಯಯನ ಮಾಡಬೇಕು. ಅವುಗಳ ಹೊರಗೆ ಕಾಣುವ ಮತ್ತು ಹೊರಗಿನ ಕಾರಣಗಳಿಗೆ ಬರುವ ಚಲನೆಗಳನ್ನು ಮಾತ್ರವಲ್ಲ. ಅವುಗಳಿಗೆ ಆಂತರಿಕ ಚಲನೆಗಳೂ ಇವೆ. ಅವನ್ನು ಅಧ್ಯಯನ ಮಾಡಬೇಕು, ಎಂಬ ವಿಜ್ಞಾನದ ಈ ವಿಧಾನವನ್ನು ಗ್ರಹಿಸಿದರು, ಸಮಾಜದ ಅಧ್ಯಯನದಲ್ಲಿ ಅದರ ಅನ್ವಯ ಮಾಡುತ್ತಾ, ಅಂತಹ ಆಂತರಿಕ ಚಲನೆಗಳನ್ನು ಮಾರ್ಕ್ಸ್-ಎಂಗೆಲ್ಸ್ ಅನ್ವೇಷಿಸಿದರು. ವರ್ಗ ಸಂಘರ್ಷ ಅಂತಹ ಆಂತರಿಕ ಚಲನೆ ಎಂದು ಗುರುತಿಸಿದರು. ಯಾವುದೇ ಒಂದರ ಸಂರಚನೆ ಅದರ ಕೆಲಸವನ್ನು ಹೇಗೆ ನಿರ್ಧರಿಸುತ್ತದೆ ಎಂಬ ಪ್ರಶ್ನೆಯನ್ನು ಅವರು ಕೇಳಿಕೊಂಡರು, ಎಂದು ಡಾ. ಚಟರ್ಜಿ ಅವರು ವಿವರಿಸಿದರು.

ಮಾರ್ಕ್ಸ್-ಎಂಗೆಲ್ಸ್ ಜೀವಿತಾವಧಿಯ ನಂತರದ ವಿಜ್ಞಾನ ಮತ್ತು ಮಾರ್ಕ್ಸ್‌ವಾದಗಳ ನಡುವೆ ಕೊಡುಕೊಳ್ಳುವಿಕೆಯ ಬಗೆಗೂ ತಿಳಿಸುತ್ತಾ ಭೌತಶಾಸ್ತ್ರದಲ್ಲಿ 19ನೇ ಶತಮಾನದಲ್ಲಿ ನಡೆದ ಕ್ರಾಂತಿ, ಆ ಮೇಲೆ ರಸಾಯನ ಶಾಸ್ತ್ರ ಮತ್ತು ಜೀವಶಾಸ್ತ್ರದಲ್ಲಿ ನಡೆದ ಕ್ರಾಂತಿಯ ಸ್ಥೂಲನೋಟವನ್ನು ಅವರು ನೀಡಿದರು. ಸಂರಚನೆ ಒಂದು ವಸ್ತುವಿನ ಕೆಲಸ, ಸಾರಸತ್ವ ಹಾಗೂ ಅದರ ಬೆಳವಣಿಗೆಯನ್ನು ನಿರ್ಧರಿಸುತ್ತದೆ ಎಂಬ ಭೌತಶಾಸ್ತ್ರದ ಅವಿಷ್ಕಾರವನ್ನು ಸಮಾಜಕ್ಕೆ ಅನ್ವಯಿಸಿ ಮಾರ್ಕ್ಸ್-ಎಂಗೆಲ್ಸ್ ಮೊದಲೇ ಮಾಡಿದ್ದರು. ಕೆಲವು ಮಾರ್ಕ್ಸ್‌ವಾದಿ ವಿಜ್ಞಾನಿಗಳು ಅದನ್ನು ತಮ್ಮ ನಿರ್ದೇಶನ ಸೂತ್ರವಾಗಿ ಪರಿಗಣಿಸಿದ್ದರು ಎಂಬುದರತ್ತ ಡಾ. ಚಟರ್ಜಿ ಅವರು ಗಮನ ಸೆಳೆದರು.

'ಲೂಯಿ ಬೋನಪಾರ್ಟೆಯ ಹದಿನೆಂಟನೇ ಬ್ರೂಮೇರ್' ಎಂಬ ಕೃತಿಯ ಪರಿಚಯ ಮಾಡುತ್ತಾ, ಪ್ರೊ. ವಿ.ಎನ್. ಲಕ್ಷ್ಮಿನಾರಾಯಣ್ ಅದರ ವಿಲಕ್ಷಣ ತಲೆಬರಹವನ್ನು ಮೊದಲು ವಿವರಿಸಿದರು. ಲೂಯಿ ಬೊನಪಾರ್ಟೆ 1848-51ರ ಅವಧಿಯ ಎರಡನೇ ಫ್ರೆಂಚ್ ಗಣತಂತ್ರ ಕ್ರಾಂತಿ ನಂತರ ಚಕ್ರವರ್ತಿಯಾದವ, ಬ್ರೂಮೇರ್ ಎಂಬುದು 1789ರ ಮೊದಲ ಫ್ರೆಂಚ್ ಗಣತಂತ್ರ ಕ್ರಾಂತಿಯ ನಂತರ ಜಾರಿಗೆ ಬಂದ ರಿಪಬ್ಲಿಕನ್ ಕ್ಯಾಲೆಂಡರಿನ ಒಂದು ತಿಂಗಳ ಹೆಸರು. 18ನೇ ಬ್ರೂಮೇರ್ ಆ ಕ್ಯಾಲೆಂಡರಿನ ಪ್ರಕಾರ ಮೊದಲ ಫ್ರೆಂಚ್ ಕ್ರಾಂತಿಯ ನಂತರ ನೆಪೋಲಿಯನ್ ಸರ್ವಾಧಿಕಾರಿಯಾಗಿ ಅಧಿಕಾರ ಹಿಡಿದ ದಿನಾಂಕ. ಎರಡನೇ ಫ್ರೆಂಚ್ ಗಣತಂತ್ರ ಕ್ರಾಂತಿಯ ನಂತರ ಅದೇ ತಾರೀಕಿನಂದು ಲೂಯಿ ಬೋನಪಾರ್ಟೆ ಸರ್ವಾಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳುತ್ತಾನೆ. ಆದರೆ ಆಗ ರಿಪಬ್ಲಿಕನ್ ಕ್ಯಾಲೆಂಡರ್ ಜಾರಿಯಲ್ಲಿರಲಿಲ್ಲ. ಇದಕ್ಕೆ ವ್ಯಂಗ್ಯ ಮಾಡುತ್ತಾ ಮಾರ್ಕ್ಸ್ ಈ ತಲೆಬರಹ ಕೊಟ್ಟಿದ್ದಾರೆ ಎಂದರು. ಈ ಕೃತಿ ಯುರೋಪಿನ ಅದರಲ್ಲೂ ಫ್ರಾನ್ಸಿನ ಇತಿಹಾಸದ ಪ್ರಾಥಮಿಕ ತಿಳುವಳಿಕೆಯನ್ನು ಬೇಡುತ್ತದೆ. ಮೊದಲ ಫ್ರೆಂಚ್ ಕ್ರಾಂತಿಯಿಂದ ಎರಡನೇ ಫ್ರೆಂಚ್ ಕ್ರಾಂತಿಯ ವರೆಗಿನ ಕಾಲಾವಧಿಯಲ್ಲಿ ಶ್ರಮಿಕರ ವರ್ಗ ಅಧಿಕಾರ ಹಿಡಿಯಲು ನಡೆಸಿದ ಹೋರಾಟಗಳ ಚಾರಿತ್ರಿಕ ವಿಶ್ಲೇಷಣೆ ನೀಡುತ್ತದೆ. ಇದನ್ನು ಮಾರ್ಕ್ಸ್ ಫ್ರಾನ್ಸಿನ 'ಸದ್ಯದ ಚರಿತ್ರೆಯ' ವಿಶ್ಲೇಷಣೆಯನ್ನು ಮಾಡಿ ಬರೆದ ಲೇಖನಗಳ ಸರಣಿಯಲ್ಲಿ ಮಾಡಿದ್ದು ಆ ಮೇಲೆ ಪುಸ್ತಕವಾಗಿ ಪ್ರಕಟವಾಯಿತು. ಮಾರ್ಕ್ಸ್-ಎಂಗೆಲ್ಸ್ ಚಾರಿತ್ರಿಕ ಭೌತವಾದವನ್ನು ಮೊದಲೇ ನಿರೂಪಿಸಿದ್ದರೂ, ಈ ಕೃತಿಯಲ್ಲಿ ಮೊದಲ ಬಾರಿಗೆ ಅದನ್ನು ಒಂದು ನಿರ್ದಿಷ್ಟ ದೇಶದ ಒಂದು ನಿರ್ದಿಷ್ಟ ಅವಧಿಯ ವಿಶ್ಲೇಷಣೆಗೆ ಅನ್ವಯಿಸಿ, ಶ್ರಮಿಕ ವರ್ಗದ ಕ್ರಾಂತಿಗೆ ಯಾವ ನಿರ್ದಿಷ್ಟ ಪಾಠಗಳನ್ನು ಕಲಿಯಬಹುದು ಎಂದು ನಿರೂಪಿಸುತ್ತಾರೆ. ಎರಡನೇ ಫ್ರೆಂಚ್ ಕ್ರಾಂತಿಯ ವೈಫಲ್ಯಕ್ಕೆ ರೈತಾಪಿ ವರ್ಗ ಬೂರ್ಜ್ವಾ ವರ್ಗದೊಂದಿಗೆ ಸೇರಿಕೊಂಡಿದ್ದು ಕಾರಣ ಎಂದು ಎತ್ತಿ ತೋರಿಸುತ್ತಾರೆ. 'ಎಲ್ಲಾ ಮಹಾನ್ ಜಾಗತಿಕ ಚಾರಿತ್ರಿಕ ಸತ್ಯಾಂಶಗಳು ಮತ್ತು ವ್ಯಕ್ತಿಗಳು ಚರಿತ್ರೆಯಲ್ಲಿ ಮರುಕಳಿಸುತ್ತಾರೆ ಎಂದು ಹೆಗೆಲ್ ಹೇಳುತ್ತಾನೆ. ಆದರೆ ಅದು ಮೊದಲ ಬಾರಿ ದುರಂತವಾಗಿ ಎರಡನೇ ಬಾರಿ ಬೊಗಳೆಯಾಗಿರುತ್ತದೆ ಎಂದು ಹೇಳಲು ಮರೆತು ಬಿಟ್ಟ' ಎಂಬ ಮಾರ್ಕ್ಸ್ ಅವರ ಪ್ರಸಿದ್ಧ ಹೇಳಿಕೆ ಇದೇ ಪುಸ್ತಕದಲ್ಲಿ ಬರುತ್ತದೆ, ಎಂದು ಅವರು ಪರಿಚಯ ಮುಂದುವರೆಸುತ್ತಾ ಹೇಳಿದರು. ಮೊದಲ ಬಾರಿ ಮೊದಲ ಫ್ರೆಂಚ್ ಕ್ರಾಂತಿ ಹಾಗೂ ನೆಪೋಲಿಯನ್ ಮತ್ತು, ಎರಡನೆ ಬಾರಿ 2ನೇ ಫ್ರೆಂಚ್ ಕ್ರಾಂತಿ ಹಾಗೂ ಲೂಯಿ ಅದೇ ರೀತಿಯಾಗಿದ್ದರು ಎಂಬ ಸಂದರ್ಭದಲ್ಲಿ ಈ ಹೇಳಿಕೆ ಬರುತ್ತದೆ ಎಂದು ಅವರು ವಿವರಿಸಿದರು.



'ಮತಧರ್ಮದ ಕುರಿತು' ಕೃತಿ ಪರಿಚಯನ್ನು ಡಾ.ಜಿ.ರಾಮಕೃಷ್ಣ ಮಾಡುತ್ತಾ, ಮಾರ್ಕ್ಸ್ ವಿಚಾರಗಳ 'ಅಪ್ರಸ್ತುತತೆ' ಬಗ್ಗೆ ಗುಲ್ಲೆಬ್ಬಿಸುತ್ತಾ ಆತ ಜೀವಂತ ಇದ್ದಾಗಲೂ ನಂತರವೂ ಪ್ರತಿ ದಶಕಕೊಮ್ಮೆ ಆತನನ್ನು 'ಸಾಯಿಸುವ' ಮತ್ತು ಆತನ ವಿಚಾರಗಳನ್ನು ಬೇಕೆಂತಲೇ ವಿಕೃತಗೊಳಿಸುವ ಅಪಾರ್ಥಕ್ಕೊಳಪಡಿಸುವ ಬೂರ್ಜ್ವಾ ಸಿದ್ಧಾಂತಿಗಳನ್ನು 'ಮಾರ್ಕ್ಸ್ ನ್ನು ಎಷ್ಟು ಬಾರಿ ಸಾಯಿಸುತ್ತೀರಿ' ಎಂದು ಲೇವಡಿ ಮಾಡುವ ಮೂಲಕ ಬಯಲಿಗೆಳೆದರು. ಮತಧರ್ಮದ ಬಗ್ಗೆ ಮಾರ್ಕ್ಸ್ ಅವರ ಪ್ರಸಿದ್ಧ ವಾಕ್ಯ "ಮತಧರ್ಮ ದಮನಿತ ಜೀವಿಗಳ ನಿಟ್ಟುಸಿರು, ಹೃದಯಹೀನ ಜಗತ್ತಿನ ಹೃದಯ, ಚೈತನ್ಯವಿಲ್ಲದ ಪರಿಸ್ಥಿತಿಗಳ ಚೇತನ, ಅದೊಂದು ಜನತೆಯ ಅಫೀಮು' ಎಂಬ ಸಮಗ್ರವಾದ ಸಂಗ್ರಹವಾದ ಆಳವಾದ ನಿರೂಪಣೆಯನ್ನು ಪರಿಚಯ ಮಾಡಿಸಿ; ಆದರೆ ಅದನ್ನು ವಿಕೃತಗೊಳಿಸಿ, ಅಪಾರ್ಥಗೊಳಿಸಿ ಮಾರ್ಕ್ಸ್ 'ಮತಧರ್ಮ ಜನತೆಯ ಅಫೀಮು' ಎಂದು ಹೇಳಿದ್ದಾರೆ ಎಂಬ ವದಂತಿ ಹರಡುತ್ತಾರೆ ಎಂದು ಖಂಡಿಸಿದರು. ಮಾರ್ಕ್ಸ್ 'ಮತಧರ್ಮ'ದ ಕುರಿತು ಪ್ರತ್ಯೇಕ ಪುಸ್ತಕ ಬರೆಯದಿದ್ದರೂ, ಅವರು ಅದರ ಕುರಿತು ಮಾಡಿದ ವಿಶ್ಲೇಷಣೆ ಹಲವು ಪುಸ್ತಕಗಳಲ್ಲಿ ಬರುತ್ತದೆ. ಅಂತಹ ಬರಹಗಳ ಸಂಗ್ರಹವೇ ಈ ಪುಸ್ತಕ. ಅವೆಲ್ಲದರಲ್ಲಿ ಮತಧರ್ಮದ ವಿಶ್ಲೇಷಣೆಯ

ಪುಟ 14 ಕ್ಕೆ









ಕೇರಳ ರಾಜ್ಯದಲ್ಲಿ ಲೋಕಸಭೆ ಚುನಾವಣಾ
ಪ್ರಚಾರ ಮತ್ತು ರ್‍ಯಾಲಿ



ಪಶ್ಚಿಮ ಬಂಗಾಳ ರಾಜ್ಯದಲ್ಲಿ ಲೋಕಸಭೆ ಚುನಾವಣಾ
ಪ್ರಚಾರ ಮತ್ತು ರ್‍ಯಾಲಿ









ತ್ರಿಪುರ ರಾಜ್ಯದಲ್ಲಿ ರ್‍ಯಾಲಿ
ಮತ್ತು ಅಭ್ಯರ್ಥಿಯ
ನಾಮಪತ್ರ ಸಲ್ಲಿಕೆ




ಸಿಪಿಐ(ಎಂ) ಪಕ್ಷದ ಲೋಕಸಭಾ ಚುನಾವಣೆಯ ವಿವಿಧ ರಾಜ್ಯಗಳಲ್ಲಿ ರ್‍ಯಾಲಿ, ಬಹಿರಂಗ ಸಭೆ ಮತ್ತು ನಾಮಪತ್ರ ಸಲ್ಲಿಕೆಯ ಪೋಟೋ ಗಳು



ತೆಲಂಗಾಣ ರಾಜ್ಯದಲ್ಲಿ ಬಹಿರಂಗ ಸಭೆ











ಹಲ್ಲಿಲ್ಲದ ಹಸು ಕಂದನಿಗಾಗಿ ದೇವರು ಸೃಷ್ಟಿಸಿದ್ದಲ್ಲವೇ ತಾಯ ಮೊಲೆ ಹಾಲ ವ್ಯವಸ್ಥೆ ?

ಹಸು ಕಂದನಿಗೆ ತಾಯಿಯ ಮೊಲೆ ಹಾಲಿನ ವ್ಯವಸ್ಥೆ ಎಂಬುದು ಒಂದು ಅದ್ಭುತ. ಇಂತಹ ಒಂದು ವಿಸ್ಮಯಕರ ವ್ಯವಸ್ಥೆ ಹೇಗೆ ರೂಪುಗೊಂಡಿರಬಹುದು? ಮರಿಗಳಿಗೆ ಹಾಲು ಕುಡಿಸಿ ಪೋಷಿಸುವ ಸಸ್ತನಿಗಳ ಮೂಲ ಏನಿರಬಹುದು ಎಂಬುದು ಕುತೂಹಲಕರವಲ್ಲವೇ.? ಓದಿ. ಆಗಸ್ಟ್ 20 2018 ರಂದು ದೇಶವ್ಯಾಪಿಯಾಗಿ ಆಚರಿಸಲಾಗುತ್ತಿರುವ 'ವೈಜ್ಞಾನಿಕ ಮನೋಭಾವ ದಿನಾಚರಣೆ'ಯ ಪ್ರಯುಕ್ತ ಒಂದು ಲೇಖನ.

ಜ್ಞಾನ ವಿಜ್ಞಾನ

ಆರ್. ರಾಮಕೃಷ್ಣ

ಅದು ಬಹುಶಃ 2003ರಲ್ಲಿ ಇರಬೇಕು. ಬೀದರ್‌ನಲ್ಲಿ ವಿದ್ಯಾರ್ಥಿ ಸಂಘಟನೆಯಾದ –'ಎಸ್.ಎಫ್.ಐ.'ನ ರಾಜ್ಯಮಟ್ಟದ ಅಧ್ಯಯನ ಶಿಬಿರ. ಮೊದಲ ದಿನ ಸಂಜೆ ಶಿಬಿರದ ಸಾಂಕೇತಿಕ ಉದ್ಘಾಟನೆ ನಂತರ 'ಭೂಮಿಯ ಉಗಮ ಮತ್ತು ವಿಕಾಸ' ಹಾಗೂ 'ಮಾನವನ ಉಗಮ ಮತ್ತು ವಿಕಾಸ'ಗಳ ಬಗೆಗೆ 'ಸ್ಲೈಡ್ (ಸ್ಥಿರಚಿತ್ರ) ಪ್ರದರ್ಶನ ಇತ್ತು. ಪ್ರೊಜೆಕ್ಟರ್, ಬಿಳಿ ಪರದೆ ಕಟ್ಟುವುದು ಇತ್ಯಾದಿ ಸಿದ್ದತೆಗಳು ನಡೆಯುತ್ತಿದ್ದವು.

ಶಿಬಿರವನ್ನು ವ್ಯವಸ್ಥೆಗೊಳಿಸುವ ಸ್ವಾಗತ ಸಮಿತಿಯಲ್ಲಿ ಸ್ಥಳೀಯರಾದ ಧಾರ್ಮಿಕ ಮುಖಂಡರೊಬ್ಬರಿದ್ದರು. ಉದ್ಘಾಟನಾ ಸಮಾರಂಭಕ್ಕೆಂದು ಬಂದು ಕುಳಿತ ಅವರಿಗೆ ಶಿಬಿರದಲ್ಲಿ ನಂತರ ನಡೆಯಲಿದ್ದ ವಿಜ್ಞಾನದ ಸ್ಲೈಡ್ ಷೋಗಳು ಮತ್ತು ವಿಜ್ಞಾನ ಪಾಠಗಳ ವಿಷಯಗಳ ಬಗೆಗೆ ತಿಳಿಯಿತು. ಸ್ವಾಗತ ಸಮಿತಿಯ ಪರವಾಗಿ ಮಾತನಾಡುವಾಗ ಅವರು 'ಜೀವಗಳ ಉಗಮ'ದ ಕುರಿತು ತಮ್ಮದೇ ಆದ ಅಭಿಪ್ರಾಯ ಮಂಡಿಸಿ ನಮ್ಮೆಲ್ಲರ ಮುಂದೆ ಒಂದು ಗಂಭೀರವಾದ ಪ್ರಶ್ನೆಯನ್ನು ಇಟ್ಟರು. 'ಒಬ್ಬ ಹೆಣ್ಣುಮಗಳು ತಾನು ಗರ್ಭಿಣಿಯಾಗಿ ಮಗುವನ್ನು ಹೆತ್ತಾಗ ಆಕೆಯ ದೇಹದಲ್ಲಿ ಮಗುವಿಗಾಗಿ ಹಾಲು ಉತ್ಪಾದನೆಯಾಗುತ್ತದೆ. ಇದು ಆಹಾರವನ್ನು ಅಗಿದು ತಿನ್ನಲಾಗದ, ಹಲ್ಲಿಲ್ಲದ ಎಳೆಯ ಕಂದನಿಗಾಗಿ ದೇವರು ಮಾಡಿರುವ ಸೃಷ್ಟಿ. ದೇವರು ಎಂಬ ಒಂದು ಶಕ್ತಿ ಇಲ್ಲದೇ ಇಂತಹ ಒಂದು ಅದ್ಭುತ ಸೃಷ್ಟಿ ಹೇಗೆ ಸಾಧ್ಯ ??!!'.

ಪ್ರಶ್ನೆ ತುಂಬಾ ಗಹನವಾದದ್ದೇ. ನಾವು ಬಾಳಿ ಬದುಕುತ್ತಿರುವ ಈ ಜಗತ್ತಿನ ಸೃಷ್ಟಿಯಾದದ್ದು ಹೇಗೆ, ಯಾವಾಗ ? ಮುಂತಾದ ಇತ್ಯಾದಿ ಕುರಿತು ವಿಕಾಸವಾದದ ಸಿದ್ಧಾಂತಗಳನ್ನು ಕೇಳಿ, ಓದಿ ವಿಕಾಸದ ಕಲ್ಪನೆಯನ್ನು ಅಷ್ಟಿಷ್ಟು ಕಲ್ಪಿಸಿಕೊಂಡಿದ್ದ ನನಗೆ ಈ ಪ್ರಶ್ನೆಯಿಂದ ವಿಕಾಸವಾದದ ಕುರಿತು ವಿಶ್ವಾಸ ಹೊರಟು ಹೋಗುವುದು ಸಾಧ್ಯವಿರಲಿಲ್ಲ. ಆದರೂ ಈ ನಿರ್ಧಿಷ್ಟ ಪ್ರಶ್ನೆಯು ನನ್ನ ಮನಸ್ಸಿನಲ್ಲಿ ವಿಕಾಸವಾದಕ್ಕೆ ಸಂಬಂಧಿಸಿ ಬಹಳ ದಿನಗಳಿಂದಲೂ ಕೊರೆಯುತ್ತಿದ್ದ ಇಂತಹ ಅನೇಕ ಪ್ರಶ್ನೆಗಳಿಗೆ ಹೊಸ ಶಕ್ತಿ ನೀಡಿ ಬಡಿದೆಬ್ಬಿಸಿತು.

ಆಗ ತಾನೇ ಹುಟ್ಟಿದ ಮಗುವಿಗೆ ಎಷ್ಟೋ ತಿಂಗಳ ಕಾಲ ಏನೂ ತಿನ್ನಲಾಗುವುದಿಲ್ಲ. ಅದರ ಬಾಯಲ್ಲಿ ಹಲ್ಲು ಹುಟ್ಟಿರುವುದಿಲ್ಲ. ಏನ್ನನ್ನಾದರೂ ಜಗಿದು ತಿನ್ನುವ ಶಕ್ತಿಯೂ ಇರುವುದಿಲ್ಲ. ಅದು ಒಂದಷ್ಟು ದ್ರವಾಹಾರವನ್ನು ಮಾತ್ರ ಸೇವಿಸಬಲ್ಲದು. ಅಂದರೆ ತಾಯ ಎದೆಹಾಲನ್ನು ಮಾತ್ರ ಕುಡಿಯಬಲ್ಲದು. ಆದ್ದರಿಂದ ಮಗುವನ್ನು ಉಳಿಸಿ ಪೋಷಿಸಲು, ಮಗುವಿಗೆ ಹಲ್ಲುಗಳು ಬೆಳೆದು ಆಹಾರವನ್ನು ತಿಂದು ಅದನ್ನು ದಕ್ಕಿಸಿಕೊಳ್ಳುವ ಘಟ್ಟ ಬರುವವರೆಗೆ ಮಗುವನ್ನು ಕಾಪಾಡುವುದು ತಾಯಿಯ ಹಾಲು. ಒಬ್ಬ ಹೆಣ್ಣು ಗರ್ಭಿಣಿಯಾಗಿ ಮಗು ಹೊಟ್ಟೆಯಲ್ಲಿ ಬೆಳೆಯುತ್ತಾ ಬಂದಂತೆ ಮುಂದೆ ಹುಟ್ಟುವ ಮಗುವಿಗಾಗಿ ತಾಯ ದೇಹದಲ್ಲಿ ಸಿದ್ಧತೆಗಳು ಆರಂಭವಾಗುತ್ತದೆ. ಸ್ತನಗಳು ದೊಡ್ಡವಾಗುತ್ತವೆ. ಇತ್ಯಾದಿ, ಇತ್ಯಾದಿಗಳು.

ಸ್ತನ ಅಥವಾ ಮೊಲೆ ರೂಪುಗೊಂಡದ್ದು ಹೇಗೆ ?

ನಾವೀಗ ಸ್ತನ ಅಥವಾ ಮೊಲೆ ಎನ್ನುವ ಹಾಲೂಡಿಕೆಯ ಈ ಅಧ್ಬುತ ಅಂಗ ಹೇಗೆ ರೂಪುಗೊಂಡಿರಬಹುದು ಎಂದು ಯೋಚಿಸಬಹುದು. "ಜನಪ್ರಿಯ ಜೀವವಿಜ್ಞಾನ' ಎಂಬ 'ಬೊರಿಸ್ ಸೆರ್ಗೀವ್' ಎಂಬುವರು ಬರೆದ ಒಂದು ಅಧ್ಭುತ ಪುಸ್ತಕ(ಮಿರ್ ಪ್ರಕಾಶನ–ಸೋವಿಯತ್ ಒಕ್ಕೂಟ) ವು ಈ ವಿಷಯವಾಗಿ ಸಾಕಷ್ಟು ವಿವರವಾಗಿ ವಿಷಯವನ್ನು ವಿಷದೀಕರಿಸಿದೆ.

ಮರಿಗಳಿಗೆ ಹಾಲನ್ನುಣಿಸುವ ಸಾಮರ್ಥ್ಯವು ಸಸ್ತನಿಗಳ ಬಹು ಹಿಂದಿನ ಪೂರ್ವಜರಲ್ಲಿ ಉದ್ಭವಿಸಿತು ಎನ್ನುತ್ತದೆ ಪುಸ್ತಕ. ಪುಸ್ತಕದಲ್ಲಿನ ಮಾತುಗಳನ್ನು ಕೆಲವನ್ನು ಹಾಗೇ ನೋಡೋಣ.

"ಸ್ತನಗಳ ಉಗಮದ ಬಗೆಗೆ ಹೆಚ್ಚು ವಿವರಗಳು ಲಭಿಸಿವೆ. ಅವುಗಳು ಬೆವರು ಗ್ರಂಥಿಗಳಿಂದಲೇ ಉಧ್ಭವಿಸಿರುವ ಸಾಧ್ಯತೆ ಇದೆ. ಸಮಕಾಲೀನ ಸಸ್ತನಿಗಳ ಪೂರ್ವಿಕರು ಹೊರಕ್ಕೆ ಬಾಯ್ದೆಗೆಯುವ ಅನೇಕ ಸ್ತನ ಗ್ರಂಥಿಗಳನ್ನು ಹೊಂದಿದ್ದರೂ, ಅವುಗಳಿಗೆ ತೊಟ್ಟುಗಳಿರಲಿಲ್ಲ. ಸಮಕಾಲೀನ ಆಸ್ಟ್ರೇಲಿಯಾದ, ಒಂದಷ್ಟು ಮಟ್ಟಿಗೆ ಬಾತುಕೋಳಿಯನ್ನು ಹೋಲುವ ಒಂದು ಜೀವಿ 'ಡಕ್ ಬಿಲ್ಲಡ್ ಪ್ಲಾಟಿಪಸ್' - duck-billed platypus' ಅಂತಹುದೇ ಸ್ತನಗಳನ್ನು ಹೊಂದಿವೆ. ಈ ಜೀವಿಯಲ್ಲಿ ಇನ್ನೂರು ಚಿಕ್ಕ ಗ್ರಂಥಿಗಳಿದ್ದು ಅವುಗಳ ನಾಳಗಳು, ಸ್ತನಗ್ರಂಥಿಗಳ ಪ್ರದೇಶವೆಂದೆನಿಸಿಕೊಳ್ಳುವ ಉದರದ ಚರ್ಮಭಾಗದಲ್ಲಿ ಬಾಯ್ದೆರೆಯುತ್ತವೆ. ಈ ರೋಮಕೋಶದ ಸಮುದಾಯದಲ್ಲಿನ ಸ್ತನ್ಯಗ್ರಂಥಿಗಳು ತೆರೆದುಕೊಂಡಿವೆ. ಬೆವರು ಗ್ರಂಥಿಗಳು ಮಾರ್ಪಾಟಾಗಿ ಸ್ತನ ಗ್ರಂಥಿಗಳುಂಟಾಗಿವೆಯೆಂಬುದನ್ನು ದೃಢಪಡಿಸುವ ನಿದರ್ಶನವನ್ನು ಈ ರೀತಿಯಾಗಿ 'ಡಕ್ ಬಿಲ್ಲಡ್ ಪ್ಲಾಟಿಪಸ್'-duck-billed platypus ಜೀವಿಗಳು ವಿಜ್ಞಾನಿಗಳಿಗೆ ನೀಡಿವೆ."

"ಈ ಪ್ರಾಣಿಯ ದೇಹವೆಲ್ಲ ಬೆವರು ಮತ್ತು ನೆಣಗ್ರಂಥಿಗಳಿಂದ ಆಚ್ಛಾದಿತವಾಗಿದ್ದು ಅವುಗಳ ನಾಳಗಳು ರೋಮಕೋಶದ ಸಮೀಪ ಬಾಯ್ದೆಗೆಯುತ್ತದೆ. ಈ ರೋಮಕೋಶದ ಸಮುದಾಯದಲ್ಲಿನ ಸ್ತನ್ಯಗ್ರಂಥಿಗಳ ಪ್ರದೇಶದಲ್ಲಿ ನೆಣ(ಕೊಬ್ಬು) ಮತ್ತು ಬೆವರು ಗ್ರಂಥಿಗಳ ಸ್ಥಾನವನ್ನು ಸ್ತನ್ಯಗ್ರಂಥಿಗಳು ತೆಗೆದುಕೊಂಡಿವೆ. ಆ ಗ್ರಂಥಿಗಳಿಂದ ಒಸರುವ ಹಾಲು, ವಿಶಿಷ್ಟವಾದ ಒರಟು 'ಹಾಲು' ಕೂದಲ ಮೂಲಕ ಹಾಯ್ದು ಬರುತ್ತದೆ. ಅದನ್ನು ಮರಿಗಳು ನಾಲಿಗೆಯಿಂದ ನೆಕ್ಕಿ ಕುಡಿಯುತ್ತವೆ."

ಮೊಟ್ಟೆಇಟ್ಟು ಮರಿಮಾಡಿ ಮೊಲೆ ಹಾಲನ್ನೂ ಕುಡಿಸುವ

ಆಸ್ಟ್ರೇಲಿಯಾದ ಜೀವಿಗಳು

"ಆಸ್ಟ್ರೇಲಿಯಾದ ಬಾತುಕೋಳಿಯನ್ನು ಹೋಲುವ ಈ 'ಡಕ್ ಬಿಲ್ಲಡ್ ಪ್ಲಾಟಿಪಸ್'-duck-billed platypus ಮತ್ತು ಮುಳ್ಳುಹಂದಿಯನ್ನು ಹೋಲುವ ಒಂದು ಜೀವಿ 'ಎಕಿಡ್ನಾ'–ಜಭಿಝಜಟಿಚಿ, ಇವುಗಳು ಮೊಟ್ಟೆ ಇರಿಸುತ್ತವೆ. ಆ ಮೇಲೆ ಮೊಟ್ಟೆಯೊಡೆದು ಹೊರಬಂದ ಮರಿಗಳಿಗೆ ಸಸ್ತನಿಗಳಂತೆ ಹಾಲನ್ನು ಸಹ ಕುಡಿಸುತ್ತವೆ." "ಸ್ತ್ರೀಯ ಕತ್ತಿನಲ್ಲಿ ದೊಡ್ಡ ಗ್ರಂಥಿಗಳನ್ನು ವಿಜ್ಞಾನಿಗಳು ಕಂಡಿದ್ದು, ಅವು ಗರ್ಭ ತಳೆದಾಗ ದೊಡ್ಡದಾಗಿ ವಿಫುಲ ಪ್ರಮಾಣದಲ್ಲಿ ಸ್ರವಿಸಬಲ್ಲವು. ಕಂಕುಳಲ್ಲಿರುವ ಗ್ರಂಥಿಗಳು ಅದೇ ತೆರನಾಗಿವೆ. ಗರ್ಭ ತಳೆದಾಗ ಮತ್ತು ಆ ನಂತರ ಈ ಗ್ರಂಥಿಗಳಿಂದ ಉಂಟಾಗುವ ಸ್ರವಿಕೆಯು ಹೊರರೂಪದಲ್ಲಿ ಮುಖ್ಯ ಸ್ತನಗಳಿಂದ ಈ ಕಾಲದಲ್ಲಿ ಸಿದ್ಧವಾಗುವ ಹಾಲಿನಂತೆಯೇ ಇದ್ದು, ಸ್ತನ್ಯದಂತಹ ಸೂಕ್ಷ್ಮದರ್ಶಕ ರಚನೆಗಳನ್ನು ಅದು ಒಳಗೊಂಡಿರುತ್ತದೆ."

"ಸ್ತ್ರೀಯ ಸ್ತನಗಳು ಆಕೆ ಗರ್ಭ ತಳೆಯುವುದಕ್ಕಿಂತ ಎಷ್ಟೋ ಮೊದಲು ಕಾರ್ಯ ಪ್ರವೃತ್ತವಾಗುತ್ತವೆ. ಆಗ ತಾನೇ ಜನ್ಮವೆತ್ತಿದ ಕೂಸಿನ ಸ್ತನಗಳು ಸ್ವಲ್ಪಮಟ್ಟಿಗೆ ದಪ್ಪವಾಗಿರುವುದು ಮತ್ತು ಮಾಟದ ಹಾಲನ್ನು ಒಸರುವುದು ಅಸಾಮಾನ್ಯವೇನಲ್ಲ. ಅದು ಹಾಲು ಸ್ರವಿಕೆಯನ್ನು ಉತ್ತೇಜಿಸುವ ರಸದಾತುಗಳು ಕೂಸಿಗೆ ಅದು ಜನ್ಮವೆತ್ತುವ ಮೊದಲೇ ಸಾಗಿ ಬಂದಿರುವುದರ ಫಲವೆಂದು ವಿವರಿಸಬಹುದು."

ಬೆವರ ಗ್ರಂಥಿಗಳು : ಸ್ತನಗಳ ಮೂಲ

ಇಲ್ಲಿ ಮತ್ತೊಂದು ಮುಖ್ಯವಾದ ಅಂಶವಿದೆ. ಜೀವಿಗಳ ದೇಹದಲ್ಲಿ ನಾನಾ ಬಗೆಯ ಗ್ರಂಥಿಗಳಿವೆ. ಚರ್ಮದಲ್ಲಿ ಬೆವರು ಹೊರಹಾಕುವ ಬೆವರು ಗ್ರಂಥಿಗಳು, ಬಾಯಲ್ಲಿ ಜೊಲ್ಲು ಗ್ರಂಥಿಗಳು, ಕಿವಿಯಲ್ಲಿ ಮೇಣ ಉತ್ಪಾದಿಸುವ ಮೇಣಗ್ರಂಥಿಗಳು ಇತ್ಯಾದಿ ಇತ್ಯಾದಿ.

ಕೋಟ್ಯಾಂತರ ವರ್ಷಗಳ ಜೀವವಿಕಾಸದ ಸಂಕೀರ್ಣ ಹಾದಿಯಲ್ಲಿ ಜೀವಿಗಳು ಬಹಳ ಸೂಕ್ಷ್ಮ ಹಂತದಲ್ಲಿ ಇರುವಾಗಲೇ ಈ ಬೆವರ ಗ್ರಂಥಿಗಳಂತಹ ಗ್ರಂಥಿಗಳಿಂದ ಒಸರುವ ಎಂಥದ್ದೋ ದ್ರವವನ್ನು ತಮ್ಮ ಪೋಷಣೆಗೆ ಮರಿಗಳು ಬಳಸಿಕೊಳ್ಳುವ ಕ್ರಮ ರೂಪುಗೊಂಡಿದೆ. ಇದೇ ಅಥವಾ ಇಂಥ ಯಾವುದೋ ಗ್ರಂಥಿಯೇ ಮುಂದೆ ಕೋಟ್ಯಾಂತರ ವರ್ಷಗಳ ವಿಕಾಸದ ಹಾದಿಯಲ್ಲಿ ಜೀವಿಗಳ ದೇಹದಲ್ಲಿ ಸ್ತನಗಳಾಗಿ ರೂಪುಗೊಂಡಿವೆ ಎಂದು ಕಾಣುತ್ತದೆ.

ಈ ಗ್ರಂಥಿಗಳಿಂದ ಒಸರುವ ದ್ರವವನ್ನು ಹೀರಿ ಬೆಳೆಯುವ ಆರಂಭಿಕ ಕ್ರಮವೇ ಮುಂದೆ ಸಸ್ತನಿಗಳು ಅಥವಾ ಮೊಲೆಹಾಲಿನ ಮೂಲಕ ಮರಿಗಳನ್ನು ಪೋಷಿಸಲು ಸಾಧ್ಯವಾಗುವ ಮೊಲೆಗಳಂತಹ ಅಂಗಗಳನ್ನು ಹೊಂದಿರುವ ಸಸ್ತನಿಗಳು ಎನ್ನುವ ಪ್ರಭೇಧದ ವಿಕಾಸವಾಯಿತು ಎಂದು ವಿಜ್ಞಾನಿಗಳು ಖಚಿತ ಅಭಿಪ್ರಾಯಕ್ಕೆ ಬಂದಿದ್ದಾರೆ.

ಆದರೆ ಇಲ್ಲಿ ಗ್ರಂಥಿಗಳಿಂದ ಒಸರುವ ದ್ರವ ಹಾಲಾಗಿದ್ದು ಹೇಗೆ ಎಂಬ ಪ್ರಶ್ನೆ ಬರುತ್ತದೆ. ಗ್ರಂಥಿಯಲ್ಲಿ ಕಾಲ ಕ್ರಮೇಣ ಏನೇನೋ ಬದಲಾವಣೆ, ಬೆಳವಣಿಗೆ ಸಂಭವಿಸಿರುತ್ತದೆ. ಏಕೆಂದರೆ ಪ್ರಕೃತಿಯಲ್ಲಿ ಬದಲಾವಣೆ ಅತ್ಯಂತ ಸಹಜವಾದ ಪ್ರಕ್ರಿಯೆ. ಅದರಲ್ಲಿ ಮರಿಗಳ ಉಳಿವಿಗೆ ಮತ್ತು ಬೆಳವಣಿಗೆಗೆ ಅನುಕೂಲವಾಗುವ ಬದಲಾವಣೆ, ಅಂದರೆ ಹಾಲಿನಂತಹ ದ್ರವ ಪೂರೈಕೆಯಾಗುವಂತಹ ಬದಲಾವಣೆ ಆಗಿರುತ್ತದೆ. ಹಾಗಾದಾಗ ಅದರಿಂದ ಹೆಚ್ಚು ಮರಿಗಳು ಬದುಕಿ ಉಳಿದು ಅಂತಹ ಬದಲಾವಣೆ ಹೊಂದಿದ ಸಂತತಿಯು ಅಭಿವೃದ್ಧಿ ಹೊಂದಿರುತ್ತದೆ. ಕೆಲವು ತೊಂದರೆದಾಯಕವಾದ ಅಂದರೆ ಅನುಕೂಲಕರವಲ್ಲದ ಬೆಳವಣಿಗೆಗಳೂ ಆಗಿರುತ್ತವೆ. ಆದರೆ ಅಂತಹ ಬದಲಾವಣೆಗಳು ಬಹು ದೀರ್ಘಕಾಲ ಉಳಿದಿರುವುದಿಲ್ಲ. ಏಕೆಂದರೆ ಅಂತಹ ಸಂತತಿ ಅನನುಕೂಲದಿಂದ ನಾಶವಾಗಿರುತ್ತದೆ ಎಂದು ನಾವು ಊಹಿಸಬಹುದು.

ಆದರೆ ಒಂದು ಸ್ಪಷ್ಟ. ವಿಕಾಸದ ಆರಂಭಿಕ ಘಟ್ಟದಲ್ಲಿ ಮರಿಗಳಿಗೆ ಹಾಲು ಕುಡಿಸಲೆಂದೇ ಸ್ತನಗಳು ಸೃಷ್ಟಿಯಾದದ್ದಲ್ಲ. ಮತ್ತು ಈ ಗ್ರಂಥಿಯಿಂದ ಸ್ರವಿಸುತ್ತಿದ್ದುದ್ದು ಈಗ ನಾವು ಹಾಲು ಎಂದು ಹೇಳುವಂತಹ ದ್ರವವಾಗಿದ್ದಿರಲಿಲ್ಲ. ಆದರೆ ಒಂದು ಮಾತ್ರ ನಿಜ. ಪ್ರಾಣಿಗಳಲ್ಲಿ ಮರಿಗಳನ್ನು ಕಾಪಾಡುವುದು ಮತ್ತು ಆಹಾರ ನೀಡಿ ಸ್ವತಂತ್ರವಾಗಿ ಜೀವಿಸುವಂತೆ ಮಾಡುವುದು ತಾಯಿ–ತಂದೆ ಜೀವಿಗಳಿಗೆ ದೊಡ್ಡ ಮರಿಗಳನ್ನು ಮೊಲೆ ಹಾಲಿನ ಮೂಲಕ ಸಾಕಷ್ಟು ಕಾಲ ಪೋಷಣೆ ಮಾಡುವ ವ್ಯವಸ್ಥೆ ಬಂದ ಮೇಲೆ–ಅಂದರೆ ಸಸ್ತನಿಗಳು ಎಂಬ ಒಂದು ಪ್ರಾಣಿ ವರ್ಗ ರೂಪುಗೊಂಡ ಮೇಲೆ, ಬೇರೆ ಜೀವಿಗಳಿಗೆ ಇಲ್ಲದ ಈ ಅನುಕೂಲದಿಂದಾಗಿ ಭೂಮಿಯ ಮೇಲೆಲ್ಲಾ ಸಸ್ತನಿ ಜಾತಿಯ ಪ್ರಾಣಿಗಳು ಹೆಚ್ಚಿ ಹರಡಿಕೊಂಡವು.

'ಹಲ್ಲಿಲ್ಲದ ಹಸು ಕಂದನಿಗಾಗಿ ದೇವರು ಸೃಷ್ಟಿಸಿದ್ದಲ್ಲವೇ ತಾಯ ಮೊಲೆ ಹಾಲು..' ಎಂದು ಆ ಧಾರ್ಮಿಕ ಮುಖಂಡರು ಎತ್ತಿದ ಪ್ರಶ್ನೆ ನನ್ನಲ್ಲಿ ಇಷ್ಟೆಲ್ಲಾ ವಿಚಾರಗಳನ್ನು ತಿಳಿದುಕೊಳ್ಳುವ ಕುತೂಹಲವನ್ನು ಉಂಟು ಮಾಡಿತು. ಈಗ ಈ ವಿಚಾರವಾಗಿ ಇಷ್ಟೆಲ್ಲಾ ತಿಳಿದ ಮೇಲೆ ನನಗೆ ಸ್ಪಷ್ಟವಾಗಿರುವ ಅಂಶ ಎಂದರೆ ಮೊಲೆಹಾಲ ವ್ಯವಸ್ಥೆ ಎಂಬುದು ಪ್ರಾಕೃತಿಕವಾದ ವಿಕಾಸ. ಅದರಲ್ಲಿ ಒಂದು ಬಗೆ ಇಲ್ಲ. ಈ ವ್ಯವಸ್ಥೆ ಹೀಗೇ ಇರಬೇಕೆಂದು ಯಾರೂ ಸೃಷ್ಟಿಸಿದ್ದಲ್ಲ. ನಿರ್ದೇಶಿಸಿದ್ದಲ್ಲ. ಮರಿಗಳನ್ನು ಪೋಷಿಸುವ ನಾನಾ ರೂಪದ ವ್ಯವಸ್ಥೆಗಳಲ್ಲಿ ತಾಯ ಮೊಲೆಹಾಲ ವ್ಯವಸ್ಥೆಯೂ ಒಂದು ವಿಧ ಅಷ್ಟೆ.



ಮೋದಿ ಆಳ್ವಿಕೆಯಲ್ಲಿ ಆರ್ಥಿಕ ರಂಗ



ಯಾರ 'ಸಾಥ್'? ಯಾರ 'ವಿಕಾಸ'?



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಕಳೆದ 5 ವರ್ಷಗಳಲ್ಲಿ ಖಾಸಗಿ ಬಂಡವಾಳಕ್ಕೆ ಭಾರೀ ಲಾಭಗಳನ್ನು ಮಾಡಿಕೊಳ್ಳಲು, ಮತ್ತು ಆ ಮೂಲಕ ಶ್ರೀಮಂತರಿಗೆ ಹೆಚ್ಚು ಸಂಪತ್ತನ್ನು ಸಂಗ್ರಹಿಸಿಕೊಳ್ಳಲು ಒಂದು "ಮಿತ್ರತ್ವಪೂರ್ಣ" ವಾತಾವರಣವನ್ನು ಒದಗಿಸುವ ಸತತ ಪ್ರಯತ್ನಗಳು ನಡೆದಿವೆ. ಇವು ಚಮಚಾ ಬಂಡವಾಳಶಾಹಿಗಳಿಗೇನೋ ಪ್ರಯೋಜನಗಳನ್ನು ಕೊಟ್ಟಿದೆ, ಆದರೆ ಉತ್ಪಾದಕ ಚಟುವಟಿಕೆಗಳಲ್ಲಿ ಹೂಡಿಕೆಗಳನ್ನು ಆಕರ್ಷಿಸುವಲ್ಲಿ ವಿಫಲವಾಗಿವೆ, ಅಂದರೆ ವ್ಯಾಪಕ ಉದ್ಯೋಗವಕಾಶಗಳನ್ನು ನಿರ್ಮಿಸುವಲ್ಲಿ ಸಂಪೂರ್ಣ ವಿಫಲವಾಗಿವೆ ಎಂಬುದು ಸುಸ್ಪಷ್ಟ. ನೋಟುರದ್ಧತಿ, ಜಿಎಸ್‌ಟಿ ಮತ್ತು ಜಾನುವಾರು ವ್ಯಾಪಾದ ನಿಷೇಧ ಕೂಡ ಇಂತಹ ಹೂಡಿಕೆಗಳನ್ನು ಆಕರ್ಷಿಸುವಲ್ಲಿನ ವಿಫಲತೆಯಲ್ಲಿ ತಮ್ಮ ಕೊಡುಗೆಗಳನ್ನು ನೀಡಿವೆ.

5 ವರ್ಷಗಳ ಹಿಂದೆ ಮೋದಿ ಸರಕಾರ ಭಾರತದ ಜನತೆಗೆ 'ಅಚ್ಛೇ ದಿನ್'ಗಳನ್ನು ತರುವ ಆಶ್ವಾಸನೆಯೊಂದಿಗೆ ಅಧಿಕಾರಕ್ಕೆ ಬಂತು.' ಎರಡು ವಿಧಗಳ ಜನಗಳಿಗೆ ಏಕಕಾಲದಲ್ಲಿ ಕೊಟ್ಟ ಆಶ್ವಾಸನೆ ಇದಾಗಿತ್ತು.

ಇದರಲ್ಲಿ ಮೊದಲ ವಿಧ, ಅಂಬಾನಿಗಳು, ಅದಾನಿಗಳು ಮುಂತಾದ ಅತಿ ಶ್ರೀಮಂತರ ಒಂದು ಸಣ್ಣ ಗುಂಪು. ಅದಾಗಲೇ ಈ ಗುಂಪಿನ ಕೈಗಳಲ್ಲಿ ದೇಶದ ಬಹುಪಾಲು ಸಂಪತ್ತು ಮತ್ತು ಸಂಪನ್ಮೂಲಗಳು ಕೇಂದ್ರೀಕೃತವಾಗಿದ್ದವು. ಅವರಿಗೆ ಇನ್ನಷ್ಟು ಹಣ ಸಂಪಾದಿಸಲು, ಮತ್ತಷ್ಟು ಸಂಪತ್ತನ್ನು ಸಂಗ್ರಹಿಸಲು ಉತ್ತಮ ಅವಕಾಶಗಳನ್ನು ನಿರ್ಮಿಸುವ ಆಶ್ವಾಸನೆ ಈ 'ಅಚ್ಛೇ ದಿನ್'ಗಳಲ್ಲಿ ಅಡಕವಾಗಿತ್ತು. ಮೋದಿ ಆಳ್ವಿಕೆ ಇದನ್ನು ಈಡೇರಿಸಿದೆ. ದೇಶದ ಅತಿ ಶ್ರೀಮಂತ 1% ಗುಂಪು 2015ರಲ್ಲಿ ಆಗಲೇ ಇಡೀ ದೇಶದ ಸಂಪತ್ತಿನ 53%ವನ್ನು ಹೊಂದಿದ್ದರೆ, 2018ರಲ್ಲಿ ಅದು 73%ಕ್ಕೆ ನೆಗೆದಿದೆ. ಇದಕ್ಕೆ ಪ್ರತಿಫಲವಾಗಿ ಆಳುವ ಪಕ್ಷದ ಶ್ರೀಮಂತಿಕೆಯೂ ಭಾರೀ ಪ್ರಮಾಣದಲ್ಲಿ ಬೆಳೆದಿದೆ. 2015–16 ಮತ್ತು 2016–17ರ ನಡುವೆ ಅದರ ಸಂಪತ್ತಿನಲ್ಲಿ 81%ದಷ್ಟು ಏರಿಕೆಯಾಗಿದ್ದು, ಅದೀಗ ಭಾರತದ ರಾಜಕೀಯ ಪಕ್ಷಗಳಲ್ಲಿ ಅತ್ಯಂತ ಶ್ರೀಮಂತ ಪಕ್ಷವಾಗಿ ಹೊರಹೊಮ್ಮಿದೆ. ಅಂದರೆ, ಶ್ರೀಮಂತರನ್ನು ಪ್ರತಿನಿಧಿಸುವ ಶ್ರೀಮಂತ ಪಕ್ಷ!

ಮೇಲೆ ಹೇಳಿದ ಎರಡು ವಿಧ'ಗಳಲ್ಲಿ ಎರಡನೇಯುದ್ದು, ಭಾರತದ ಕೋಟ್ಯಂತರ ಕಾರ್ಮಿಕರು, ರೈತರು ಮತ್ತು ಇತರ ದುಡಿಯುವ ಜನಸಮೂಹಗಳು. ಚುನಾವಣೆಗಳನ್ನು ಗೆಲ್ಲಲು ಇವರೇ ಮುಖ್ಯವಾಗಿದ್ದುದರಿಂದ ಇವರಿಗೂ ಅದೇ ಆಶ್ವಾಸನೆ ನೀಡಲಾಗಿತ್ತು. ಇವರಿಗೆ 'ಅಚ್ಛೇ ದಿನ್' ತಂದು ಕೊಡಬೇಕಾದರೆ, ಮುಖ್ಯವಾಗಿ ಅವರ ಜೀವನಾಧಾರಗಳ, ಆಮೂಲಕ ಅವರಿಗೆ ಒಂದು ಶಿಷ್ಟ ಬದುಕಿನ ಮಟ್ಟವನ್ನು ಲಭ್ಯಗೊಳಿಸುವ ಮೂಲಭೂತ ಪ್ರಶ್ನೆ ಎದುರಾಗುತ್ತದೆ.

ಈ ಪ್ರಶ್ನೆಯನ್ನು ಕಳೆದ 5 ವರ್ಷಗಳಲ್ಲಿ ಕೈಗೆತ್ತಿಕೊಳ್ಳಲಾಯಿತೇ? ಒಂದು ಸುಭದ್ರ ಜೀವನಾಧಾರದ ಅವಕಾಶಗಳನ್ನು ದುಡಿಯುವ ಜನಸಮೂಹಗಳಿಗೆ ಕಲ್ಪಿಸಿಕೊಡಲಾಗಿದೆಯೇ? ಇಲ್ಲ ಎಂಬುದೇ ಸ್ಪಷ್ಟವಾದ ಉತ್ತರ.

ಶ್ರೀಮಂತರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸುವ ಪ್ರಕ್ರಿಯೆಯಲ್ಲಿ ಬಡವರಿಗೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸದೆ ವಿಶ್ವಾಸಘಾತ ಮಾಡಲಾಯಿತು. ಅಷ್ಟೇ ಅಲ್ಲ, ಅವರ ಜೀವನ ಪರಿಸ್ಥಿತಿಗಳು ಮತ್ತಷ್ಟು ಹದಗೆಟ್ಟಿವೆ. ವರ್ಷಕ್ಕೆ ಎರಡು ಕೋಟಿ ಉದ್ಯೋಗಾವಕಾಶಗಳ ಆಶ್ವಾಸನೆ ಎಷ್ಟು ದೊಡ್ಡ ವಿಶ್ವಾಸಘಾತ ಎಂಬುದನ್ನು ತೋರಿಸುವ ಉದ್ಯೋಗ–ನಿರುದ್ಯೋಗ ಅಂಕಿ–ಅಂಶಗಳ ಪ್ರಕಟಣೆಯನ್ನು ಕಳೆದ ಆರು ತಿಂಗಳಲ್ಲಿ ಸತತವಾಗಿ ಮೂರು ಬಾರಿ ತಡೆಹಿಡಿದಿರುವುದೇ ಇದಕ್ಕೆ ಸಾಕ್ಷಿ. ನಿರುದ್ಯೋಗ 2016–17ರಲ್ಲಿ ಹಿಂದಿನ ನಾಲ್ಕು ವರ್ಷಗಳಲ್ಲೇ ಅತಿ ಹೆಚ್ಚಿನ ಮಟ್ಟವನ್ನು ತಲುಪಿದ್ದರೆ, 2017–18ರಲ್ಲಿ ನಿರುದ್ಯೋಗ ದರ 6.1%ಕ್ಕೆ ಏರಿದ್ದು, ಇದು ಕಳೆದ 45 ವರ್ಷಗಳಲ್ಲೇ ಅತಿ ಹೆಚ್ಚು ಎಂದು ಈ ಅಂಕಿ–ಅಂಶಗಳು ತೋರಿಸಿವೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿವೆ. ಇನ್ನೂ ಇಂತಹ ನಕಾರಾತ್ಮಕ ವಿವರಗಳು ಸರಕಾರ ಪ್ರಕಟಿಸಲು ನಿರಾಕರಿಸುವ ಈ ಅಂಕಿ–ಅಂಶಗಳಿಂದ ಒಂದೊಂದಾಗಿ ಹೊರಬರುತ್ತಿವೆ.

ಒಟ್ಟಿನಲ್ಲಿ ಯುಪಿಎ–2ರ ಆಳ್ವಿಕೆ ಉದ್ಯೋಗರಹಿತ ಬೆಳವಣಿಗೆಯ ಅವಧಿಯಾಗಿದ್ದರೆ, ಮೋದಿ ಆಳ್ವಿಕೆ ಉದ್ಯೋಗನಷ್ಟ ಬೆಳವಣಿಗೆಯ ಅವಧಿ ಎಂದು ದಾಖಲಾಗಿದೆ.

ಇದೀಗ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಘೋಷಣೆಯ ಮೂಲಕ ಮರೆಮಾಚಲು ಪ್ರಯತ್ನಿಸಿರುವ ನಿಜ ಪರಿಸ್ಥಿತಿ. ಇಂತಹ ಘೋಷಣೆಗಳ ರಾಜಕೀಯ ಕಸರತ್ತುಗಳು ಮತ್ತು ಹಣಬಲದಿಂದ ಮುಂದಿನ ಚುನಾವಣೆಗಳಲ್ಲೂ ಪಾರಾಗಬಹುದು, ಕಳೆದ ಐದು ವರ್ಷಗಳ ತನ್ನ ವಿಶ್ವಾಸಘಾತಕ್ಕೆ ಬೆಲೆ ತೆರಬೇಕಾಗಿ ಬರಲಿಕ್ಕಿಲ್ಲ ಎಂದು ಈ ಆಳುವ ಪಕ್ಷ ನಿರೀಕ್ಷಿಸುತ್ತಿರುವಂತೆ ಕಾಣುತ್ತದೆ.

ಜೀವನಾಧಾರಗಳ ಬಿಕ್ಕಟ್ಟಿನ ವಿಷವರ್ತುಲ

ವಾಸ್ತವವಾಗಿ ಮೋದಿ ಸರಕಾರಕ್ಕೆ ಬೇಕಾಗಿದ್ದದ್ದು ಅತಿ ಶ್ರೀಮಂತರ ಒಂದು ಸಣ್ಣ ವಿಭಾಗದ 'ವಿಕಾಸ' ಮಾತ್ರ, ಅದರಿಂದ ಕೋಟ್ಯಂತರ ಜನಗಳಿಗೆ 'ಅಚ್ಛೇ ದಿನ್' ತರಲಾಗುವದಿಲ್ಲ ಎಂಬ ಸಂಗತಿಯನ್ನು ಈ ಘೋಷಣೆಯ ಮೂಲಕ ಮರೆಮಾಚಲು ಪ್ರಯತ್ನಿಸಿದೆ.

ಸಾಮಾನ್ಯವಾಗಿ ಹೇಳುವಂತೆ, ಭಾರತ ಕೃಷಿಪ್ರಧಾನ ದೇಶ, ಅಂದರೆ ಬಹುಪಾಲು ಜನಗಳಿಗೆ ಕೃಷಿಯೇ ಜೀವನಾಧಾರ. ಆದರೆ ಸತತವಾಗಿ ಕಳೆದ ಎರಡು ದಶಕಗಳಿಂದ ಕೃಷಿ ವಲಯ ಬಿಕ್ಕಟ್ಟಿನಲ್ಲಿ ಸಿಲುಕಿದ್ದು ಹೆಚ್ಚಿನ ಕೃಷಿ ಕುಟುಂಬಗಳಿಗೆ ಬೇಸಾಯದ ಮೂಲಕ ಬದುಕು ಹೆಚ್ಚೆಚ್ಚು ದುರ್ಭರವಾಗುತ್ತ ಬಂದಿದೆ. ಆದ್ದರಿಂದ ಹೆಚ್ಚೆಚ್ಚು ಮಂದಿ ಕೃಷಿ ವಲಯದ ಹೊರಗೆ ಜೀವನಾಧಾರಗಳನ್ನು ಹುಡುಕಿಕೊಳ್ಳಬೇಕಾಗಿ ಬಂದಿದೆ. ಇದು ಎರಡು ರೀತಿಯದ್ದಾಗಿದೆ–ಬೇರೆ ರಂಗಗಳಲ್ಲಿ ಉದ್ಯೋಗ ಅಥವ ಸ್ವ–ಉದ್ಯೋಗ.

ಆದರೆ ಇದಕ್ಕೆ ಅವಕಾಶಗಳು ಬಹಳ ಸೀಮಿತವಾಗಿವೆ. ಏಕೆಂದರೆ, ಕೃಷಿಯೇತರ ಉದ್ಯೋಗಾವಕಾಶಗಳ ನಿರ್ಮಾಣ ಆರ್ಥಿಕ ವ್ಯವಸ್ಥೆಯಲ್ಲಿ ಸರಕುಗಳು ಮತ್ತು ಸೇವೆಗಳಿಗೆ ಬೇಡಿಕೆಗಳನ್ನು ಅವಲಂಬಿಸಿವೆ. ಉದ್ಯೋಗಗಳ ಹುಡುಕಾಟದಲ್ಲಿರುವವರು ತಾವೇ ಇಂತಹ ಬೇಡಿಕೆಗಳನ್ನು ಸೃಷ್ಟಿಸಬೇಕಾದರೆ, ಅವರಿಗೆ ಉದ್ಯೋಗ ಸಿಗಬೇಕು, ಆ ಉದ್ಯೋಗ ಅವರಿಗೆ ಸಾಕಷ್ಟು ಆದಾಯಗಳನ್ನು ತರುವಂತದ್ದಿರಬೇಕು. ಶ್ರೀಮಂತರ ಬಳಿ 73% ಸಂಪತ್ತಿದ್ದರೂ, ಬಹಳ ಸಣ್ಣ ಸಂಖ್ಯೆಯಲ್ಲಿರುವ ಶ್ರೀಮಂತರ ಬೇಡಿಕೆಗಳ ಪ್ರಮಾಣದಿಂದ, ಮತ್ತು ಅದರ ಸ್ವರೂಪವೇ ಭಿನ್ನವಾಗಿರುವುದರಿಂದ ಇಂತಹ ಆರ್ಥಿಕ ಬೆಳವಣಿಗೆಗೆ ಅದು ಏನೇನೂ ಸಾಲದು.

ಹೀಗೆ ಇದೊಂದು ವಿಷ ವರ್ತುಲ. ಕೃಷಿಯೇತರ ರಂಗಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಬೇಕಾದರೆ ಜನಗಳ ಕೊಳ್ಳುವ ಶಕ್ತಿ ಹೆಚ್ಚಬೇಕು, ಆದರೆ ಆ ಕೊಳ್ಳುವ ಶಕ್ತಿ ಹೆಚ್ಚಬೇಕಾದರೆ ಅವರಿಗೆ ಸಾಕಷ್ಟು ಆದಾಯಗಳನ್ನು ಲಭ್ಯಗೊಳಿಸಬಲ್ಲ ಉದ್ಯೋಗಾವಕಾಶಗಳು ಬೇಕು.

ಭಾರತದಲ್ಲಿ ಉದ್ಯೋಗಾವಕಾಶಗಳು ಸೀಮಿತವಾಗಿರಲು, ದೇಶದಲ್ಲಿ ಉತ್ಪಾದಕ ಚಟುವಟಿಕೆಗಳನ್ನು ವಿಸ್ತರಿಸಲು, ಆಮೂಲಕ ಹೆಚ್ಚೆಚ್ಚು ಜನಗಳಿಗೆ ಉದ್ಯೋಗಗಳನ್ನು ಒದಗಿಸಲು ಸಾಕಷ್ಟು ಸಂಪನ್ಮೂಲಗಳು ಇಲ್ಲದಿರುವುದು ಕಾರಣವಲ್ಲ. ಇಲ್ಲಿ ವಿಪರೀತ ಅಸಮಾನತೆಯ ಪ್ರಶ್ನೆ ಬರುತ್ತದೆ. ಏಕೆಂದರೆ ಈ ಸಂಪನ್ಮೂಲಗಳು ಮತ್ತು ಕೊಳ್ಳುವ ಶಕ್ತಿ ಕೆಲವೇ ಕೈಗಳಲ್ಲಿ ಕೇಂದ್ರೀಕೃತಗೊಂಡಿವೆ.

ಈ ವಿಷವರ್ತುಲವನ್ನು ಮುರಿಯಬೇಕಾದರೆ ಜನಗಳಿಂದ ಚುನಾಯಿತವಾದ ಸರಕಾರ ಸಂಪನ್ಮೂಲಗಳ ಮರುವಿತರಣೆ ನಡೆಸಿ ಆರ್ಥಿಕ ವ್ಯವಸ್ಥೆಯಲ್ಲಿ ಹೆಚ್ಚಿನ ಬೇಡಿಕೆಗಳನ್ನು ಸೃಷ್ಟಿಸುವ ಧೋರಣೆಗಳನ್ನು ಅನುಸರಿಸಬೇಕು. ಅಂದರೆ ಶ್ರೀಮಂತರು ಮತ್ತು ಕಾರ್ಪೊರೇಟ್ ವಲಯದ ಮೇಲೆ ತೆರಿಗೆ ವಿಧಿಸಿ, ಸಂಪನ್ಮೂಲಗಳನ್ನು ಕ್ರೋಡೀಕರಿಸಬೇಕು, ಆಮೂಲಕ ಆರ್ಥಿಕ ಚಟುವಟಿಕೆಗಳಿಗೆ ಮಾಡುವ ಖರ್ಚುಗಳ ಪ್ರಮಾಣವನ್ನು ಹೆಚ್ಚಿಸಬೇಕು. ಇಂತಹ ಹೆಚ್ಚಿದ ವೆಚ್ಚಗಳ ಮೂಲಕ ಕೃಷಿಗೆ ಪರಿಹಾರ ಒದಗಿಸಬಹುದು, ರೈತರಿಗೆ ಉತ್ತಮ ಬೆಂಬಲ ಬೆಲೆಗಳು, ಹೆಚು ಸಬ್ಸಿಡಿಗಳು ಮತ್ತು ಕಡಿಮೆ ಬೆಲಗಳಲ್ಲಿ ಕೃಷಿ ಲಾಗುವಾಡುಗಳನ್ನು ಒದಗಿಸಬಹುದು, ನೀರಾವರಿ ಮತ್ತಿತರ ಕೃಷಿ ಮೂಲರಚನೆಗಳನ್ನು ಉತ್ತಮ ಪಡಿಸಬಹುದು, ಒಟ್ಟಿನಲ್ಲಿ ಕೃಷಿ ಆದಾಯಗಳನ್ನು ಹೆಚ್ಚಿಸಬಹುದು. ಆರೋಗ್ಯ, ಶಿಕ್ಷಣ ಸೇವೆಗಳನ್ನು, ವಸತಿ ನಿರ್ಮಾಣ ಮುಂತಾದ ಉತ್ಪಾದಕ ಚಟುವಟಿಕೆಗಳನ್ನು ವಿಸ್ತರಿಸಲು, ಉತ್ತಮಪಡಿಸಲೂ ಬಳಸಬಹುದು. ಇವೆಲ್ಲವೂ ನೇರವಾಗಿಯೂ ,ಪರೋಕ್ಷವಾಗಿಯೂ ಉದ್ಯೋಗಾವಕಾಶಗಳನ್ನು ಹೆಚ್ಚಿಸುವಲ್ಲಿ ನೆರವಾಗುತ್ತವೆ.

ಕಳೆದ 5 ವರ್ಷಗಳಲ್ಲಿ ಇವನ್ನೆಲ್ಲ ಹಲವಾರು ಯೋಜನೆಗಳ ಮೂಲಕ ಮಾಡಿದ್ದೇನೆ ಎಂದು ಮೋದಿ ಸರಕಾರ ಹೇಳಬಹುದು. ನಿಜ, ಹಲವು ಯೋಜನೆಗಳನ್ನು ಪ್ರಕಟಿಸಲಾಗಿದೆ. ಆದರೆ ಅವುಗಳಿಗೆ ಅಗತ್ಯ ಹಣ ಒದಗಿಸದಿದ್ದರೆ ಪ್ರಯೋಜನವೇನು?

ನಿಜ ಸಂಗತಿಯೆಂದರೆ, ಶ್ರೀಮಂತರಿಗೆ ಇಂತಹ ಪರಿಹಾರಗಳು, ಸಂಪತ್ತಿನ ಮರು ವಿತರಣೆ ಬೇಕಿಲ್ಲ. ಉದ್ಯೋಗಾವಕಾಶಗಳನ್ನು ವಿಸ್ತರಿಸುವ ಸಾರ್ವಜನಿಕ ವೆಚ್ಚಗಳನ್ನು ಹೆಚ್ಚಿಸಲು ಅನುಕೂಲವಾಗುವಂತೆ ಹೆಚ್ಚು ತೆರಿಗೆಗಳನ್ನು ತೆರಲು ಅವರು ಸಿದ್ಧರಿಲ್ಲ, ಬದಲಿಗೆ ಸಾರ್ವಜನಿಕ ವಲಯ ವಲಯದ ಬ್ಯಾಂಕುಗಳು ಅವರ ಹಣಮಾಡುವ ಚಟುವಟಿಕೆಗಳಿಗೆ ಹಣ ಒದಗಿಸಬೇಕು ಎಂದು ನಿರೀಕ್ಷಿಸುತ್ತಾರೆ, ಸಾರ್ವಜನಿಕ ಆರೋಗ್ಯ ಸೇವೆಗಳನ್ನು ವಿಸ್ತರಿಸುವ ಬದಲು ಆರೋಗ್ಯ ವಿಮೆಯ ಹೆಸರಲ್ಲಿ ತಮ್ಮ ಖಾಸಗಿ ವಿಮಾಕಂಪನಿಗಳಿಗೆ ಹೆಚ್ಚಿನ ಪ್ರೀಮಿಯಂ ಮೊತ್ತಗಳು ಬರಬೇಕು ಎಂದು ನಿರೀಕ್ಷಿಸುತ್ತಾರೆ, ಶಿಕ್ಷಣವನ್ನು ಖಾಸಗಿಯವರಿಗೆ ಒಪ್ಪಿಸಿ ಅವರಿಗೆ ಹೆಚ್ಚಿನ ಶುಲ್ಕಗಳನ್ನು ಸಂಗ್ರಹಿಸಲು ಅವಕಾಶ ಕಲ್ಪಿಸಬೇಕು ಎಂದು ಬಯಸುತ್ತಾರೆ; ತೆರಿಗೆಯನ್ನು ಕಡಿಮೆ ಮಾಡಿಸಿ, ಆಮೂಲಕ ಹೆಚ್ಚಿನ ಸಂಪತ್ತು ರಾಶಿಹಾಕಬಯಸುತ್ತಾರೆ; ಕೆಲಸಗಾರರ ಸಂಬಳಗಳನ್ನು ಹೆಚ್ಚಿಸದೆ ತಮ್ಮ ಲಾಭಗಳನ್ನೇ ಹೆಚ್ಚಿಸಕೊಳ್ಳಬಯಸುತ್ತಾರೆ.


ಅವರ ಈ ಬೇಡಿಕೆಗಳನ್ನು ಸಾಧ್ಯವಾದಷ್ಟೂ ಈಡೇರಿಸಲು ಪ್ರಯತ್ನಿಸಿದ್ದೇ ಮೋದಿ ಸರಕಾರ ಕಳೆದ 5 ವರ್ಷಗಳಲ್ಲಿ ಮಾಡಿರುವ ವಿವಿಧ ಕೆಲಸಗಳ ನಿಜಹೂರಣ.

ಶ್ರೀಮಂತರ ಬಯಕೆಗಳು ಈಡೇರಿವೆ

2011–12ರಲ್ಲಿ ಕೇಂದ್ರ ಸರಕಾರದ ಸಾರ್ವಜನಿಕ ವೆಚ್ಚಗಳ ಪ್ರಮಾಣ ಜಿಡಿಪಿಯ 14.77%ದಷ್ಟಿತ್ತು, ಇದರೊಂದಿಗೆ ಕೇಂದ್ರೀಯ ತೆರಿಗೆಗಳಲ್ಲಿ ರಾಜ್ಯಗಳ ಪಾಲುಗಳು ಮತ್ತು ಸಾಲಗಳ ಮೂಲಕ ಈ ವೆಚ್ಚಗಳ ಪ್ರಮಾಣ ಜಿಡಿಪಿಯ 17.66% ಆಗಿತ್ತು. ಆದರೆ ಮೋದಿ ಸರಕಾರದ 5 ವರ್ಷಗಳಲ್ಲಿ ಅದು ಎಂದೂ 17% ದಾಟಿಲ್ಲ. ಕೇಂದ್ರ ಸರಕಾರ ಮಾಡಿರುವ ವೆಚ್ಚಗಳ ಪ್ರಮಾಣ ಈಗ 13%ಕಿಂತಲೂ ಕಡಿಮೆ. ಇದು ಬಹಳ ಮಹತ್ವಪೂರ್ಣ. ಏಕೆಂದರೆ ಕೇಂದ್ರ ಸರಕಾರದ ಖರ್ಚುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಸರಕಾರವನ್ನು ನಡೆಸುವ ಖರ್ಚುಗಳಿಗೆ ಮತ್ತು ಶ್ರೀಮಂತರಿಂದ ಪಡೆದ ಸಾಲಗಳಿಗೆ ಬಡ್ಡಿಯ ರೂಪದಲ್ಲಿ ಹೋಗುತ್ತವೆ. ಅಂದರೆ ಸರಕಾರದ ನೂರಕ್ಕೂ ಹೆಚ್ಚು ಯೋಜನೆಗಳಿಗೆ ಮಾಡುವ ಖರ್ಚುಗಳ ಮೊತ್ತದಲ್ಲಿ ಹೆಚ್ಚಳದ ಬದಲು ಭಾರೀ ಕಡಿತಗಳನ್ನೇ ಇದು ಸೂಚಿಸುತ್ತದೆ.

ಕಳೆದ 5ವರ್ಷಗಳಲ್ಲಿ ತೆರಿಗೆ ಪಾವತಿಯನ್ನು ಉತ್ತಮಪಡಿಸಲೆಂದು ಮತ್ತು ಕಪ್ಪು ಹಣವನ್ನು ಹೊರಗೆಳೆಯಲೆಂದು ಎರಡು ಬಹುದೊಡ್ಡ ಕ್ರಮಗಳನ್ನು ಪ್ರಕಟಿಸಲಾಯಿತು–ನೋಟುರದ್ಧತಿ ಮತ್ತು ಜಿಎಸ್‌ಟಿ ಯನ್ನು ಆರಂಭಿಸಿದ್ದು. ಆದರೆ ಇವೆರಡೂ ನಿಜವಾಗಿ ಮಾಡಿದ್ದೇ ಬೇರೆ. ಅವು ಆರ್ಥಿಕ ವ್ಯವಸ್ಥೆಯನ್ನೇ

ಸರಕಾರದ ಔಪಚಾರಿಕ ಮತ್ತು ಅನೌಪಚಾರಿಕ' ಪ್ರಚಾರ ಯಂತ್ರ ಟಾಂಟಾಂ ಮಾಡುತ್ತವೆ. ಅದರೆ ಭಾರತದ ಕೋಟ್ಯಂತರ ದುಡಿಮೆಗಾರರ ಕುಟುಂಬಗಳ ಶೋಚನೀಯ ಆರ್ಥಿಕ ಪರಿಸ್ಥಿತಿಗಳಲ್ಲಿ, ಮತ್ತು ಹಲವಾರು ಸಣ್ಣ ವ್ಯಾಪಾರಿಗಳ ನಡುವೆ ಅವುಗಳಪ್ರತಿಧ್ವನಿಗಳು ಕೇಳಸವು. ನಿಜಸಂಗತಿಯೆಂದರೆ, 'ಅಚ್ಛೇದಿನ್' 5 ವರ್ಷಗಳ ಹಿಂದೆ ಇದ್ದುದಕ್ಕಿಂತಲೂ ಇಂದು ಬಹುದೂರದ ಕನಸಾಗಿ ಬಿಟ್ಟಿದೆ.



ವ್ಯಂಗ್ಯಚಿತ್ರ: ಕೇಶವ್, ದಿ ಹಿಂದು

ಛಿದ್ರಗೊಳಿಸಿದವು ಮತ್ತು ನಿರುದ್ಯೋಗ ಪರಿಸ್ಥಿತಿ ಉಲ್ಬಣಗೊಳ್ಳುವಂತೆ ಮಾಡಿದವು. ಮತ್ತೊಂದೆಡೆಯಲ್ಲಿ ಇವೆರಡೂ ಶ್ರೀಮಂತರ ಗುರಿಗಳನ್ನು ಈಡೇರಿಸಲು ನೆರವಾದವು. ತೆರಿಗೆ ವಂಚನೆ ನಡೆಯುತ್ತಿರುವುದು ನಗದಿನ ಮೇಲೆ ಅವಲಂಭಿಸಿದ ವ್ಯವಹಾರಗಳನ್ನು ನಡೆಸುವವರು, ಪಾನ್ ಕಾರ್ಡ್‌ಗಳನ್ನು ಹೊಂದಿ, ಇಲೆಕ್ಟ್ರಾನಿಕ್ ವ್ಯಹಾರಗಳ ಮೂಲಕ ಪ್ರತಿದಿನ ಕೋಟಿಗಟ್ಟಲೆ ರೂಪಾಯಿ ವ್ಯವಹಾರಗಳನ್ನು ನಡೆಸುವವರು ಅಲ್ಲ ಎಂಬ ಮಿಥ್ಯೆಯನ್ನು ಹರಡಲು ನೋಟುರದ್ದತಿ ತಂದರೆ, ಸಂಪನ್ಮೂಲ ಸಂಗ್ರಹಕ್ಕೆ ಜನಸಾಮಾನ್ಯರಿಂದ ವಸೂಲಿ ಮಾಡುವ ಪರೋಕ್ಷ ತೆರಿಗೆಗಳ ಪ್ರಮಾಣವನ್ನು ಹೆಚ್ಚಿಸಲು, ಆಮೂಲಕ ಶ್ರೀಮಂತರಿಂದ ನೇರ ತೆರಿಗೆಗಳ ವಸೂಲಿಯ ಪ್ರಮಾಣವನ್ನು ಹೆಚ್ಚಿಸಬೇಕೆಂಬ ಒತ್ತಡದಿಂದ ಪಾರಾಗಲು ಜಿಎಸ್‌ಟಿಯನ್ನು ತರಲಾಯಿತು. ಇವೆರಡೂ ಈಗ ಬಟ್ಟ ಬಯಲಾಗಿವೆ.

ಅಂತರ್‍ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕಚ್ಚಾ ತೈಲಗಳ ಬೆಲೆಗಳು ಜುಲೈ 2014ರಿಂದ ಇಳಿಯಲಾರಂಭಿಸಿದಾಗ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬಕಾರಿ ಸುಂಕಗಳಲ್ಲಿ ಮಾಡಿದ ಹೆಚ್ಚಳಗಳಿಂದ ಮೋದಿ ಸರಕಾರ ತನ್ನ ರೆವಿನ್ಯೂ ಆದಾಯಗಳನ್ನು ಹೆಚ್ಚಿಸಿಕೊಂಡಿತು. ಈ ಹೆಚ್ಚಳಗಳನ್ನು ವಸೂಲಿ ಮಾಡಿದ್ದು ಜನಸಾಮಾನ್ಯರಿಂದಲೇ ಎಂಬುದನ್ನು ಇಲ್ಲಿ ಗಮನಿಸಬೇಕು. ಅಲ್ಲದೆ ಈ ಹೆಚ್ಚುವರಿ ವಸೂಲಿಗಳನ್ನು ಆರ್ಥಿಕ ಚಟುವಟಿಕೆಗಳ ಮೇಲಿನ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಲು ಬಳಸಲಿಲ್ಲ, ಬದಲಾಗಿ ಸರಕಾರದ ಬಜೆಟಿನ ಹಣಕಾಸು ಕೊರತೆಯನ್ನು ತುಂಬಲು ಬಳಸಲಾಯಿತು. ಈ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಹೆಚ್ಚುವರಿ ಸುಂಕಗಳು ಮತ್ತು ಜಿಎಸ್‌ಟಿ ಪರಿಹಾರ ಅಧಿತೆರಿಗೆಗಳನ್ನು ಬಿಟ್ಟರೆ, 2017ರಲ್ಲಿ ಕೇಂದ್ರ ಸರಕಾರದ ತೆರಿಗೆ ಆದಾಯ ಮತ್ತು ಜಿಡಿಪಿ ಅನುಪಾತ 2012–13ರಲ್ಲಿ ಇದ್ದುದಕ್ಕಿಂತ ಕೆಳಮಟ್ಟಕ್ಕೆ ಇಳಿಯಿತು, 2007–08ಕ್ಕೆ ಹೋಲಿಸಿದರಂತೂ ಇನ್ನಷ್ಟು ಕಡಿಮೆಯಾಗಿದೆ.

ಅಂದರೆ ಈ ಮೋದಿ ಸರಕಾರ ಸಾರ್ವಜನಿಕ ಯೋಜನೆಗಳಿಗೆ ಮಾಡಿರುವ ನಿಜವಾದ ವೆಚ್ಚಗಳಲ್ಲಿ ಭಾರೀ ಕಡಿತವಾಗಿದೆ. ಕಳೆದ 5 ವರ್ಷಗಳಲ್ಲಿ ಈ ಸರಕಾರ ವಾಸ್ತವವಾಗಿ ಅನುಸರಿಸಿದ್ದು ಜನರಿಗಾಗಿ ಮಾಡುವ ಖರ್ಚುಗಳಲ್ಲಿ 'ಮಿತವ್ಯಯ'ದ ಧೋರಣೆ, ಮತ್ತು ಹಣಕಾಸು ಕೊರತೆಯನ್ನು ಕಡಿಮೆ ಮಾಡಲು ಸಂಪನ್ಮೂಲ ಸಂಗ್ರಹವನ್ನು ಹೆಚ್ಚಿಸುವ ಬದಲು, ಸಾರ್ವಜನಿಕ ವೆಚ್ಚಗಳನ್ನು ಕಡಿತ ಮಾಡುವ ದಾರಿಯನ್ನು. ಇವೆರಡೂ ಶ್ರೀಮಂತರು ಬಯಸುವ ದಾರಿಗಳು; ಸಹಜವಾಗಿಯೇ ಇವು ಜನಸಾಮಾನ್ಯರ ಜೀವನಾಧಾರಗಳ ಮೇಲೆ, ಆಮೂಲಕ ಆರ್ಥಿಕ ವ್ಯವಸ್ಥೆಯ ಮೇಲೆ ಭಾರೀ ದುಷ್ಪರಿಣಾಮಗಳನ್ನು ಬೀರಿವೆ.

ಆರ್ಥಿಕ ನಿಧಾನಗತಿ ಮತ್ತು ಕೃಷಿ ಸಂಕಟ

2014–15ರಿಂದ 2018–19ರ ಅವಧಿಯಲ್ಲಿ ಆಹಾರಧಾನ್ಯಗಳ ಸರಾಸರಿ ವಾರ್ಷಿಕ ಉತ್ಪಾದನೆ 246.59 ಮಿಲಿಯ ಟನ್ನುಗಳು, 2013–14ರಲ್ಲಿ ಇದ್ದದ್ದು 245.79 ಮಿಲಿಯ ಟನ್ನುಗಳು. ಅಂದರೆ ಸುಮಾರಾಗಿ ಐದು ವರ್ಷಗಳ ಹಿಂದೆ ಇದ್ದಷ್ಟೇ. ಇತರ ಕೃಷಿ ಉತ್ಪನ್ನಗಳಲ್ಲಂತೂ ಇಳಿಕೆಯೇ ಆಗಿದೆ. ಉದಾ: ಈ 5 ವರ್ಷಗಳಲ್ಲಿ ಎಣ್ಣೆಬೀಜಗಳ ಸರಾಸರಿ ವಾರ್ಷಿಕ ಉತ್ಪಾದನೆ 29 ಮಿಲಿಯ ಟನ್ನುಗಳು. 2013–14ರಲ್ಲಿ ಇದು 32.75 ಮಿಲಿಯ ಟನ್ನುಗಳು. ಹತ್ತಿ ಮತ್ತು ಕಬ್ಬಿನ ಉತ್ಪಾದನೆಯಲ್ಲೂ ಇಳಿಕೆ ದಾಖಲಾಗಿದೆ.

ಕೃಷಿಯಲ್ಲದೆ, ಕೈಗಾರಿಕೆಗಳು ಮತ್ತು ಕಟ್ಟಡ ನಿರ್ಮಾಣ ವಲಯದಲ್ಲೂ ಕಳೆದ 5 ವರ್ಷಗಳ ಬಿಜೆಪಿ ಆಳ್ವಿಕೆಯಲ್ಲಿ ಹಿನ್ನಡೆಯಾಗಿದೆ.

ಹಿಂದಿನ ದಶಕದಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆಗಳಲ್ಲಿ ಸರಾಸರಿ ವಾರ್ಷಿಕವಾಗಿ 10% ಬೆಳವಣಿಗೆ ಈ ಕ್ಷೇತ್ರವನ್ನು ಉದ್ಯೋಗವಕಾಶ ನಿರ್ಮಾಣದ ಪ್ರಮುಖ ಕ್ಷೇತ್ರವನ್ನಾಗಿ ಮಾಡಿತ್ತು. ಆದರೆ ಪ್ರಸಕ್ತ ದಶಕದಲ್ಲಿ ಈ ಕ್ಷೇತ್ರವೇ ಬ್ಯಾಂಕುಗಳ ಸುಸ್ತಿಸಾಲ(ಎನ್‌ಪಿಎ)ಗಳ ತೀವ್ರ ಏರಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. 'ಉತ್ತಮ' ಚಿತ್ರ ತೋರಲು ಜಿಡಿಪಿ ಸರಣಿಯನ್ನು ಪರಿಷ್ಕರಿಸಿದ ಮೇಲೂ ಕಳೆದ 5 ವರ್ಷಗಳಲ್ಲಿ ಈ ಕ್ಷೇತ್ರದ ಸರಾಸರಿ ಬೆಳವಣಿಗೆ ದರ 5.5%ಕ್ಕೆ ಇಳಿದರೆ, ಈ ಕ್ಷೇತ್ರದ ಬೆಳವಣಿಗೆಯ ಪ್ರಮುಖ ಸೂಚಕವಾದ ಸಿಮೆಂಟ್ ಉತ್ಪಾದನೆಯ ಬೆಳವಣಿಗೆ ದರ ಇನ್ನೂ ಕಡಿಮೆ, 4% ಕ್ಕಿಂತಲೂ ಕಡಿಮೆ.

ಕೈಗಾರಿಕಾ ರಂಗದಲ್ಲೂ 'ಕೇಂದ್ರೀಯ ಸಾಂಖ್ಯಿಕ ಸಂಘಟನೆ' (ಸಿಎಸ್‌ಒ) ಆರಂಭಿಸಿರುವ ಹೊಸ 'ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ' (ಐಐಪಿ) ಸ್ಥಗಿತತೆಯನ್ನೇ ತೋರಿಸುತ್ತದೆ. ಆನವರಿ 2019ರಲ್ಲಿ ಪ್ರಕಟವಾಗಿರುವ ಸೂಚ್ಯಂಕದ ಪ್ರಕಾರವೂ ವಾರ್ಷಿಕ ಬೇಳವಣಿಗೆ ದರ ಕೇವಲ 4.4%. ಈ ಸ್ಥಗಿತತೆಯೇ 'ಮೇಕ್ ಇನ್ ಇಂಡಿಯಾ'ದಂತಹ ಯೋಜನೆಗಳು ವಿಫಲವಾಗಿರುವುದನ್ನು ಸೂಚಿಸುತ್ತದೆ. 2014–15 ರಿಂದ 2017–18ರ ನಡುವೆ ದೇಶದ ತೈಲೇತರ ರಫ್ತುಗಳ ವಾರ್ಷಿಕ ಸರಾಸರಿ ಮೌಲ್ಯ 24890.9 ಕೋಟಿ ಡಾಲರುಗಳು, 2013–14ರಲ್ಲಿ ಇದು 25123.6 ಕೋಟಿ ಡಾಲರುಗಳಷ್ಟಿತ್ತು. ಇನ್ನೊಂದೆಡೆಯಲ್ಲಿ ತೈಲೇತರ ಆಮದುಗಳ ಸರಾಸರಿ ವಾರ್ಷಿಕ ಮೌಲ್ಯ 2013–14ರ 28544.4 ಕೋಟಿ ಡಾಲರುಗಳಿಂದ 31552.2 ಕೋಟಿ ಡಾಲರುಗಳಿಗೇರಿದೆ. ಇದರ ಪರಿಣಾಮವಾಗಿ 2017–18ರಲ್ಲಿ ತೈಲೇತರ ವ್ಯಾಪಾರ ಕೊರತೆ(ಅಂದರೆ ರಫ್ತು ಮತ್ತು ಆಮದಿನ ವ್ಯತ್ಯಾಸ) ಈ ಸರಕಾರ ಬರುವ ಮೊದಲು 2013–14ರಲ್ಲಿ ಇದ್ದುದರ ಇಮ್ಮಡಿಗೇರಿದೆ. 2018–19ರಲ್ಲಿ ಇದು ಇನ್ನೂ ಹೆಚ್ಚಬಹುದೆಂದು ಹೇಳಲಾಗಿದೆ. ಅಂದರೆ 'ರಫ್ತು–ನೇತೃತ್ವದ ಬೆಳವಣಿಗೆ'ಯೂ ಇಲ್ಲ!

ಹೀಗಿರುವಾಗ, ಮೋದಿ ಸರಕಾರ 'ವ್ಯಾಪಾರ ಸುಗಮತೆ'ಯನ್ನು ಹೆಚ್ಚಿಸಲು ಏನೆಲ್ಲಾ ಪ್ರಯತ್ನಗಳನ್ನು ನಡೆಸಿದರೂ ಹೂಡಿಕೆಯಲ್ಲಿ ಹೆಚ್ಚಳದ ಬದಲು ಸ್ಥಗಿತತೆಯೇ ಕಾಣ ಬರುತ್ತಿದ್ದರೆ ಆಶ್ಚರ್ಯವೇನೂ ಇಲ್ಲ. ಹೂಡಿಕೆಗಳ ಪ್ರಮಾಣ 2013–14ರಲ್ಲಿ 31.3% ಇದ್ದದ್ದು, 2018–19ರಲ್ಲಿ 29.5 % ಕ್ಕೆ ಇಳಿಯಿತು. ಬಂಡವಾಳ ಸರಕುಗಳ ಉತ್ಪಾದನೆ ಮತ್ತು ಆಮದು ಕುರಿತ ಮಾಹಿತಿ ಮತ್ತು ಬ್ಯಾಂಕ್ ಸಾಲಗಳ ಮಾಹಿತಿ ಕೂಡ ಸ್ಥಗಿತತೆಯನ್ನೇ ದೃಢಪಡಿಸುತ್ತವೆ.

ಒಟ್ಟು ಸಾರಾಂಶ–ಅಚ್ಛೇದಿನ್‌ಗಳು ಇನ್ನಷ್ಟು ದೂರ

ಕಳೆದ 5 ವರ್ಷಗಳಲ್ಲಿ ಖಾಸಗಿ ಬಂಡವಾಳಕ್ಕೆ ಭಾರೀ ಲಾಭಗಳನ್ನು ಮಾಡಿಕೊಳ್ಳಲು, ಮತ್ತು ಆ ಮೂಲಕ ಶ್ರೀಮಂತರಿಗೆ ಹೆಚ್ಚು ಸಂಪತ್ತನ್ನು ಸಂಗ್ರಹಿಸಿಕೊಳ್ಳಲು ಒಂದು "ಮಿತ್ರತ್ವಪೂರ್ಣ" ವಾತಾವರಣವನ್ನು ಒದಗಿಸುವ ಸತತ ಪ್ರಯತ್ನಗಳು ನಡೆದಿವೆ. ಇವು ಚಮಚಾ ಬಂಡವಾಳಶಾಹಿಗಳಿಗೇನೋ ಪ್ರಯೋಜನಗಳನ್ನು ಕೊಟ್ಟಿದೆ, ಆದರೆ ಉತ್ಪಾದಕ ಚಟುವಟಿಕೆಗಳಲ್ಲಿ ಹೂಡಿಕೆಗಳನ್ನು ಆಕರ್ಷಿಸುವಲ್ಲಿ ವಿಫಲವಾಗಿವೆ, ಅಂದರೆ ವ್ಯಾಪಕ ಉದ್ಯೋಗವಕಾಶಗಳನ್ನು ನಿರ್ಮಿಸುವಲ್ಲಿ ಸಂಪೂರ್ಣ ವಿಫಲವಾಗಿವೆ ಎಂಬುದು ಸುಸ್ಪಷ್ಟ. ನೋಟುರದ್ಧತಿ, ಜಿಎಸ್‌ಟಿ ಮತ್ತು ಜಾನುವಾರು ವ್ಯಾಪಾದ ನಿಷೇಧ ಕೂಡ ಇಂತಹ ಹೂಡಿಕೆಗಳನ್ನು ಆಕರ್ಷಿಸುವಲ್ಲಿನ ವಿಫಲತೆಯಲ್ಲಿ ತಮ್ಮ ಕೊಡುಗೆಗಳನ್ನು ನೀಡಿವೆ.

ಇಂತಹ ಒಂದು ಸನ್ನಿವೇಶದಲ್ಲಿ, ಒಂದೆಡೆಯಲ್ಲಿ, ಮೋದಿ ಸರಕಾರದ ಉದಾರ ಬಕ್ಷೀಸುಗಳ ಫಲಾನುಭವಿಗಳು ನಿರ್ಮಿಸಿದ ಉದ್ಯೋಗಗಳ ಪ್ರಮಾಣ ಅತ್ಯಲ್ಪವಾಗಿದ್ದರೆ, ಮತ್ತೊಂದೆಡೆಯಲ್ಲಿ ಕೃಷಿ ಬಿಕ್ಕಟ್ಟು ಆಳಗೊಂಡುದರಿಂದ ಉದ್ಯೋಗಾರ್ಥಿಗಳ ಸಂಖ್ಯೆ ಅಪಾರ ಪ್ರಮಾಣದಲ್ಲಿ ಏರಿದೆ. ಉದ್ಯೋಗಗಳ ಆವಶ್ಯಕತೆ ಮತ್ತು ಲಭ್ಯತೆಯ ನಡುವಿನ ಕಂದರ ಇನ್ನೂ ಅಗಲಗೊಂಡು ಕೋಟ್ಯಂತರ ಭಾರತೀಯರನ್ನು ಹತಾಶೆಯತ್ತ ತಳ್ಳಿದೆ.

ನಿಜ, ಸರಕಾರದ ಔಪಚಾರಿಕ ಮತ್ತು ಅನೌಪಚಾರಿಕ ಪ್ರಚಾರ ಯಂತ್ರ ಜಿಡಿಪಿ ಬೆಳವಣಿಗೆ ದರಗಳು, ಹಲವಾರು ಯೋಜನೆಗಳ ಫಲಾನುಭವಿಗಳ ಸಂಖ್ಯೆಗಳಲ್ಲಿ ಹೆಚ್ಚಳ, ಹಣದುಬ್ಬರ ಇಳಿಕೆ ಮುಂತಾದವುಗಳ ಬಗ್ಗೆ ಟಾಂಟಾಂ ಮಾಡುತ್ತವೆ. ಅದರೆ ಭಾರತದ ಕೋಟ್ಯಂತರ ದುಡಿಮೆಗಾರರ ಕುಟುಂಬಗಳ ಶೋಚನೀಯ ಆರ್ಥಿಕ ಪರಿಸ್ಥಿತಿಗಳಲ್ಲಿ, ಮತ್ತು ಹಲವಾರು ಸಣ್ಣ ವ್ಯಾಪಾರಿಗಳ ನಡುವೆ ಈ ಅಂಕಿ–ಅಂಶಗಳ ಪ್ರತಿಧ್ವನಿಗಳು ಕೇಳಿಸವು. ನಿಜಸಂಗತಿಯೆಂದರೆ, 'ಅಚ್ಛೇದಿನ್' 5 ವರ್ಷಗಳ ಹಿಂದೆ ಇದ್ದುದಕ್ಕಿಂತಲೂ ಇಂದು ಬಹುದೂರದ ಕನಸಾಗಿ ಬಿಟ್ಟಿದೆ.


ನಿಜ ಬದುಕಿನ ಪ್ರಶ್ನೆಗಳನ್ನು ಮುಚ್ಚಿ ಹಾಕಲು ಈಗ 'ಚೌಕೀದಾರ' ಆಂದೋಲನದ ವೇಷ

ಸಾರ್ವತ್ರಿಕ ಚುನಾವಣೆಗಳಲ್ಲಿ ಜನರ ಮುಂದಿರುವ ಪ್ರಶ್ನೆಗಳ ಮೇಲೆ ಘೋಷಣೆಗಳು ಪ್ರಚಾರಕ್ಕೆ ಬರುತ್ತವೆ, ಅದರಲ್ಲೇನೂ ವಿಶೇಷವಿಲ್ಲ. ಆದರೆ ಈಗ ಇಂತಹ ಪ್ರಶ್ನೆಗಳನ್ನು ಮರೆಮಾಚುವ ತಂತ್ರಗಳಾಗಿಯೇ ಘೋಷಣೆಗಳು ಮೂಡಿ ಬರುತ್ತಿವೆ. ಕಳೆದ ತಿಂಗಳುಗಳಲ್ಲಿ ಸಂಸತ್ತಿನ ಎದುರು ಮತ್ತು ದೇಶಾದ್ಯಂತ ರೈತರ, ಕಾರ್ಮಿಕರ, ಯುವಜನರ, ಮಹಿಳೆಯರ, ದಲಿತರ, ಆದಿವಾಸಿಗಳ ಭಾರೀ ಮತಪ್ರದರ್ಶನಗಳು ದೇಶದ ಮುಂದೆ ಗಹನವಾದ ಪ್ರಶ್ನೆಗಳನ್ನು ಎತ್ತಿದವು–ವಿಶೇಷವಾಗಿ ಸಾರ್ವತ್ರಿಕ ಚುನಾವಣೆಗಳ ಹಿನ್ನೆಲೆಯಲ್ಲಿ. ಈಗ ಆ ಪ್ರಶ್ನೆಗಳನ್ನೇ ಹಿನ್ನೆಲೆಗೆ ತಳ್ಳುವ ಸರ್ವಪ್ರಯತ್ನಗಳು ನಡೆಯುತ್ತಿವೆ. ಆಳುವ ಪಕ್ಷದ 'ಮೈ ಭೀ ಚೌಕೀದಾರ್' ಇಂತಹ ಇತ್ತೀಚಿನ ಪ್ರಯತ್ನ. ಪ್ರಧಾನ ಮಂತ್ರಿಗಳು ತಮ್ಮ ಹೆಸರಿನ ಮುಂದೆ ಚೌಕೀದಾರ್ ಎಂದು ಸೇರಿಸಿ 'ಇಂದು ಪ್ರತಿಯೊಬ್ಬ ಭಾರತೀಯ ನಾನೂ ಚೌಕೀದಾರ ಎನ್ನುತ್ತಿದ್ದಾರೆ" ಎಂದು ಟ್ವೀಟ್ ಮಾಡುವುದರೊಂದಿಗೆ ಆರಂಭವಾಗಿರುವ ಈ ಆಂದೋಲನ ಈಗ ಭಾರಿ ಸ್ಪಂದನವನ್ನು ಪಡೆದಿದೆ, ಜಗತ್ತಿನಲ್ಲೆಲ್ಲ ಪ್ರಸಿದ್ಧವಾಗಿ ಬಿಟ್ಟಿದೆ ಎಂದು ಬಿಜೆಪಿ ಹೇಳುತ್ತಿದೆ.



ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



ನಿರೀಕ್ಷಿಸಿದಂತೆ ಕೇಂದ್ರ ಸಂಪುಟದ ಎಲ್ಲ ಮಂತ್ರಿಗಳೂ ತಮ್ಮ ಹೆಸರ ಮುಂದೆ ಚೌಕೀದಾರ್ ಸೇರಿಸಿಕೊಂಡಿದ್ದಾರೆ. ಪತ್ರಕರ್ತೆಯರ ಮೇಲೆ ಲೈಂಗಿಕ ಕಿರುಕುಳದ ಆಪಾದನೆಯಿಂದಾಗಿ ರಾಜೀನಾಮೆ ನೀಡಬೇಕಾಗಿ ಬಂದ ಮಾಜಿ ಮಂತ್ರಿ ಚೌಕೀದಾರ್ ಎಂ.ಜೆ.ಅಕ್ಬರ್ ಕೂಡ ಇದನ್ನು 'ಹೆಮ್ಮೆಯಿಂದ' ಸೇರಿಕೊಂಡ ತಕ್ಷಣವೇ 'ಇನ್ನು ದೇಶದಲ್ಲಿ ಯಾವ ಮಹಿಳೆಯೂ ಸುರಕ್ಷಿತಳಲ್ಲ" ಎಂಬ ಪ್ರತಿಕ್ರಿಯೆ ಬಂತಂತೆ.

ಇವರದ್ದೇ ರೀತಿಯಲ್ಲಿ 'ಹೆಮ್ಮೆಯಿಂದ' ಚೌಕೀದಾರ್ ಎಂದು ಸೇರಿಸಿಕೊಂಡವರ ಸ್ಯಾಂಪಲ್ ನೋಡಿ:

* ಮುಕುಲ್ ರಾಯ್, ಶಾರದಾ ಹಗರಣ ಚೌಕೀದಾರ್
* ಶಿವರಾಜ್ ಸಿಂಗ್ ಚೌಹಾಣ್, ವ್ಯಾಪಂ ಚೌಕೀದಾರ್,
* ಯೆಡ್ಯೂರಪ್ಪ, ಆಪರೇಷನ್ ಕಮಲ ಚೌಕೀದಾರ್
(ಈಗ...... ?)
* ಶರದ್ ತ್ರಿಪಾಠಿ, ಚಪ್ಪಲ್ ಚೌಕೀದಾರ್

ಇತ್ಯಾದಿ, ಇತ್ಯಾದಿ

ಚೌಕೀದಾರ?! ವ್ಯಂಗ್ಯಚಿತ್ರ: ಅರವಿಂದ ತೆಗ್ಗಿನಮಠ



ಇವರೆಲ್ಲರಿಗೆ ಧನ್ಯವಾದ ಸಲ್ಲಿಸಿದ ಪ್ರಧಾನ ಚೌಕೀದಾರರು 'ನೀರವ್ ಮೋದಿ'ಗೂ ಧನ್ಯವಾದ ಸಲ್ಲಿಸಿದರಂತೆ, ನಂತರ ಇದು ಒಂದು ಫೇಕ್ ಅಕೌಂಟ್ ಎಂದು ಗೊತ್ತಾದಾಗ ಆ'ಧನ್ಯವಾದ'ವನ್ನು ಡಿಲೀಟ್ ಮಾಡಿದರಂತೆ. ವಾಸ್ತವವಾಗಿ ಈ 'ಧನ್ಯವಾದ'ಗಳು 'ಸ್ವಯಂಚಾಲಿತ' ಎಂದು ಬೇರೆ ಹೇಳಬೇಕಾಗಿಲ್ಲ.

ಈ 'ಆಂದೋಲನ'ದ ಗೋಸುಂಬೆತನ ವ್ಯಂಗ್ಯಚಿತ್ರಕಾರರ ಕಟು ವಿಮರ್ಶೆಗೆ ಸಿಲುಕಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಆದರೆ ಎಲ್ಲಕ್ಕಿಂತ ಮಿಗಿಲಾಗಿ, ಮೂರು ವರ್ಷಗಳಿಂದ ಜೆಎನ್‌ಯು ನಿಂದ ಕಾಣೆಯಾದ ಮಗ ನಜಿಬ್ ಅಹ್ಮದ್‌ನನ್ನು ಹುಡುಕುತ್ತಿರುವ ತಾಯಿಯ "ನೀವು ಚೌಕೀದಾರರಾದರೆ, ಹೇಳಿ, ನನ್ನ ಮಗ ನಜೀಬ್ ಎಲ್ಲಿ?" ಎಂಬ ಟ್ವೀಟ್ ಇದನ್ನು ಪರಿಣಾಮಕಾರಿಯಾಗಿ ಬಯಲಿಗೆಳೆದಿದೆ.

ಏನು ತಿನ್ನುತ್ತೀಯ? ಏನು ತೊಡುತ್ತೀಯಾ? ಏನು ಹೇಳುತ್ತೀಯಾ? ಯಾರನ್ನು ಪ್ರೀಸುತ್ತೀಯಾ? ಏನು ಓದುತ್ತೀಯಾ? ಏನು ಯೋಚಿಸುತ್ತೀಯಾ? –ವ್ಯಂಗ್ಯಚಿತ್ರ: ಮಂಜುಲ್@ಪೇಟ್ರಿಯಟ್





ವ್ಯಂಗ್ಯಚಿತ್ರ" ಪಿ.ಮಹಮ್ಮದ್, ವಾರ್ತಾಭಾರತಿ

ಗಾಂಧೀ ಗಿಡ

ಇರಬಹುದು
ನಲವತ್ತೇಳರ ಆಜು ಬಾಜು.

ಸುಡುಬೇಸಿಗೆಯ
ನೀರಿಲ್ಲದ ಆ ಊರಿಗೆ
ಬಂದು
ಗಾಂಧಿ ಹಚ್ಚಿದರು ಗಿಡ;
ಊರ ಜನರ ನೆನಪಿಗೆ.

ಬರಗಾಲದ ಊರು
ಬರಿಗಾಲ ಗಾಂಧಿ
ಬಳಲಿ, ಬೆವರಿದ
ಒಣಕೋಲ ಗಾಂಧಿ
ನಕ್ಕು ನಡೆದರು – ಮುಂದಿನೂರಿಗೆ.

ಕನಸು ಕಂಡವರು
ಕಾಯ್ದು ಕುಂತವರು
ಕುಳಿತು ಹೊಸ್ತಿಲಲ್ಲೆ
ನೋಡಿದರು.

ಬೊಗಸೆ, ಬೊಗಸೆ
ನೀರ ಸುರಿದು
ನೂರು ಫಲ ಕೊಡುವ
ಕನಸು ಕಂಡರು;
ಗಾಂಧೀಗಿಡ ತುಂಬ.

ಹಟತೊಟ್ಟು
ಉದ್ದುದ್ದ, ಅಗಲಗಲ
ಮುಗಿಲತ್ತ
ಕನಸು ಕೈ ಬೀಸಿ
ಬೆಳೆದಿತ್ತು ಗಾಂಧೀ ಗಿಡ.

ಬಿಸಿಲೂರ
ಬಿಸಿಲು ಕುದುರೆ,
ಅರಳಿ ನಿಂತಿತ್ತು
ಊರ ಚತ್ತರಿಯಂತೆ.

ಹಕ್ಕಿಗಳು
ಹಾರಿ ಬಂದವು;
ಹಣ್ಣು ಗೂಡು ನೆರಳು ಬಯಸಿ.
ಬೇಟೆಗಾರರು
ನಿಂತರು ನೂರು ಶಿಕಾರಿ ಸರದಿಗಾಗಿ.

ಬೇಲಿ ಬಂದವು ಸುತ್ತ
ಹುತ್ತ ಬಿಟ್ಟು
ಹಾವು ಹೊರ ಬಂದವು.

ಮಬ್ಬುಗತ್ತಲ ಮಂಜಿನಲ್ಲಿ
ಹಾರಿ ಹೋದವು ಹಕ್ಕಿಗಳು.

ಕನಸು ಕಂಡವರ
ತೆರದ ಕಣ್ಣು
ಹೆಣ ಯಾತ್ರೆಗಳು
ನಿತ್ಯ ಹಗಲು ನಡೆದವು.

ಈಗ
ನೆರಳಿಲ್ಲ ನೆಲಕ್ಕೆ
ಅರಳಿಲ್ಲ ಹೂವುಗಳು
ಸತ್ತ ನೆಲದ
ಸತ್ವ ಕುಡಿದ ಗಿಡ
ಹಣ್ಣು ಕೊಟ್ಟಿಲ್ಲ.

ಮೂಕ ಕಾವ್ಯದ
ಪ್ರತೀಕದ ಗಿಡ
ನಿತ್ಯ ಕೊಡಲಿಗೆ
ಬಡವರಿಗೆ ಚಕ್ಕೆ
ಕೊಡುವ ಗಾಂಧೀಗಿಡ.

ಬೇರು ಸತ್ತಿಲ್ಲ
ಮತ್ತೊಮ್ಮೆ ಈ
ನೆಲದ ಮಾತಾಗಬಹುದೆ
ಹೇಳು : ಗಾಂಧಿಗಿಡ.

–ಸತೀಶ ಕುಲಕರ್ಣಿ

ಬಂಡಾಯ ಸಾಹಿತ್ಯ ಸಂಘಟನೆಯಿಂದ ಸೈದ್ಧಾಂತಿಕ... ಪುಟ 16 ರಿಂದ

ಇದರ ಬೆನ್ನಲ್ಲೇ ಇದೇ ಮಾರ್ಚ್ 9–10 ರಂದು ಬೆಳಗಾವಿಯಲ್ಲಿ ಎರಡು ದಿನಗಳ ರಾಜ್ಯಮಟ್ಟದ ಕಾರ್ಯಗಾರ ಏರ್ಪಡಿಸಿತ್ತು. "ಸೈದ್ಧಾಂತಿಕ ಅನುಸಂಧಾನ"ದಲ್ಲಿ ಅಂಬೇಡ್ಕರ್‌ವಾದ, ಮಾರ್ಕ್ಸ್‌ವಾದ, ಗಾಂಧಿವಾದ, ಲೋಹಿಯಾವಾದ, ಸ್ತ್ರೀವಾದ, ವಿಚಾರವಾದ ಕುರಿತು ಉಪನ್ಯಾಸ, ಸಹ ಸ್ಪಂದನ, ಚರ್ಚೆಗಳು ಅರ್ಥಪೂರ್ಣವಾಗಿ ನಡೆದವು. ಮರಾಠಿಯ ಹೆಸರಾಂತ ಲೇಖಕ ಶರಣಕುಮಾರ ನಿಂಬಾಳೆ ಉದ್ಘಾಟನಾ ಬಾಷಣ ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಬ ಮಡಾಯದ ಹಿರಿಯ ಸಾಹಿತಿ ಪ್ರೊ॥ ಬರಗೂರು ರಾಮಚಂದ್ರಪ್ಪ ಮಾತನಾಡಿ, "ಜಾತ್ಯತೀತ ವ್ಯವಸ್ಥೆಯಲ್ಲಿ ವಿಷಬೀಜ ಬಿತ್ತುವವರು, ದೇಶದಲ್ಲಿ ನೆತ್ತರು ಹರಿಸುವುದಕ್ಕೆ ಉತ್ತೇಜನ ಕೊಡುವವರು. ಸಂವಿಧಾನವನ್ನೇ ಸುಟ್ಟು ಹಾಕಲು ಮುಂದಾಗುವವರು ನಮ್ಮ ನಡುವೆ ಹೆಚ್ಚುತ್ತಿದ್ದಾರೆ. ಅವರೇ ನಿಜವಾದ ದೇಶದ್ರೋಹಿಗಳು. ಅಂಥಹ ಮತೀಯವಾದಗಳನ್ನು ಹುಟ್ಟುಹಾಕಲೆಂದೇ ನಾಲ್ಕು ದಶಕಗಳ ಹಿಂದೆ ಬಂಡಾಯ ಸಾಹಿತ್ಯ ಹುಟ್ಟಿಕೊಂಡಿತು. ಇಂದಿನ ಯುವ ಪೀಳಿಗೆಗೆ ಸೈದ್ಧಾಂತಿಕ ತಿಳವಳಿಕೆ ನೀಡಬೇಕಾದ ಅಗತ್ಯ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಮಾನವೀಯತೆ ನಶಿಸಿ, ಮತೀಯತೆ ಹೆಚ್ಚುತ್ತಿದೆ. ಆರೋಗ್ಯಕರ ಸಮಾಜ ಇರುವೆಡೆ ಅನಾರೋಗ್ಯಕರ ಸಮಾಜ ನಿರ್ಮಾಣವಾಗುತ್ತಿದೆ. ಯುವ ಜನಾಂಗಕ್ಕೆ ವಿವಿಧ ಸಿದ್ಧಾಂತಗಳ ಬಗ್ಗೆ ಮನವರಿಕೆ ಮಾಡಿಕೊಡುವ ಅಗತ್ಯ ಇದೆ. ಗಾಂಧಿ, ಅಂಬೇಡ್ಕರ್, ಮಾರ್ಕ್ಸ್, ಲೋಹೊಯಾ ವಾದಗಳ ಜೊತೆಗೆ ಸ್ತ್ರೀವಾದ, ವಿಚಾರವಾದ ಇತ್ಯಾದಿಗಳ ಬಗ್ಗೆ ತಿಳಿದುಕೊಳ್ಳಲು ಯುವ ಜನರು ಅಧ್ಯಯನಶೀಲತೆ ರೂಢಿಸಿಕೊಳ್ಳಬೇಕು" ಎಂದು ಕರೆ ನೀಡಿದರು.

ಎರಡು ದಿನಗಳಲ್ಲಿ ನಡೆದ ಗೋಷ್ಠಿಗಳಲ್ಲಿ "ಅಂಬೇಡ್ಕರ್‌ವಾದ"ದ ಬಗ್ಗೆ ಶಿವರುದ್ರ ಕಲ್ಲೋಳಕರ ಉಪನ್ಯಾಸ ನೀಡಿದರೆ; ಅನಸೂಯ ಕಾಂಬಳೆ, ಸೂರ್ಯಕಾಂತ ಸುಜ್ಞಾತ ಸಹಸ್ಪಂದನೆ ನೀಡಿದರು. ಮೊದಲ ದಿನದ ಮಧ್ಯಾನ್ಹದ ಗೋಷ್ಠಿಯಲ್ಲಿ "ಮಾರ್ಕ್ಸ್‌ವಾದ"ದ ಬಗ್ಗೆ ಉಪನ್ಯಾಸ ನೀಡಿದ ಕಾಂಮ್ರೇಡ್ ಎಸ್.ವೈ. ಗುರುಶಾಂತ್ ಅವರು ಮಾರ್ಕ್ಸ್ ಚಿಂತನೆಯಿಂದ ಬೇರೆ ಬೇರೆ ರೂಪದಲ್ಲಿ ವಿಶ್ವದಾದ್ಯಂತ ಹಲವು ಸಂದರ್ಭ ಮಾರ್ಕ್ಸಿಸ್ಟರು ಅಧಿಕಾರಕ್ಕೆ ಬಂದಿದ್ದಾರೆ. ಹೀಗಾಗಿ ಕಾರ್ಮಿಕ ಸಂಘಟನೆಗಳು ಪ್ರಭಲವಾಗುತ್ತಿವೆ" ಎಂದು ಅಭಿಪ್ರಾಯಿಸಿದರು. ಮೈಸೂರಿನ ಲಕ್ಷ್ಮೀನಾರಾಯಣ್ ಮಾತನಾಡಿ, "ಪ್ರಭುತ್ವ ಯಾವಾಗಲೂ ಸಮಾಜವಾದದ ಬಗ್ಗೆ ಮಾತನಾಡುವುದಿಲ್ಲ. ಮಧ್ಯಮ ವರ್ಗ ಹಾಗೂ ದಲಿತವರ್ಗದ ಐಕ್ಯತೆ ಛಿದ್ರವಾಗುತ್ತಿದೆ. ಸಾವರ್ಕರ್ ಪ್ರಣೀತ ಹಿಂದುತ್ವ ಮೆರೆಯುತ್ತಿದೆ. ಗಾಂಧಿ ನಂಬಿದ ಹಿಂದೂ ಧರ್ಮ ಬೇರೆಯಿತ್ತು" ಎಂದು ಪ್ರತಿಕ್ರಿಯೆ ನೀಡಿದರು.

"ಸ್ತ್ರೀವಾದ" ಘೋಷ್ಠಿಯಲ್ಲಿ ಡಾ॥ ಸಿದ್ಧಗಂಗಮ್ಮ ಉಪನ್ಯಾಸ ನೀಡಿ, "ವೈಚಾರಿಕ ನೆಲೆಗಟ್ಟಿನಲ್ಲಿ ಸ್ತ್ರೀವಾದಿ ಚಿಂತನೆ ಗಟ್ಟಿಯಾಗುತ್ತಿದೆ. ಪುರುಷ ಕೇಂದ್ರಿತ ಚಿಂತನೆಗಳು ಛಿದ್ರವಾಗಿ ಸ್ತ್ರೀಯ ನೈಜ ಅಭಿವ್ಯಕ್ತಿ ನೆಲೆಗೊಳ್ಳುತ್ತಿದೆ" ಎಂದು ಅಭಿಪ್ರಾಯಿಸಿದರು. ಸಹಾಯಕ ಪ್ರಾಧ್ಯಾಪಕಿ ಡಾ॥ ಶೋಬಾ ನಾಯಕ, ಡಾ॥ ಚಂದ್ರಿಕಾ ಅವರು ಸಹ ಸ್ಪಂದನೆ ನೀಡಿದರು.

ಎರಡನೇ ದಿನದ ಮೊದಲ ಗೋಷ್ಠಿ "ಗಾಂಧಿವಾದ"ದ ಬಗ್ಗೆ ಇತ್ತು. ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ॥ ರಂಗರಾಜು ವನದುರ್ಗ, ಬಾಲ್ಯದ ದಾಂಧಿ, ಆಫ್ರಿಕಾದ ಗಾಂಧಿ, ಆಶ್ರಮದ ಗಾಂಧಿ, ಹೋರಾಟದ ಗಾಂಧಿ, ಫಕೀರ ಗಾಂದಿ ಎಂಬ ವಿಭಾಗ ಮಾಡಿಕೊಂಡು ಗಾಂಧಿ ವಿಚಾರವನ್ನು ಎಳೆಎಳೆಯಾಗಿ ಬಿಡಿಸಿಟ್ಟರು. ಸಹ ಸ್ಪಂದನದಲ್ಲಿ ರಾಜು ಗುಂಡಾಪುರ ಸಹ ಸ್ಪಂದನೆ ನೀಡಿದರು. ಪತ್ರಕರ್ತ ಬಿ.ಎಂ. ಹನೀಫ್ "ಲೋಹಿಯಾವಾದ"ದ ಬಗ್ಗೆ ಉಪನ್ಯಾಸ ನೀಡಿದರೆ; ಕಿರಣ ಗಾಜನೂರು, ದಸ್ತಗೀರ್‌ಸಾಬ್ ದಿನ್ನಿ ಸಹ ಸ್ಪಂದನೆ ನೀಡಿದರು. ಆರನೇ ಹಾಗೂ ಕೊನೆಯ ಗೋಷ್ಠಿ "ವಿಚಾರವಾದ"ದ ಬಗ್ಗೆ ನಡೆಯಿತು. ಬೆಂಗಳುರು ವಿವಿ ಪ್ರಾಧ್ಯಾಪಕ ಡಾ॥ ರಾಜಪ್ಪ ದಳವಾಯಿ ಮಾತನಾಡಿ, "ಭಾರತದ ನೆಲಕ್ಕೆ ವಿಚಾರವಾದದ ದೊಡ್ಡ ಪರಂಪರೆಯೇ ಇದೆ. ಚಾರ್ವಾಕ, ಬುದ್ಧ, ವಚನಕಾರರು, ಕುವೆಂಪು, ಕೋವೂರು, ಎಚ್ಚೆನ್ ಮೊದಲಾದವರ ವೈಚಾರಿಕ ಕೊಡುಗೆ ಮಹತ್ವದ್ದು" ಎಂದರು.

ಬಂಡಾಯ ಸಂಘಟನೆ ಹುಟ್ಟಿದ ಸಂದರ್ಭದಿಂದ ಇಂದಿನವರೆಗೂ ಅದರ ಜೊತೆ ಹೆಜ್ಜೆ ಹಾಕುತ್ತಾ ಬಂದವರಲ್ಲಿ ಕತೆಗಾರ ಕುಂ. ವೀರಭದ್ರಪ್ಪ, ಪ್ರೊ. ಅಲ್ಲಮಪ್ರಭು ಬೆಟ್ಟದೂರು ಪ್ರಮುಖರು. ಸಮಾರೋಪ ಸಮಾರಂಭದಲ್ಲಿ ಈ ಇಬ್ಬರೂ ಉಪಸ್ಥಿತರಿದ್ದರು. ಜೊತೆಗೆ ಬಂಡಾಯದ ಸಂಗಾತಿಗಳಾದ ಪತ್ರಕರ್ತ ಸರ್ ಬೂ ಕಾಟ್ಕರ್ ಪ್ರೊ. ಭಕ್ತರಹಳ್ಳಿ ಕಾಮರಾಜ, ಪ್ರೊ॥ ಕರಿಯಪ್ಪ ಮಾಳಿಗೆ, ಡಾ॥ ಎಚ್.ಆರ್. ಸ್ವಾಮಿ, ಆರ್.ಜಿ. ಹಳ್ಳಿ ನಾಗರಾಜು ಮೊದಲಾದವರು ಉಪಸ್ಥಿತರಿದ್ದು ಚರ್ಚೆಯಲ್ಲಿ ಭಾಗವಹಿಸಿದರು.

ಎರಡು ದಿನಗಳ ಬಂಡಾಯದ ಈ ಕಾರ್ಯಗಾರ ಬೆಳಗಾವಿಯಲ್ಲಿ ಯಶಸ್ವಿ ಆಗಲು ಶ್ರಮಿಸಿದವರು ಸಂಚಾಲಕ ಪ್ರೊ. ವೈ.ಬಿ. ಹಿಮ್ಮಡಿ, ಸಹಕಾರ ನೀಡಿದವರು ಮಾನವ ಬಂಧುತ್ವ ವೇದಿಕೆಯ ಗೆಳೆಯರು. ●

'ಬಂಡಾಯ ಸಾಹಿತ್ಯ ಬದ್ಧತೆಯ ಸಾಹಿತ್ಯ'

"ನಾಲ್ಕು ದಶಕಗಳ ಹಿಂದೆ ಕನ್ನಡದಲ್ಲಿ ಪ್ರಾರಂಭವಾದ ಬಂಡಾಯ ಸಾಹಿತ್ಯ ಚಳವಳಿ ಹೊಸ ಕ್ರಾಂತ್ರಿಯನ್ನು ಹುಟ್ಟುಹಾಕಿತು. ಬಂಡಾಯ ಸಾಹಿತ್ಯ ಆಧುನಿಕ ವಚನ ಸಾಹಿತ್ಯವಿದ್ದಂತೆ. ದಲಿತ ಸಾಹಿತ್ಯ ಸಮಸ್ಯೆಯನ್ನು ಪ್ರತಿಬಿಂಬಿಸುತ್ತದೆ. ಇದು ನಮ್ಮದೇ ಬದುಕಿನ ನೋವು ಬಿಂಬಿಸುವ ಜನ ಸಾಮಾನ್ಯರ ಸಾಹಿತ್ಯ. ಪ್ರಜಾಪ್ರಭುತ್ವ ಸ್ಥಾಪನೆ, ಸಮಾನತೆ ದರ್ಶನ ನೀಡುತ್ತದೆ. ಶುದ್ಧ ಸಾಹಿತ್ಯ ಎಂಬುದು ಕೇವಲ ಮನರಂಜನೆಗೆ ಮಾತ್ರ. ಈ ಸಾಹಿತ್ಯದಲ್ಲಿ ಆನಂದವಿದೆಯೇ ಹೊರತು ವೇದನೆ, ಕಣ್ಣೀರು ಇರುವುದಿಲ್ಲ. ಹೀಗಾಗಿ ನಮ್ಮ ನೋವಿನ ದಲಿತ ಬದುಕಿನ ವಾಸ್ತವ ಚಿತ್ರಣ ಕೊಡಬೇಕಾಯಿತು. ದಲಿತ ಮತ್ತು ಬಂಡಾಯ ಸಾಹಿತ್ಯ ಬದ್ಧತೆಯ ಸಾಹಿತ್ಯ."

–ಶರಣಕುಮಾರ ನಿಂಬಾಳೆ

(ಮರಾಠಿ ಲೇಖಕ, ಉದ್ಘಾಟನಾ ಭಾಷಣದಲ್ಲಿ)

ಮಾನವ ಚರಿತ್ರೆಯ ಅಧ್ಯಯನಕ್ಕೆ ವಿಜ್ಞಾನ–ತಂತ್ರಜ್ಞಾನದ........... ಪುಟ 9 ರಿಂದ

ಆಳ, ಸಮಗ್ರತೆ, ತೀವ್ರತೆ ಬಗ್ಗೆ ಹೇಳಿದರು. ಅದಕ್ಕೆ 'ಚರ್ಚ್ ವಿರೋಧಿ ಚಳುವಳಿ– ಹೈಡ್ ಪಾರ್ಕಿನಲ್ಲಿ ಪ್ರದರ್ಶನ' ಎಂಬ ಪುಸ್ತಕದಲ್ಲಿ ಇರುವ ಒಂದು ಅಧ್ಯಾಯವನ್ನು ಉದಾಹರಣೆಯಾಗಿ ಕೊಟ್ಟು ವಿವರಿಸಿದರು. ಮತಧರ್ಮ ಮೂಲಭೂತವಾದ ಮತ್ತಿತರ ಭೀಕರ ಸ್ವರೂಪವನ್ನು ತಳೆದಿರುವ ಇಂದಿನ ಸಂದರ್ಭದಲ್ಲಿ ಈ ಪುಸ್ತಕದ ಅಧ್ಯಯನದ ಮಹತ್ವವನ್ನು ಒತ್ತಿ ಹೇಳಿದರು. ಹಿರಿಯ ಕಮ್ಯುನಿಸ್ಟ್ ನಾಯಕ ಬಿ.ವಿ. ಕಕ್ಕಿಲ್ಲಾಯ ಅವರ 'ಮಾರ್ಕ್ಸ್ ಬದುಕು, ಬರಹ' ಈ ಬಗ್ಗೆ ಕನ್ನಡದಲ್ಲಿ ಬಂದ ಅತ್ಯಂತ ಸಮಗ್ರ ಪುಸ್ತಕ. ಅದೇ ಸಮಯದಲ್ಲಿ ಅದು ಎಲ್ಲರ ಓದಿಗೆ ನಿಲುಕುವ ಸರಳ ಶೈಲಿಯಲ್ಲಿದೆ ಎಂದೂ ಹೇಳಿದರು. ಮಾರ್ಕ್ಸ್ ಬದುಕಿನ ಜತೆ ಅವರ ಬರಹ, ಹೋರಾಟಗಳ ಸಮಗ್ರ ಚಿತ್ರಣವನ್ನು ಕೊಡುವುದಲ್ಲದೆ, ಅವರ ಎಲ್ಲಾ ಪ್ರಮುಖ ಬರಹಗಳ ಅತ್ಯುತ್ತಮ ಸಂಗ್ರಹರೂಪದ ಸಾರಾಂಶ ಸಹ ಇಲ್ಲಿ ದೊರೆಯುತ್ತದೆ ಎಂದು ಕೆಲವು ಉದಾಹರಣೆಗಳ ಸಹಿತ ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿ.ವಿ.ಶ್ರೀರಾಮರೆಡ್ಡಿ ಅವರು ಮಾತನಾಡುತ್ತಾ ಮಾರ್ಕ್ಸ್‌ವಾದದ ಅರಿವನ್ನು ದುಡಿಯುವ ಜನರ ಬಳಿ ಒಯ್ಯುವಲ್ಲಿ ನಮ್ಮ ವಿಫಲತೆಯೇ ಇಂದಿನ ಗಂಭೀರ ಪರಿಸ್ಥಿತಿಗೆ ಮೂಲಕಾರಣ ಎಂದು ಹೇಳಿ, ಇಂದು ದೇಶ ಎದುರಿಸುತ್ತಿರುವ ಗಂಭೀರ ಸವಾಲುಗಳ ಬಗ್ಗೆ ಮಾತನಾಡಿದರು. ಮೊದಲಿಗೆ ನವಕರ್ನಾಟಕದ ಡಾ. ಸಿದ್ಧನಗೌಡ ಪಾಟೀಲರು ಪ್ರಾಸ್ತಾವಿಕವಾಗಿ ಮಾತನಾಡಿದರು. ಜಾಗತೀಕರಣ ಮತ್ತು ಉದಾರೀಕರಣದಿಂದ ಬೇಸತ್ತಿರುವ ಜನರು ಕಮ್ಯುನಿಸ್ಟ್ ಸಿದ್ಧಾಂತವನ್ನು ಒಪ್ಪಿಕೊಳ್ಳುತ್ತಿದ್ದಾರೆ, ಭಾರತದಲ್ಲಿ ಕೋಮುವಾದ ಉತ್ತುಂಗಕ್ಕೇರಿದ್ದು, ಹಲವು ಸಮಸ್ಯೆಗಳನ್ನು ಸೃಷ್ಟಿಸಿದೆ. ಉದಾರೀಕರಣಕ್ಕೆ ಆದ್ಯತೆ ನೀಡುತ್ತಿರುವವರು ಒಳಗೊಂಡಂತೆ ಬಹುತೇಕ ಮಂದಿ ಮಾರ್ಕ್ಸ್‌ವಾದ ಓದುವುದಕ್ಕೆ ಮುಂದಾಗುತ್ತಿದ್ದಾರೆ, ಎಂದು ಹೇಳಿದರು. ಆರಂಭದಲ್ಲಿ ಶ್ರೀಧರ ಸ್ವಾಗತಿಸಿದರು.. ವಸಂತ ಕಲಾಲ್ ನಿರೂಪಣೆ ಮಾಡಿದರು. ಎನ್.ಕೆ.ಸತ್ಯನಾರಾಯಣ ವಂದನಾರ್ಪಣೆ ಮಾಡಿದರು. ರೋಟರಿ ಸಭಾಂಗಣ ಕಿಕ್ಕಿರಿದು ತುಂಬಿತ್ತು. ●

'ಹವಾಮಾನ ಬದಲಾವಣೆ' ವಿರುದ್ಧ ಎರಡು ಹೊಸ ಚಳುವಳಿಗಳು

ಜಗದ ಸುತ್ತ

ನಾಗರಾಜ ನಂಜುಂಡಯ್ಯ



ಇದಕ್ಕಾಗಿ ಕೊಳ್ಳುಬಾಕತನ ಬಿಟ್ಟು ಬದುಕಲು ಸಾಧ್ಯವಾಗಬೇಕು. ಇದು ಸಾಧ್ಯವೇ? ಸಾಧ್ಯವಾಗಬೇಕು ಎನ್ನುತ್ತಾರೆ ಮಾರ್ಚ್ 15 ರ ಮುಷ್ಕರ ನಿರತರು. ಮುಂದಿನ ನಿಮ್ಮ ಮಕ್ಕಳ ಪೀಳಿಗೆಗೆ ಜಗತ್ತಿನ ಹಸಿರನ್ನು ಉಳಿಸಿ, ಮಾನವ ಜೀವಗಳನ್ನು ರಕ್ಷಿಸಿ ಎನ್ನುತ್ತಾರೆ ಇಬ್ಬರು ಯುವ ಪ್ರತಿಭಟನೆಗಾರರು. ಅವರಲ್ಲಿ ಪ್ರಮುಖರು ಸ್ವೀಡನಿನ 16 ವರ್ಷದ ಶಾಲಾ ಬಾಲಕಿ ಗ್ರೇಟಾ ಥುನ್ಬರ್ಗ್ ಹಾಗೂ ಅಮೇರಿಕಾದ "ಗ್ರೀನ್ ನ್ಯೂ ಡೀಲ್" ಹೋರಾಟಗಾತಿ ಹಾಗೂ ನ್ಯೂಯಾರ್ಕ್ ಸಂಸತ್ತಿನ 29 ವರ್ಷದ, ಡೆಮಾಕ್ರಟಿಕ್ ಸೋಷಿಯಲಿಸ್ಟ್ ಯುವ ಸಂಸದೆ ಅಲೆಗ್ಸಾಂಡ್ರಿಯಾ ಓಕಾಸಿಯೊ ಕಾರ್ಟೆಜ್

ಹವಾಮಾನ ಬದಲಾವಣೆ ವೈಪರೀತ್ಯಗಳು, ಅಂದರೆ, ಜಾಗತಿಕ ತಾಪಮಾನ ಹೆಚ್ಚಾಗಲು, ನಮ್ಮ ಪ್ರಸ್ತುತ ಆರ್ಥಿಕ ಮತ್ತು ಕೈಗಾರಿಕಾ ವ್ಯವಸ್ಥೆಯ, ಅಂದರೆ ಬಂಡವಾಳಶಾಹಿಯೇ ಕಾರಣ. ಹಾಗಾದರೆ, ಬಂಡವಾಳ ಶಾಹಿ ಪದ್ಧತಿಗೆ ಅಂತ್ಯ ಹಾಡಿ, ಪರ್ಯಾಯ ನೀತಿಗಳನ್ನು ಅನುಸರಿಸುವ ನಿಟ್ಟಿನಲ್ಲಿ, ನಮ್ಮ ಕೊಳ್ಳುಬಾಕತನ ಬಿಟ್ಟು ಬದುಕಲು ಸಾಧ್ಯವೇ?

ಇದೇ ಮಾರ್ಚ್ 15 ರಂದು ಜಾಗತಿಕ ಹವಾಮಾನ ಮುಷ್ಕರವನ್ನು ಸುಮಾರು 100ಕ್ಕು ಹೆಚ್ಚು ದೇಶಗಳಲ್ಲಿ ಅತ್ಯಂತ ಕಾಳಜಿಯಿಂದ ನಡೆಸಲಾಗಿರುವ ವರದಿಗಳಿವೆ. ಮುಂಬರುವ ಜೂನ್ 5, ರಂದು "ವಿಶ್ವ ಪರಿಸರ ದಿನ" ವನ್ನು ಚೀನಾದಲ್ಲಿ ಅರ್ಥ ಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ. 1974ರಲ್ಲಿ ವಿಶ್ವ ಸಂಸ್ಥೆಯ ಅಸೆಂಬ್ಲಿಯ ಕರೆಯ ಮೇರೆಗೆ ಈ ವಿಶ್ವ ಪರಿಸರ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಇದರ ಮೂಲ ಉದ್ದೇಶ ಪರಿಸರ ಸಂರಕ್ಷಣೆ, ಅಂದರೆ



ಇಂದು ಜಾಗತಿಕ ತಾಪಮಾನದ ಹತೋಟಿ.

ಈ ನಿಟ್ಟಿನಲ್ಲಿ ಮೊಟ್ಟ ಮೊದಲ ಬಾರಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹವಾಮಾನ ಬದಲಾವಣೆಯ ವೈಪರೀತ್ಯ ಬಗ್ಗೆ ಅರಿವು ಮೂಡಿಸುವ ಮಾರ್ಚ್ 15 ರ ಮುಷ್ಕರ ಈ ದಿಸೆಯಲ್ಲಿ ಗಟ್ಟಿಯಾದ ಸಂದೇಶವನ್ನು ವಿಶ್ವಕ್ಕೆ ನೀಡುವಲ್ಲಿ ಪರಿಣಾಮಕಾರಿ ಪಾತ್ರ ನಿರ್ವಹಿಸಿದೆ.

ಸಾಮ್ರಾಜ್ಯಶಾಹಿ ರಾಷ್ಟ್ರಗಳನ್ನು ಪ್ರಮುಖವಾಗಿ ಅಮೇರಿಕವನ್ನು ಒಳಗೊಂಡಂತೆ, ಸುಮಾರು 196 ವಿಶ್ವ ಸಂಸ್ಥೆಯ ರಾಷ್ಟಗಳು ಒಂದು ಸಮಗ್ರವಾದ ಒಪ್ಪಂದಕ್ಕೆ ಬಂದಿವೆ. ಆದರೂ, ಕಳೆದ 2017 ರಲ್ಲಿ "ಹವಾಮಾನ ಬದಲಾವಣೆ" ಯ ಕುರಿತಂತೆ ಪ್ಯಾರಿಸ್ ಒಪ್ಪಂದದಿಂದ ವಾಪಸ್ಸು ಬರುವುದಾಗಿ ಟ್ರಂಪ್ ತೆಗೆದು ಕೊಂಡ ನಿರ್ಧಾರವು ಹವಾಮಾನ ಬದಲಾವಣೆ ವೈಪರೀತ್ಯಗಳನ್ನು ತಡೆಯುವ ಪ್ರಯತ್ನಕ್ಕೆ ಅಡ್ಡಿಯುಂಟು ಮಾಡಿದೆ ಎನ್ನಬಹುದು.

ಗ್ರೇಟಾ ಥುನ್ಬರ್ಗ್

ಒಬ್ಬ 16 ವರ್ಷ ದ ಸ್ವೀಡನಿನ ಶಾಲಾ ಬಾಲಕಿ, ಕಳೆದ 2018 ರ ಆಗಸ್ಟ್ ನಲ್ಲಿ ಒಂದು ದಿನ ಶಾಲೆಗೆ ಹೋಗದೆ ಸ್ವೀಡನಿನ ಸಂಸತ್ತಿನ ಮುಂದೆ ಒಬ್ಬಳೇ ಕುಳಿತು ಪ್ರತಿಭಟನೆ ಮಾಡಿದಳು. ಅಂದಿನಿಂದ ಇಂದಿನವರೆಗೆ ಪ್ರತಿ ಶುಕ್ರವಾರ ಈ ಪ್ರತಿಭಟನೆ ಮುಂದುವರೆಸಿದ್ದಾಳೆ. ಕಾರಣ ಹವಾಮಾನ ವೈಪರೀತ್ಯಗಳಿಂದ ಜಗತ್ತಿನಲ್ಲಿ ಹಾಗುತ್ತಿರುವ ತಾಪಮಾನದ ಬದಲಾವಣೆಗಳು, ಕಾಡುಗಿಚ್ಚು, ಪ್ರವಾಹ, ಸುನಾಮಿ, ಭೂಕಂಪಗಳು, ಸಮುದ್ರ ಉಕ್ಕಿ ಹರಿಯುವುದು, ಕೈಗಾರಿಕಾ ಕಾರ್ಬನ್ ಉಗುಳುವಿಕೆ ಇವೆಲ್ಲಾ ಈ ಬಾಲಕಿಯನ್ನು ಕಾಡುತ್ತಿದ್ದವು. ಮೊದಲ ಬಾರಿ ಇಂತಹ 'ಹವಾಮಾನ ಬದಲಾವಣೆಯ ವಿರುದ್ಧ ಶಾಲಾ ಮುಷ್ಕರ'ವನ್ನು ಅಮೇರಿಕಾದ ಫ್ಲೋರಿಡಾ ಪ್ರಾಂತ್ಯದ ಪಾರ್ಕ್ ಶಾಲಾ ಮಕ್ಕಳು ಮಾಡಿದ್ದು ಅವಳಿಗೆ ಸ್ಫೂರ್ತಿಯಾಗಿತ್ತು. ಅವಳದು ಬಹಳ ಕಾಲ ಒಂಟಿ ಪ್ರತಿಭಟನೆಯಾಗಿದ್ದರೂ, ಆನಂತರ ಅವಳ ಹೋರಾಟಕ್ಕೆ ಮನ್ನಣೆ ಸಿಕ್ಕಿ, ಸಾವಿರಾರು ಶಾಲಾ ಮಕ್ಕಳು ಕೂಡಾ ಇವಳ ಕಾಳಜಿಯ ಹಿಂದಿರುವ ವಾಸ್ತವಾಂಶವನ್ನು ಅರಿತುಕೊಂಡು ಹೋರಾಟಕ್ಕೆ ಬೆಂಬಲಿಸಿದರು. ಇದು ಜಾಗತಿಕ ಗಮನ ಸೆಳೆಯಿತು. ಈಗ 'ಹವಾಮಾನ ಬದಲಾವಣೆಯ ವಿರುದ್ಧ ಶಾಲಾ ಮುಷ್ಕರ' ಹೆಸರಲ್ಲಿ 71 ದೇಶಗಳಲ್ಲಿ ಸ್ಥಳಗಳಲ್ಲಿ 700 ಪ್ರತಿಭಟನೆಗಳು ನಡೆಯುತ್ತಿವೆ.

ಕಳೆದ ವರ್ಷ ನಡೆದ ವಿಶ್ವ ವಾಣಿಜ್ಯ ಸಂಸ್ಥೆ (ವರ್ಲ್ಡ್ ಎಕಾನಾಮಿಕ್ ಫೋರಮ್) ನಲ್ಲಿ ಇವಳ ಹೋರಾಟ ಪ್ರತಿಧ್ವನಿಸಿತು. ಈ ಹಿನ್ನೆಲೆಯಲ್ಲಿ ಹೋರಾಟ ಜಗತ್ತಿನ ಇತರೆ ರಾಷ್ಟ್ರಗಳಿಗೂ ಹಬ್ಬಿತು. ಈ ಬಾಲಕಿ ನಡೆಸಿದ ಕೇವಲ 7 ತಿಂಗಳಲ್ಲಿ, ಇದರ ಪರಿಣಾಮ ಮಾರ್ಚ್ 15ರ ಮುಷ್ಕರದ ಯಶಸ್ಸಿನಲ್ಲಿ ಕಾಣಬಹುದು ಎಂದು ಪರಿಸರ ವಾದಿಗಳು ವಿಶ್ಲೇಷಣೆ ಮಾಡಿದ್ದಾರೆ. ಈ 7 ತಿಂಗಳುಗಳಲ್ಲಿ ಶಾಲಾ ವಿದ್ಯಾರ್ಥಿಗಳಲ್ಲಿ, ಈ ಬಗ್ಗೆ ಜನರಲ್ಲಿ ಅರಿವು ಮೂಡಿದ್ದು, ಸ್ವೀಡನ್ ಸೇರಿದಂತೆ ಹಲವು ಸಂಸದರು, ಸಚಿವರ ಮೇಲೆ ಒತ್ತಡ ಹೆಚ್ಚಿದೆ.

ಅಲೆಕ್ಸಾಂಡ್ರಿಯಾ ಓಕಾಸಿಯೊ ಕಾರ್ಟೇಜ್

ಅದೇ ರೀತಿಯಲ್ಲಿ, ಅಮೇರಿಕಾದಲ್ಲಿ ಕೂಡಾ, ಯುವ ನ್ಯೂಯಾರ್ಕ್ ಸಂಸತ್ತಿನ ಡೆಮಾಕ್ರಟಿಕ್ ಪ್ರತಿನಿಧಿ ಅಲೆಕ್ಸಾಂಡ್ರಿಯಾ ಓಕಾಸಿಯಾ ಕಾರ್ಟೆಜ್ ರವರು, ತಮ್ಮ "ಗ್ರೀನ್ ನ್ಯೂ ಡೀಲ್" (ಜಿ.ಎನ್.ಡಿ) ಸಂಘಟನೆಯ ಮೂಲಕ ನಡೆಸುತ್ತಿರುವ ಪ್ರಚಾರಾಂದೋಲನ ಮತ್ತು ಪ್ರಕ್ಷೋಭೆಗಳು ಜಗತ್ತಿನ ಗಮನ ಸೆಳೆಯುವಂತೆ ಮಾಡಿವೆ. ಮುಂದಿನ ಪೀಳಿಗೆ ತಾಪಮಾನದ ಏರಿಕೆಯಿಂದಾಗಿ ಬಳಲಬೇಕಾದ ಪರಿಸರದ ಪರಿಸ್ಥಿತಿಯ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಅವರ ಪ್ರಕಾರ ಬಂಡವಾಳಶಾಹಿ ಪದ್ಧತಿ ವಿಶ್ವ ಪರಿಸರ ಮಾಲಿನ್ಯಕ್ಕೆ ಅಪಾರ ಕೊಡುಗೆ ನೀಡುತ್ತದೆ. 2030ರ ಒಳಗೆ ತಾಪಮಾನವು 2.0 ಅ ಯನ್ನು ದಾಟಿದರೆ ಅಪಾಯಕಾರಿ. ಅದನ್ನು 1.5 ಅ ಯೊಳಗೆ ಹತೋಟಿಯಲ್ಲಿ ಇಟ್ಟುಕೊಳ್ಳಲು ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಎಚ್ಚರಿಕೆಯನ್ನು ವಹಿಸಬೇಕು. ಜೊತೆಗೆ ಬಂಡವಾಳಶಾಹಿಯ ಕೊಳ್ಳುಬಾಕತನ ನೀತಿಯನ್ನು ಎಲ್ಲರೂ ಕೈ ಬಿಡಬೇಕು. ಪರ್ಯಾಯ ನೀತಿಗಳ ಮೂಲಕ ವಿಶ್ವ ಪರಿಸರ ಮತ್ತು ಹವಾಮಾನ ಬದಲಾವಣೆಯ ವೈಪರೀತ್ಯಗಳನ್ನು ಹದ್ದು ಬಸ್ತಿನಲ್ಲಿ ಇಡಬೇಕು ಎಂಬ ಜಿ.ಎನ್.ಡಿ. ಯ ಆಶಯಗಳನ್ನು ಜಗತ್ತಿಗೆ ತಲುಪಿಸುತ್ತಿದ್ದಾರೆ

ನಮ್ಮ ಮುಂದಿನ ಭವಿಷ್ಯದ ಪೀಳಿಗೆಗಾಗಿ ವಿಶ್ವ ಪರಿಸರವನ್ನು ಸಂರಕ್ಷಣೆ ಮಾಡಲೇಬೇಕೆಂಬ ವಿಶ್ವಸಂಸ್ಥೆಯ ಹಾಗು ಪ್ಯಾರಿಸ್ ಒಪ್ಪಂದದ ಮೂಲ ಉದ್ದೇಶಗಳನ್ನು ವಿಶ್ವಕ್ಕೆ ಸಾರುತ್ತಾ, ಈ ಇಬ್ಬರು ಜಗತ್ತಿಗೆ ಬಂಡವಾಳಶಾಹಿ ಪದ್ದತಿಯನ್ನು ಕೊನೆಗಾಣಿಸಲು ಕರೆ ನೀಡಿದ್ದಾರೆ. ಹಾಗಾದರೆ ಕೊಳ್ಳುಬಾಕತನಕ್ಕೆ ತಡೆ ಒಡ್ಡಲು ಸಾಧ್ಯವೇ? ಸಾಧ್ಯವಿದೆ ಎನ್ನುತ್ತಾರೆ ಹೋರಾಟಗಾರರು.

ವೈಪರೀತ್ಯಗಳು ಕೊನೆಗೊಳ್ಳಬೇಕೆಂದರೆ ಬಂಡವಾಳಶಾಹಿ ಪದ್ಧತಿ ಅಂತ್ಯಗೊಳ್ಳಬೇಕು ಎಂದು, ಜಗತ್ತಿನಾದ್ಯಂತ ನಡೆಯುತ್ತಿರುವ ಪರಿಸರವಾದಿಗಳ ನಡುವೆ ಅಭಿಪ್ರಾಯ ಮೂಡಿಬರುತ್ತಿದೆ. ●

ಬ್ರೆಜಿಲ್ : ನೂರಾರು ಭೂರಹಿತ ಮಹಿಳೆಯರಿಂದ ಭೂಮಿ ವಶ

ಬ್ರೆಜಿಲ್ ನ 800 ಕ್ಕಿಂತಲೂ ಹೆಚ್ಚು ಭೂಮಿ ರಹಿತ ಮಹಿಳೆಯರು ತಮ್ಮ ಹೋರಾಟದ ಮೂಲಕ ಜೊವಾ ಥೀಕ್ಸೇರಾ ಫರಿಯಸ್ ಎಂಬ ಹೆಸರಿನ ಮಹಿಳಾಪೀಡಕನ ಕೃಷಿ ಕ್ಷೇತ್ರವನ್ನು ಮಾರ್ಚ್ 13ರಂದು ವಶಪಡಿಸಿಕೊಂಡಿದ್ದಾರೆ. ಇದು ಬ್ರೆಜಿಲ್ ಮತ್ತು ವಿಶ್ವದಾದ್ಯಂತ 1970 ರ ದಶಕದಲ್ಲಿ ಜೋವೋ ಹೆಸರಿನಲ್ಲಿ ಪ್ರಖ್ಯಾತನಾಗಿದ್ದ "ಮಧ್ಯಮ ಮತ್ತು ಅತೀಂದ್ರಿಯ ಶಸ್ತ್ರಚಿಕಿತ್ಸಕ"ನ 'ಡೊಮ್ ಇನ್ಯಾಸಿಯೊ' ಎಂಥ ಹೆಸರಿನ ಕೇಷಿಕ್ಷೇತ್ರ ಆಗಿತ್ತು. ಈ ಭೂಮಿಯು ಬ್ರೆಜಿಲ್ ನ ಗೊಯಾಸ್ನಾ ಗ್ರಾಮೀಣ ಪ್ರದೇಶದ ಅನಾಪೊಲಿಸ್‌ನಲ್ಲಿದೆ. ಈ ಭೂಮಿಯನ್ನು ವಶಪಡಿಸಿಕೊಳ್ಳುವಿಕೆಯ ಹೋರಾಟವನ್ನು ಬ್ರೆಜಿಲ್ ನಲ್ಲಿನ ಭೂರಹಿತ ಮಹಿಳೆಯರು ಪ್ರಯುಕ್ತ ಬ್ರೆಜಿಲ್‌ನ ರಾಷ್ಟ್ರೀಯ ಹೋರಾಟದ ಭಾಗವಾಗಿ ವಶಪಡಿಸಿಕೊಂಡಿದ್ದಾರೆ.

ಡಿಸೆಂಬರ್ 2018 ರಲ್ಲಿ ಈ ಜೋವೋ ಲೈಂಗಿಕ ದೌರ್ಜನ್ಯ ಮತ್ತು ಹಿಂಸೆ ಮಾಡಿದ ಆರೋಪಕ್ಕೆ ಒಳಗಾಗಿದ್ದನು. ಅಂದಿನಿಂದ ಸುಮಾರು 500 ಕ್ಕಿಂತ ಹೆಚ್ಚು ಮಹಿಳೆಯರು ಪೋಲಿಸರು ಮತ್ತು ಗೊಯಾಸ್ನಾ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಆಫೀಸ್ ನ ಮುಂದೆ ಬಂದು ದೂರು ಕೊಟ್ಟಿದ್ದಾರೆ. ಇಂತಹ ಬಹುತೇಕ ಲೈಂಗಿಕ ದೌರ್ಜನ್ಯದ ಘಟನೆಗಳು ಅಬಾಡಿಯಾನಿಯಾ- ಗೊಯಾಸ್ನಾ ದಲ್ಲಿ ರುವ ಇವನ "ಚಿಕಿತ್ಸಾ ಸೌಕರ್ಯ" ಕೊಠಡಿಯಲ್ಲಿ ನಡೆಸಲಾಗಿತ್ತು ಎಂಬ ಆರೋಪವನ್ನು ಮಾಡಲಾಗಿದೆ. 1980 ರಿಂದಲೂ ಇಂತಹ ಹಲವಾರು ದೂರುಗಳು ಇವನ ಮೇಲೆ ನೊಂದಾಣಿಯಾಗಿವೆ ಎಂಬುದು ಕಂಡು ಬಂದಿದೆ. ಆತನ ಮಗಳ ಮೇಲೂ ಸಹ ತನ್ನ 9–14 ವಯಸ್ಸಿನಲ್ಲಿ ಆತ ಅತ್ಯಾಚಾರವೆಸಗಿದ್ದು ಹೊರ ಬಂದಿದೆ.

ಪೋಲ್ಹಾ ಎಸ್.ಪಾವೊಲೊನ' ಎಂಬ ಪತ್ರಿಕೆ ನಡೆಸಿದ ತನಿಖೆಯ ಪ್ರಕಾರ, ಇವನು ಬೇರೆ ಬೇರೆ ಹೆಸರಿನಲ್ಲಿ ಎಂಬ ಹೆಸರಿನಲ್ಲಿ 27 ಭೂಪ್ರದೇಶಗಳಲ್ಲಿ ಜಮೀನು ಗಳನ್ನು ಹೊಂದಿರುವುದು ಬೆಳಕಿಗೆ ಬಂದಿದೆ. ಅವುಗಳಲ್ಲಿ 23 ನಗರ ಪ್ರದೇಶಗಳಲ್ಲಿ 19,725 ಚದರ ಮೀಟರ್ ಗಳಷ್ಟು, ಗ್ರಾಮೀಣ ಪ್ರದೇಶಗಳಲ್ಲಿ 703 ಹೆಕ್ಟೇರ್ ಗಳಷ್ಟು ಭೂಮಿ ಹೊಂದಿದ್ದ. ಇದು ಸುಮಾರುಉ 985 ಪುಟ್ ಬಾಲ್ ಸ್ಟೇಡಿಯಂಗಳ ವಿಸ್ತಾರ ಹೊಂದಿದೆ. ಭೂರಹಿತ ಗ್ರಾಮೀಣ ಮಹಿಳಾ ಕಾರ್ಮಿಕರ ಚಳುವಳಿ (ಎಂ.ಎಸ್.ಟಿ) ಮತ್ತು ಪೀಪಲ್ಸ್ ಪೆಸೆಂಟ್ಸ್ ಮೂವ್ಮೆಂಟ್ (ಎಂ.ಸಿ.ಪಿ.) ಮಹಿಳೆಯರ ಒಗ್ಗಟ್ಟಿನ ಪ್ರತಿಭಟನೆ ಯಿಂದಾಗಿ ಇವನ ಎಲ್ಲಾ ಭೂಮಿಗಳನ್ನು ವಶ ಪಡಿಸಿಕೊಳ್ಳಲು ಸಾಧ್ಯವಾಗಿದೆ. ವಿಶ್ವಸಂಸ್ಥೆಯ ಒಂದು ವರದಿಯಂತೆ, ಮಹಿಳೆಯರ ದುರುಪಯೋಗ, ಅತ್ಯಾಚಾರ, ದೌರ್ಜನ್ಯ ಮತ್ತು ಹಿಂಸಾತ್ಮಕ ಸಾವುಗಳಲ್ಲಿ ಜಗತ್ತಿನಲ್ಲಿಯೇ 5ನೇ ಸ್ಥಾನ ದಲ್ಲಿರುವ ಬ್ರೆಜಿಲ್ ನಲ್ಲಿ 'ನಾವುಗಳು ಎಲ್ಲರಿಗಾಗಿ ಹೋರಾಡುತ್ತೇವೆ' ಎಂಬ ಛಲ ಎಂ.ಎಸ್.ಟಿ ಮಹಿಳಾ ಹೋರಾಟಗಾರ್ತಿಯರಲ್ಲಿದೆ.

ಪ್ರಸ್ತುತ ಬೋಲ್ಸೋನಾರೊ ಸರ್ಕಾರದ ಆಡಳಿತದಲ್ಲಿ ಭೂಮಿಯು ಕೆಲವರ ಕೈವಶವಾಗಿವೆ. ಎಲ್ಲ ಕಾನೂನುಗಳನ್ನು ಅವರ ಪರ ಮಾಡಲಾಗಿದೆ. ಇದರಿಂದ ಅಸಮಾನತೆಯು ಹೆಚ್ಚಳ ಕೊಳ್ಳುತ್ತದೆ. ಪ್ರಮುಖವಾಗಿ ಮಹಿಳೆಯರನ್ನು ಹಿಂಸಿಸಲಾಗುತ್ತಿದೆ. ಪುರುಷತ್ವ ಮತ್ತು ಪಿತೃ ಪ್ರಭುತ್ವ ತಾಂಡವವಾಡುತ್ತಿದೆ. ರಿಯೊ ಡಿ ಜನೈರೊ ಕೌನ್ಸಿಲ್ ಮಹಿಳೆ ಮೇರಿಯಾಲ್ ಫ್ರಾಂಕೊ ಹತ್ಯೆಯಾಗಿ ಸುಮಾರು ಒಂದು ವರ್ಷವಾದ ನಂತರವೂ ಅವರ ಕೊಲೆಗಾರರ ಪತೆಯಾಗಿಲ್ಲ. ಲೈಂಗಿಕ ಅಕ್ರಮಣಕೋರನ ಭೂಮಿಯನ್ನು ವಶ ಪಡಿಸಿಕೊಳ್ಳಲಾಗಿದ್ದು, ನಾವೆಲ್ಲರೂ ಇನ್ನು ಮುಂದೆಯು ಮಹಿಳೆಯರ ಜೀವಕ್ಕಾಗಿ, ಅವರ ಹಕ್ಕುಗಳಿಗಾಗಿ ಹೋರಾಡುತ್ತೇವೆ ಎಂದು ಉತ್ಸಾಹದಿಂದ ಹೇಳಿಕೆ ನೀಡಿದ್ದಾರೆ. ●



JANASHAKTHI KANNADA VARA PATRIKE MARCH 25-31, 2019 Price: Rs. 10/- Date of Publication: 22 MARCH 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಬಂಡಾಯ ಸಾಹಿತ್ಯ ಸಂಘಟನೆಯಿಂದ ಸೈದ್ಧಾಂತಿಕ ಅನುಸಂಧಾನ

ಆರ್.ಜಿ. ಹಳ್ಳಿ ನಾಗರಾಜ

ಬಂಡಾಯ ಸಾಹಿತ್ಯ ಸಂಘಟನೆಗೆ ನಲವತ್ತು ವರ್ಷ ತುಂಬಿದ ಸಂದರ್ಭ ಇದೇ ಮಾರ್ಚ್ 9–10 ರಂದು ಎರಡು ದಿನಗಳ 'ಸೈದ್ಧಾಂತಿಕ ಅನುಸಂಧಾನ' ಕುರಿತ ಕಾರ್ಯಾಗಾರ ಬೆಳಗಾವಿಯಲ್ಲಿ ಯಶಸ್ವಿಯಾಗಿ ಯಶಸ್ವಿಯಾಗಿ ನಡೆಯಿತು. ಮಾರ್ಕ್ಸಿಸಂ, ಸಮಾಜವಾದ, ಗಾಂಧಿವಾದ, ಅಂಬೇಡ್ಕರ್‌ವಾದ, ಸ್ತ್ರೀವಾದ, ವಿಚಾರವಾದಗಳ ಕುರಿತು ವಿದ್ವಾಂಸರು ಮೌಖಿಕ ವಿಚಾರ ಮಂಡಿಸಿದರು. ವಿದ್ಯಾರ್ಥಿಗಳು, ಯುವ ಜನಾಂಗ ಉತ್ಸಾಹದಿಂದ ಭಾಗವಹಿಸಿದ್ದರು. ಇದೊಂದು ಸಾರ್ಥಕ ಕಾರ್ಯಗಾರ. ಈ ಹಿನ್ನೆಲೆಯಲ್ಲಿ ಬಂಡಾಯ ಸಾಹಿತ್ಯ ಹಾಗೂ ಕಾರ್ಯಗಾರದ ಬಗ್ಗೆ ಒಂದು ಒಳನೋಟ ಇಲ್ಲಿದೆ.

'ಖಡ್ಗವಾಗಲಿ ಕಾವ್ಯ; ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎಂಭ ಘೋಷವಾಕ್ಯದಿಂದ 1979 ರ ಮಾರ್ಚ್ 10–11 ರಂದು ಬೆಂಗಳೂರಿನ ದೇವಾಂಗ ಛತ್ರದಲ್ಲಿ ಆರಂಭವಾದ ಬಂಡಾಯ ಸಾಹಿತ್ಯ ಸಂಘಟನೆಗೆ ಈಗ ನಲವತ್ತು ತುಂಬಿದ ಸಂಭ್ರಮ. ಪ್ರಗತಿಪರ ಮತ್ತು ಸೈದ್ಧಾಂತಿಕ ವಿಚಾರಗಳನ್ನು ತನ್ನೊಳಗೆ ಇಟ್ಟುಕೊಂಡ ಸಂಘಟನೆಯಲ್ಲಿ ಮಾರ್ಕ್ಸ್‌ವಾದ, ಸಮಾಜವಾದ, ಗಾಂಧಿವಾದ, ಅಂಬೇಡ್ಕರ್‌ವಾದ ಮೊದಲಾದ ಸಿದ್ಧಾಂತಗಳು ಮಿಳಿತವಾಗಿವೆ.

ಸಾಮಾಜಿಕವಾಗಿ ಅಸಮಾನತೆ, ತಾರತಮ್ಯ, ಮೇಲುಕೀಳು ಇರುವಂತೆ ಸಾಹಿತ್ಯ ಸೃಷ್ಠಿಯಲ್ಲೂ ಇಂಥ ವಿಚಾರಗಳ ಮೇಲ್ಗೈಯನ್ನು ಬಂಡಾಯ ಸಾಹಿತ್ಯ ಸಂಘಟನೆ ತಾತ್ವಿಕವಾಗಿ ಪ್ರಶ್ನಿಸಿತು. ಇದನ್ನು ಕನ್ನಡ ಸಾಹಿತ್ಯ ಪರಂಪರೆಯ ವಿವೇಕದೊಂದಿಗೆ ಮಾನವೀಯ ನೆಲೆಗಟ್ಟಿನಲ್ಲಿ ಪರಮಾರ್ಶಿಸಲಾಗಿದೆ. ಛಿದ್ರಗೊಂಡ ಮನಸ್ಸುಗಳನ್ನು ಹಲವು ಸಿದ್ಧಾಂತಗಳ ಪ್ರತಿಪಾದಕರು ಪ್ರಗತಿಪರ ಆಶಯದ ಈ ವೇದಿಕೆಯಲ್ಲಿ ಗಟ್ಟಿಗೊಳಿಸುತ್ತ ಯುವ ಜನಾಂಗವನ್ನು ಪ್ರೇರೆಪಿಸಿರುವುದು ವಾಸ್ತವ. ಸಮಾನತೆಯ ಸಮಾಜ ನಿರ್ಮಾಣವನ್ನು ಸಾಹಿತ್ಯ ಮತ್ತು ಸಾಹಿತ್ಯೇತರ ಕ್ಷೇತ್ರದಲ್ಲೂ ಮಾಡಲಾಗಿದೆ. ಸಮಾಜಮುಖಿ ಹಾಗೂ ಪ್ರಗತಿಪರ ಆಶಯದ ಸಾಹಿತ್ಯ ಸೃಷ್ಟಿಯ ಜೊತೆಗೆ ಸಾಮಾಜಿಕ ಚಳವಳಿಯ ಭಾಗವಾಗಿಯೂ ಬಂಡಾಯ ಸಾಹಿತ್ಯ ಸಂಘಟನೆ ನಮ್ಮ ಬದುಕಿನ ಬಾಗವಾಗಿ ಹೆಜ್ಜೆ ಹಾಕುತ್ತಾ ನಡೆದಿದೆ. ಸಾಹಿತ್ಯ ಬರಹಕ್ಕೂ ಬದುಕಿಗೂ ಅಂತರ ಇಲ್ಲದೆ ಮಾನವೀಯತೆಯನ್ನು ಎತ್ತಿ ಹಿಡಿದದ್ದು ಬಂಡಾಯ ಸಾಹಿತ್ಯ.



ನಾಲ್ಕು ದಶಕಗಳ ಬಂಡಾಯದ ಹೆಜ್ಜೆ ಗುರುತಲ್ಲಿ ಹಲವು ಏಳು – ಬೀಳುಗಳಿವೆ. ಆರಂಭದ ಎರಡು ದಶಕ ಬಂಡಾಯ ಸಾಹಿತ್ಯ ಸಂಘಟನೆ ಉತ್ಸಾಹದಿಂದ ಪುಟ್ಟಿದೆದ್ದದ್ದು ನಿಜ. ಕ್ರಮೇಣ ಅದರ ಓಟ ನಿಧಾನವಾಗಿ ಬಂಡಾಯ ಆಶಯದ ಬರಹಗಳು ಸೃಷ್ಟಿಯಾದರೂ ವೇದಿಕೆ ಕಾರ್ಯಕ್ರಮಗಳಾಗಿ ಹೆಚ್ಚು ಕ್ರಿಯಾಶೀಲವಾಗಿರಲಿಲ್ಲ ಎಂಬ ಪ್ರಜ್ಞೆಯನ್ನು ನಾವು ಇರಿಸಿಕೊಂಡಿದ್ದೇವೆ. ನಿರಂತರ ಬಂಡಾಯ ಕಾರ್ಯಕ್ರಮಗಳು ನಡೆಯದಿದ್ದರೂ ಬಂಡಾಯದ ಆಶಯಗಳ ಸಾಹಿತ್ಯ ಹೊಸ ಜನಾಂಗವನ್ನು ಪ್ರೇರೇಪಿಸಿತ್ತು. ಆರಂಭದಲ್ಲಿ ಆಕ್ರೋಶ, ಆವೇಶದಿಂದ ಬರಹ; ಬರ ಬರುತ್ತ ಲೋಕಾನುಭವದ ಹಿನ್ನೆಲೆಯಲ್ಲಿ ಪಕ್ವವಾಗುತ್ತ ಜನರನ್ನು ಎಚ್ಚರಿಸುವ ಕೆಲಸ ಮಾಡಿತು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬಂಡಾಯವನ್ನು ಹೊರತುಪಡಿಸಿ ಮಾತಾಡದ ಸ್ಥಿತಿ ನಿರ್ಮಾಣವಾಗಲು ನಮ್ಮ ಸೈದ್ಧಾಂತಿಕ ವಿಚಾರಗಳೂ ಕಾರಣ. 12 ನೇ ಶತಮಾನದ ವಚನ ಸಾಹಿತ್ಯ ಚಳವಳಿಯಲ್ಲಿ ಮೇಲುಕೀಳು ಇರಲಿಲ್ಲ. ಅದೊಂದು ಸಮಾನತೆಯ ಯುಗ. ಕೆಳವರ್ಗ – ಮೇಲ್ವರ್ಗ, ಜಾತಿ, ವರ್ಣಗಳ ತಾರತಮ್ಯ ಇಲ್ಲದೆ ಎಲ್ಲರೂ ಸಮಾನರು ಎಂಬುದನ್ನು ಪ್ರತಿಪಾದಿಸಲಾಗಿತ್ತು. ಅಂಥ ಸಮಾನತೆಯನ್ನು ನಾವು ಇಂದು ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಕಾಣುತ್ತಿದ್ದೇವೆ. ಇಲ್ಲಿ ಎಲ್ಲರೂ ಸಮಾನರು. ಸಮಾಜ ಬದಲಾವಣೆಯ ಸಾಹಿತ್ಯ ಸೃಷ್ಠಿ, ಆರೋಗ್ಯಕರ ಸಮಾಜ ನಿರ್ಮಾಣ ಇದರ ಉದ್ದೇಶ. ಸಾಮಾಜಿಕ ಅಸಮಾನತೆ ತೊಡೆದು ಹಾಕಿ ಸಮಸಮ ಸಮಾಜ ನಿರ್ಮಾಣ ಮಾಡಿ ಸ್ವಚ್ಛಂದದ ಮನಸ್ಸುಗಳನ್ನು ಬೆಸೆಯುವುದು ಬಂಡಾಯದ ಆಶಯವಾದ್ದರಿಂದ ಇದೊಂದು ವಿಶಾಲ ವೇದಿಕೆಯಾಗಿ ಜೀವಂತವಾಗಿರಲು ಸಾಧ್ಯವಾಗಿದೆ. ಹೀಗಾಗಿ ಬಂಡಾಯ ಅನ್ನುವುದು ಒಂದು ಮನೋಧರ್ಮವಾಗಿ, ಮಾನವೀಯತೆ ಒಂದು ಮೌಲ್ಯವಾಗಿ ಗುರ್ತಿಸಲ್ಪಟ್ಟಿತು.

ಬಂಡಾಯ ಸಾಹಿತ್ಯ ಸಂಘಟನೆಯ ಹೊರಗಿರುವ ಅನೇಕ ಬರಹಗಾರರು, ಪ್ರಗತಿಪರ ಸಂಘಟನೆಗಳ ವಿಚಾರವಂತರು, ಹೋರಾಟಗಾರರು ಬಂಡಾಯದ ಜೊತೆಗೆ ಆತ್ಮೀಯ ಒಡನಾಟ ಇಟ್ಟುಕೊಂಡಿದ್ದಾರೆ. ಬಂಡಾಯ ಅಂಥ ಸಂಗಾತಿಗಳ ಸಹಕಾರದಿಂದ ಬೆಂಗಳೂರು ಒಳಗೊಂಡಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಸಕ್ರಿಯವಾಗಿದ್ದು ಬಂಡಾಯದ ಪುನಶ್ಚೇತನದ ಸಮಾವೇಶ, ಕಾರ್ಯಗಾರ, ಶಿಭಿರ, ವಿಚಾರ ಸಂಕಿರಣಗಳನ್ನು ಏರ್ಪಡಿಸಿದೆ.

ಕಳೆದ ವರ್ಷದ ಮಾರ್ಚ್ 11 ರಂದು ಬಂಡಾಯ ಸಾಹಿತ್ಯ ಸಂಘಟನೆ ನಲವತ್ತು ವರ್ಷಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಒಂದು ದಿನದ ಕಾರ್ಯಕ್ರಮ ಏರ್ಪಡಿಸಿತ್ತು. ಈ ಕಾರ್ಯಕ್ರಮದಲ್ಲಿ ನಲವತ್ತು ವರ್ಷಗಳಿಂದ ಬಂಡಾಯದ ಜೊತೆ ಸಂಬಂಧ ಹೊಂದಿದ ಹಿರಿಯ ಬಂಡಾಯ ಬರಹಗಾರರು, ಹೋರಾಟಗಾರರು, ಆಸಕ್ತ ಕಿರಿಯ ಬರಹಗಾರರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ನಂತರ ತುಮಕೂರಿನಲ್ಲಿ ಎರಡು ದಿನ "ಸಮೂಹ ಮಾಧ್ಯಮ ಮತ್ತು ಬಂಡಾಯ ಪ್ರಜ್ಞೆ" ಎಂಬ ವಿಷಯದಡಿ ಕಾರ್ಯಾಗಾರ ಏರ್ಪಡಿಸಿತ್ತು. ಹೆಸರಾಂತ ಪತ್ರಕರ್ತ ಪಿ. ಸಾಯಿನಾಥ್ ಅವರು ಕಾರ್ಯಾಗಾರ ಉದ್ಘಾಟಿಸಿ ಕಾರ್ಪೊರೇಟ್ ಜಗತ್ತು ಮಾಧ್ಯಮಗಳನ್ನು ಹಿಡಿತದಲ್ಲಿಟ್ಟುಕೊಂಡಿರುವ ಬಗ್ಗೆ ಅನೇಕ ವಾಸ್ತವ ಘಟನೆಗಳಿಂದ ಗಮನ ಸೆಳೆದರು.

ಪುಟ 14 ಕ್ಕೆ



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**